بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّى عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY **BADAR** QADIAN KANNADA

ವರ್ಷ: 04

ಸಂಚಿಕೆ: 03

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**19 ಜನವರಿ 2023, 19 ಸುಲಹ್ 1402 ಹಿಜರಿ ಶಮ್ಸಿ, 26 ಜಮಾದಿ ಉಸ್ಸಾನಿ 1444 ಹಿಜರಿ ಖಮರಿ.**

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ

وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اِنَّمَا الْمُؤْمِنُوْنَ

الَّذِيْنَ اِذَا ذُكِرَ اللّٰهُ

وَجِلَتْ قُلُوْبُهُمْ

**(ಆಲ್-ಅನ್‌ಫಾಲ್: 03)**

ಅಂದರೆ: ನಿಜವಾದ ಸತ್ಯವಿಶ್ವಾಸಿಗಳು ಯಾರೆಂದರೆ, ಅಲ್ಲಾಹನ ಕುರಿತು ಹೇಳಲ್ಪಡುವಾಗ ಅವರ ಹೃದಯಗಳು ಭಯ ಕಂಪಿತವಾಗುತ್ತವೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಮಾರಾಟಗಾರ ಮತ್ತು ಖರೀದಿದಾರರು ಸತ್ಯವನ್ನು ಹೇಳಿದರೆ ಅವರ ಖರೀದಿ ಮತ್ತು ಮಾರಾಟದಲ್ಲಿ ಅನುಗ್ರಹವು ಇರುತ್ತದೆ

(2079) ಹಝ್ರತ್ ಹಕೀಮ್ ಬಿನ್ ಹಿಝಾಮ್(ರ) ಅವರು ವರದಿ ಮಾಡುತ್ತಾರೆ ಪ್ರವಾದಿ ಮುಹಮ್ಮದ್(ಸ)ರವರು ನುಡಿಯುತ್ತಾರೆ: ಮಾರಾಟಗಾರ ಮತ್ತು ಕೊಳ್ಳುವವರಿಬ್ಬರಿಗೂ ಅವರು ಬೇರ್ಪಡುವವರೆಗೆ (ಮಾರಾಟವನ್ನು ರದ್ದುಗೊಳಿಸುವ) ಅಧಿಕಾರವನ್ನು ಹೊಂದಿರುತ್ತಾರೆ ಅಥವಾ ಅವರು ಪ್ರತ್ಯೇಕಗೊಳ್ಳುವವರೆಗೆ ಎಂದು ಹೇಳಿದರು. ಅವರಿಬ್ಬರೂ ಸತ್ಯವಾಗಿ ವರ್ತಿಸಿದರೆ ಮತ್ತು ಪ್ರಾಮಾಣಿಕವಾಗಿ ಮಾತನಾಡಿದರೆ, ಅವರ ಕೊಳ್ಳುವಿಕೆ ಮತ್ತು ಮಾರಾಟದಲ್ಲಿ ಇಬ್ಬರೂ ಧನ್ಯರಾಗುತ್ತಾರೆ ಮತ್ತು ಇಬ್ಬರೂ ಮುಚ್ಚಿಟ್ಟು ಸುಳ್ಳು ಹೇಳಿದರೆ, ಅವರ ಕೊಳ್ಳುವಿಕೆ ಮತ್ತು ಮಾರಾಟದ ಅನುಗ್ರಹವು ಅಳಿಸಿಹೋಗುತ್ತದೆ.

### ಯಾರಾದರೂ ಆಹ್ವಾನಿಸದ ಅತಿಥಿಗಳೊಂದಿಗೆ ಬಂದರೆ

(2081) ಹಝ್ರತ್ ಅಬು ಮಸೂದ್(ರ) ಅವರು ವರದಿ ಮಾಡುತ್ತಾರೆ ಅವರು ಹೇಳಿದರು: ಓರ್ವ ಅನ್ಸಾರಿ ವ್ಯಕ್ತಿ ಬಂದರು, ಅವರ ಉಪನಾಮ ಅಬು ಶುಐಬ್ ಎಂದಿತ್ತು, ಅವನು ಕಟುಕನಾಗಿದ್ದ ತನ್ನ ಹುಡುಗರಲ್ಲಿ ಒಬ್ಬನನ್ನು ನನಗೆ ಐದು ಜನರಿಗೆ ಸಾಕಾಗುವಷ್ಟು ಆಹಾರವನ್ನು ತಯಾರಿಸಲು ಹೇಳಿದರು, ಏಕೆಂದರೆ ನಾನು ಪ್ರವಾದಿ(ಸ) ಅವರಿಗೆ ಅಹ್ವಾನಿಸಲು ಬಯಸುತ್ತೇನೆ..... ನನಗೆ ಅವರ(ಸ) ಮುಖದಲ್ಲಿ ಹಸಿವು ಕಂಡುಬಂದಿತು. ಹೀಗಾಗಿ ಅವರು ಆ ಎಲ್ಲಾ ಜನರನ್ನು ಅಹ್ವಾನಿಸಿದಾಗ ಅವರೊಂದಿಗೆ ಇನ್ನೋರ್ವ ವ್ಯಕ್ತಿಯೂ ಆಗಮಿಸಿದನು. ಅದಕ್ಕೆ ಪ್ರವಾದಿ(ಸ) ನುಡಿದರು ಇವನು ನಮ್ಮೊಂದಿಗೆ ಆಗಮಮಿಸಿದ್ದಾನೆ, ನೀವು ಬಯಸಿದರೆ ಅವನಿಗೆ ಅನುಮತಿಸಬಹುದು ಇಲ್ಲದಿದ್ದರೆ ನೀವು ಹಿಂತಿರುಗಲು ಸಿಳಿಸಿದರೆ, ಅವನು ಹಿಂತಿರುಗುತ್ತಾನೆ. ಅವರು ಇಲ್ಲ ನಾನು ಅವರಿಗೆ ಬರುವುದಕ್ಕೆ ಅನುಮತಿ ನೀಡುತ್ತೇನೆ ಎಂದು ಹೇಳಿದರು.

**(ಬುಖಾರಿ, ಸಂಪುಟ-4, ಕಿತಾಬ್ ಅಲ್-ಬಯು, 2008 ರಲ್ಲಿ ಪ್ರಕಟಿತ, ಖಾದಿಯಾನ್)**

## ನಾವು ಧರ್ಮಕ್ಕಾಗಿ ಮತ್ತು ಧರ್ಮಕ್ಕೋಸ್ಕರ ಬದುಕುತ್ತೇವೆ, ಆದ್ದರಿಂದ ನಮಗೆ ಧರ್ಮದ ಮಾರ್ಗದಲ್ಲಿ ಯಾವುದೇ ಅಡೆತಡೆ ಇರಬಾರದು

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

**ಹಯಾ (ನಾಚಿಕೆ):** ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ತೀವ್ರ ತಲೆನೋವು ಆಗುತ್ತಿತ್ತು. ಹತ್ತಿರದಲ್ಲಿಯೇ ಹೆಂಗಸರು, ಮಕ್ಕಳ ಗಲಾಟೆ ಇತ್ತು. ಮೌಲ್ವಿ ಅಬ್ದುಲ್ ಕರೀಂ ಸಾಹಿಬ್ ಅವರು ಹೇಳಿದರು ಹುಝೂರ್ ನಿಮಗೆ ಈ ಶಬ್ದಗಳಿಂದ ತೊಂದರೆ ಉಂಟಾಗುತ್ತಿಲ್ಲವೇ?

ಹುಝೂರ್ ಹೇಳಿದರು: "ಹೌದು, ಅವರು ನಿಶ್ಯಬ್ಧವಾಗಿದ್ದರೆ ಆರಾಮವಾಗುತ್ತದೆ."

ಮೌಲ್ವಿ ಸಾಹಿಬ್ ಕೇಳಿದರು, ಹಾಗಾದರೆ ಹುಝೂರ್ ತಾವು ಸುಮ್ಮನಿರಲು ಅವರಿಗೆ ಏಕೆ ಆದೇಶಿಸುವುದಿಲ್ಲ? ಅದಕ್ಕೆ ಹುಝೂರ್ ಅಲೈಹಿಸ್ಸಲಾಮ್ ಹೇಳಿದರು: "ನೀವು ಅವರಿಗೆ ಮೃದುವಾಗಿ ಹೇಳಿರಿ. ನಾನು ಹೇಳಲಾರೆ."

**ಚಶ್ಮ್ ಪೋಶಿ (ನಿರ್ಲಕ್ಷ):** ಸೇವಕಿಯೊಬ್ಬಳು ಮನೆಯಲ್ಲಿದ್ದ ಅಕ್ಕಿ ಕದ್ದು ಸಿಕ್ಕಿಬಿದ್ದಳು, ಮನೆಯವರೆಲ್ಲ ಆಕೆಯನ್ನು ದೂಷಿಸತೊಡಗಿದರು. ಅಷ್ಟರಲ್ಲಿ ಹುಝೂರ್ ಅಲೈಹಿಸ್ಸಲಾಮ್ ಅವರು ಕೂಡ ಆ ಕಡೆಯಿಂದ ಹಾದು ಹೋದರು. ಅವರಿಗೆ ಘಟನೆಯನ್ನು ವಿವರಿಸಿದಾಗ, ಹುಝೂರ್ ಅಲೈಹಿಸ್ಸಲಾಮ್ ಹೇಳಿದರು: "ಅವಳು ಬಡವಳಾಗಿದ್ದಾಳೆ ಅವಳಿಗೆ ಸ್ವಲ್ಪ ನೀಡಿರಿ ಮತ್ತು ಅಸಭ್ಯವಾಗಿ ವರ್ತಿಸಬೇಡ. ಸರ್ವಶಕ್ತನಾದ ಅಲ್ಲಾಹನ ಸತ್ತಾರಿ (ರಹಸ್ಯವಾಗಿಡುವ) ಗುಣವನ್ನು ಅನುಸರಿಸಿರಿ."

**ಖಿದ್ಮತೆ ಖಲ್ಕ್ (ಜನಸೇವೆ):** ರೈತ ಮಹಿಳೆಯರು ಒಂದು ದಿನ ಮಕ್ಕಳಿಗೆ ಔಷಧಿ ತೆಗೆದುಕೊಳ್ಳಲು ಬಂದಿದ್ದರು. ಹುಝೂರ್ ಅವರನ್ನು ನೋಡಿ ಔಷಧ ಕೊಡುವುದರಲ್ಲಿ ನಿರತರಾಗಿದ್ದರು. ಈ ಬಗ್ಗೆ ಮೌಲ್ವಿ ಅಬ್ದುಲ್ ಕರೀಂ ಸಾಹಿಬ್ ಅವರು ಹಝ್ರತ್, ಇದು ತುಂಬಾ ಕಷ್ಟಕರವಾದ ಕೆಲಸವಾಗಿದೆ ಮತ್ತು ಇದರಿಂದಾಗಿ ಹುಝೂರ್ ಅವರ ಅಮೂಲ್ಯ ಸಮಯ ವ್ಯರ್ಥವಾಗುತ್ತದೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಹುಝೂರ್ ಅಲೈಹಿಸ್ಸಲಾಮ್ ಹೇಳಿದರು:

"ಇದು ಸಹ ಧಾರ್ಮಿಕ ಕಾರ್ಯವಾಗಿದೆ. ಇವರು ಬಡವರು. ಇಲ್ಲಿ ಆಸ್ಪತ್ರೆ ಇಲ್ಲ. ಈ ಜನರಿಗೆ ನಾನು ಎಲ್ಲಾ ರೀತಿಯ ಇಂಗ್ಲಿಷ್ ಮತ್ತು ಯೂನಾನಿ ಔಷಧಿಗಳನ್ನು ತರೆಸಿಡುತ್ತೇನೆ, ಅದು ಸಮಯಕ್ಕೆ ಉಪಯುಕ್ತವಾಗಿದೆ. ಇದು ದೊಡ್ಡ ಪ್ರತಿಫಲದ ಕೆಲಸವಾಗಿದೆ. ಒಬ್ಬ ಮೂಮಿನ್ (ವಿಶ್ವಾಸಿ) ಈ ಕೆಲಸಗಳಲ್ಲಿ ಸೋಮಾರಿಯಾಗಿ ಮತ್ತು ಅಸಡ್ಡೆಯಾಗಿರಬಾರದು."

**ಸಮಯದ ಮೌಲ್ಯ:** ತೋರಿಕೆಯಲ್ಲಿ ಸಮಯವನ್ನು ವ್ಯರ್ಥ ಮಾಡುವುದು ಹುಝೂರ್ ಅಲೈಹಿಸ್ಸಲಾಮ್ ಅವರು ಇಷ್ಟಪಡುತ್ತಿರಲಿಲ್ಲ. ಈ ಬಗ್ಗೆ ಹುಝೂರ್ ಅಲೈಹಿಸ್ಸಲಾಮ್ ಅವರು ಹೇಳಿದರು: "ನನ್ನ ಪರಿಸ್ಥಿತಿಯು ಹೇಗಿದೆ ಎಂದರೆ ನನಗೆ ಮಲ ಮತ್ತು ಮೂತ್ರದಲ್ಲಿಯೂ ಸಹ ತುಂಬಾ ಸಮಯ ವ್ಯರ್ಥವಾಗುತ್ತದೆ ಎಂದು ನಾನು ವಿಷಾದಿಸುತ್ತೇನೆ, ಈ ಸಮಯವು ಸಹ ಧಾರ್ಮಿಕ ಕೆಲಸದಲ್ಲಿ ಬಳಕೆಯಾಗಬೇಕು. ಮತ್ತು ಅವರು ಹೇಳಿದರು: ಯಾವುದಾದರೂ ಅಗತ್ಯವಾದ ಧಾರ್ಮಿಕ ಕಾರ್ಯವನ್ನು ನಿರ್ವಹಿಸಬೇಕಾದಾಗ, ಆ ಕೆಲಸ ಮುಗಿಯುವವರೆಗೆ ನಾನು ತಿನ್ನುವುದನ್ನು, ಕುಡಿಯುವುದನ್ನು ಮತ್ತು ಮಲಗುವುದನ್ನು ನಾನು ನನ್ನ ಮೇಲೆ ನಿಷೇಧಿಸುತ್ತೇನೆ. ಅವರು ಹೇಳಿದರು: ನಾವು ಧರ್ಮಕ್ಕಾಗಿ ಮತ್ತು ಧರ್ಮಕ್ಕೋಸ್ಕರ ಬದುಕುತ್ತೇವೆ. ಆದ್ದರಿಂದ ನಮಗೆ ಧರ್ಮದ ಮಾರ್ಗದಲ್ಲಿ ಯಾವುದೇ ಅಡೆತಡೆಗಳು ಇರಬಾರದು."

**(ಮಲ್‌ಫೂಝಾತ್, ಸಂಪುಟ-1, ಪುಟ-419, ಪ್ರಕಟಿತ ಖಾದಿಯಾನ್ 2018)**

### ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:**

ನಾನು ಯಾವಾಗಲೂ ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್(ಸ) (ಸಾವಿರ ಸಾವಿರ ಇಷ್ಟಾಶೀರ್ವಾದಗಳೂ ಶಾಂತಿಯೂ ಅವರ ಮೇಲೆ ಸುರಿಯಲ್ಪಡಲಿ) ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು! ಅವರ ಉನ್ನತಸ್ಥಾನದ ಕೊನೆ ಎಲ್ಲಿದೆಯೆಂದು ತಿಳಿಯಲು ಸಾಧ್ಯವಿಲ್ಲ. ಅವರ ಪವಿತ್ರ ಪ್ರಭಾವದ ಅಂದಾಜು ಮಾಡುವುದು ಸಹ ಮನುಷ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಅವರ ಸ್ಥಾನಮಾನಗಳನ್ನು ಗುರುತಿಸಬೇಕಾದ ರೀತಿಯಲ್ಲಿ ಗುರುತಿಸಲಾಗಿಲ್ಲ ಎಂಬುದು ದುಃಖಕರವಾದ ಸಂಗತಿಯಾಗಿದೆ. ಏಕಾದೇವಾರಾಧನೆ ಲೋಕದಿಂದ ಕಣ್ಮರೆಯಾಗಿದ್ದಾಗ ಅದನ್ನು ಮರಳಿ ತಂದ ಒಬ್ಬನೇ ಒಬ್ಬ ಪಹಿಲ್ವಾನ್ ಅವರೇ ಆಗಿದ್ದಾರೆ. ಅವರು ದೇವನೊಂದಿಗೆ ಅತ್ಯಂತ ಉನ್ನತ ಮಟ್ಟದ ಪ್ರೀತಿಯನ್ನು ಹೊಂದಿದ್ದರು. ಮಾನವರ ಹಿತಕಾಂಕ್ಷೆಯಲ್ಲಿ ಅತ್ಯುನ್ನತ ಮಟ್ಟವನ್ನು ತಲಪಿ ಅವರ ಜೀವ ಕರಗಿತು. ದೇವನಿಗೆ ಅವರ ಹೃದಯದ ರಹಸ್ಯ ತಿಳಿದಿದ್ದುದರಿಂದ ಅವರಿಗೆ ಎಲ್ಲ ಪ್ರವಾದಿಗಳ ಮೇಲೆಯೂ (ಅವರ) ಹಿಂದಿನ ಮತ್ತು ಅನಂತರದ ಎಲ್ಲರ ಮೇಲೆಯೂ ಅವನು ಶ್ರೇಷ್ಠತೆಯನ್ನು ಅನುಗ್ರಹಿಸಿದನು. ಅವರ ಅಭಿಲಾಷೆಗಳನ್ನು ಅವರ ಜೀವಿತದಲ್ಲಿಯೇ ಅವನು ಈಡೇರಿಸಿಕೊಟ್ಟನು. *(ಹಖೀಖತುಲ್ ವಹ್ಯ್; ರೂಹಾನಿ ಖಝಾಯಿನ್ ಸಂಪುಟ 22, ಪುಟ 118 – 119)*

# ಖುತ್‌ಬ ಜುಮುಅ

**ಅವರಿಬ್ಬರ ಸತ್ಯಸಂಧತೆ ಮತ್ತು ನಿಷ್ಠೆಯ ವೈಭವ ಎಷ್ಟು ಉನ್ನತವಾಗಿತ್ತು! ಇಬ್ಬರೂ ಎಷ್ಟು ಅನುಗ್ರಹೀತ ಖಬರಿನಲ್ಲಿ ದಫನ್ ಆದರು ಎಂದರೆ, ಮೂಸಾ(ಅ) ಮತ್ತು ಈಸಾ(ಅ) ಜೀವಂತರಾಗಿರುತ್ತಿದ್ದರೆ, ನೂರುಪಟ್ಟು ಅಭಿಲಾಷೆಯೊಂದಿಗೆ ಅಲ್ಲಿ ದಫನ್ ಆಗಲು ಬಯಸುತ್ತಿದ್ದರು.**

**ಮೊದಲ ಖಲೀಫರ ಸ್ಮರಣೆಯು ಮುಸ್ಲಿಮರಲ್ಲಿ ಯಾವಾಗಲೂ ಅವರು ಓರ್ವ ಪರಿಪೂರ್ಣ ನಿಷ್ಠಾವಂತ ವ್ಯಕ್ತಿ, ಸಂತೋಷ ಮತ್ತು ದಯೆಯ ವ್ಯಕ್ತಿತ್ವದ ರೂಪದಲ್ಲಿ ಜೀವಂತವಾಗಿದೆ. ಮತ್ತು ತೀವ್ರ ಬಿರುಗಾಳಿಯೂ ಸಹ ಅವರ ಸ್ಥಿರಚಿತ್ತತೆಯನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ.**

**ಹಝ್ರತ್ ಪೈಗಂಬರ್(ಸ) ನಿಧನರಾದಾಗ ಅಬೂಬಕರ್(ರ) ಖಲೀಫ ಮತ್ತು ಉತ್ತರಾಧಿಕಾರಿಯಾದರು. ಪರ್ವತವನ್ನು ಕೂಡ ಅಲುಗಾಡಿಸುವ ದೃಢವಿಶ್ವಾಸದೊಂದಿಗೆ ಅವರ ಸರಳತೆ ಮತ್ತು ವಿವೇಕದಿಂದ 3 ಅಥವಾ 4 ಸಾವಿರ ಅರಬರನ್ನು ಒಳಗೊಂಡ ಸಣ್ಣ ಸೈನ್ಯದೊಂದಿಗೆ ಪೂರ್ತಿ ಲೋಕವನ್ನು ವಿಧೇಯಗೊಳಿಸುವ ಕೆಲಸವನ್ನು ಶುರುಮಾಡಿದರು.**

**ಹಝ್ರತ್ ಅಬೂಬಕರ್(ರ) ಕೂಡ ರಾಜರಾದರು. ಆದರೆ ಅವರಲ್ಲಿ ವಿನಮ್ರ ಭಾವ ಇತ್ತು ಮತ್ತು ಅವರು ವಿಧೇಯರಾಗಿದ್ದರು. ಜನರ ಸೇವೆ ಮಾಡಲು ಅಲ್ಲಾಹನು ನನ್ನನ್ನು ನೇಮಿಸಿದ್ದಾನೆ ಎಂದು ಅವರು ಹೇಳುತ್ತಿದ್ದರು. ಮತ್ತು ಸೇವೆಗಾಗಿ ನನಗೆ ಸಿಗುವ ಸಮಯವೂ ಅಲ್ಲಾಹನ ಕಡೆಯಿಂದ ನನ್ನ ಮೇಲೆ ಕರುಣೆಯಾಗಿದೆ.**

**ಹಝ್ರತ್ ಅಬೂಬಕರ್(ರ) ಮುಹಮ್ಮದ್ ರಸೂಲುಲ್ಲಾಹ್(ಸ)ರ ಮನೆಯ ಸೇವಕರಾಗಿದ್ದರು. ಯಾರು ಮುಹಮ್ಮದ್(ಸ)ರ ಮನೆಯ ಸೇವಕರಾಗಿರುವರೋ ಅವರ ಪ್ರತಿಯೊಂದು ವಸ್ತು ನಮಗೆ ಇಷ್ಟವಾಗುತ್ತದೆ. ಈಗ ಯಾವನೇ ವ್ಯಕ್ತಿಗೆ ಆ ಗೌರವಭಾವವನ್ನು ನಮ್ಮ ಹೃದಯಗಳಿಂದ ಅಳಿಸಿ ಹಾಕಲು ಸಾಧ್ಯವಲ್ಲ.**
**ಪೈಗಂಬರ್(ಸ) ಅವರನ್ನು ಅವಮಾನಿಸುತ್ತಿದ್ದಾರೆ ಎಂದು ನಮ್ಮ ಮೇಲೆ ಆರೋಪಿಸುತ್ತಾರೆ, ಆದರೆ ನಮ್ಮ ಆಲೋಚನೆಗಳು ಇದಾಗಿವೆ.**

**ರಸೂಲುಲ್ಲಾಹ್(ಸ)ರ ಪರಿಶುದ್ಧ ಬೋಧನೆಗಳು ಅದನ್ನು ತಕ್ಷಣವೇ ಪ್ರಭಾವಿತಗೊಳಿಸಿ ಬೆಳಗಿಸಿತು. ಅವರು ಹಝ್ರತ್ ಪೈಗಂಬರ್(ಸ)ರೊಂದಿಗೆ ಯಾವುದೇ ಚರ್ಚೆ ನಡೆಸಲಿಲ್ಲ, ಯಾವುದೇ ಕುರುಹು ಮತ್ತು ದೃಷ್ಟಾಂತವನ್ನು ಬೇಡಲಿಲ್ಲ. ಆಲಿಸಿದ ಕೂಡಲೇ, ನೀವು ಪ್ರವಾದಿತ್ವ ವಾದವನ್ನು ಮಾಡಿದ್ದೀರಾ ಎಂದು ಮಾತ್ರ ಕೇಳಿದರು. ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದಾಗ, ಅವರು ಹೀಗೆ ಹೇಳಿದರು: ನಾನು ಮೊತ್ತಮೊದಲಾಗಿ ನಂಬುತ್ತೇನೆ ಎಂಬುವುದಕ್ಕೆ ನೀವು ಸಾಕ್ಷಿಯಾಗಿರಿ**

## ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02–12–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

اِيَّاكَ نَعْبُدُ وَاِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ ۔

ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಸ್ಥಾನಮಾನಗಳು ಮತ್ತು ಗುಣವೈಶಿಷ್ಟ್ಯಗಳ ಪ್ರಸ್ತಾಪ ನಡೆಯುತ್ತಿತ್ತು. ಈ ಸಂಬಂಧವಾಗಿ, ಅವರು ಜನರಲ್ಲಿ ಅತ್ಯುತ್ತಮ ಮತ್ತು ಅತಿ ಪ್ರಿಯರಾಗಿದ್ದರು ಎಂಬುದರ ಬಗ್ಗೆ ಬರೆಯಲಾಗಿದೆ. ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ನಾವು ಒಬ್ಬರನ್ನು ಮತ್ತೊಬ್ಬರಿಗಿಂತ ಶ್ರೇಷ್ಠರೆಂದು ಗಣಿಸುತ್ತಿದ್ದೆವು. ಯಾರು ಅತ್ಯುತ್ತಮರು ಎಂದು ಹೋಲಿಕೆ ನಡೆಸುತ್ತಿದ್ದೆವು. ಹಝ್ರತ್ ಅಬೂಬಕರ್(ರ)ರನ್ನು ಎಲ್ಲರಿಗಿಂತ ಉತ್ತಮರೆಂದು ಭಾವಿಸುತ್ತಿದ್ದೆವು. ಅನಂತರ ಹಝ್ರತ್ ಉಮರ್ ಬಿನ್ ಖತ್ತಾಬ್(ರ), ಅನಂತರ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ)ರನ್ನು ಉತ್ತಮರೆಂದು ಭಾವಿಸುತ್ತಿದ್ದೆವು. (ಸಹೀಹ್ ಬುಖಾರಿ, ಕಿತಾಬ್ ಫಝಾಎಲ್ ಅಸ್ಹಾಬುನ್ನಬಿ(ಸ), ಹದೀಸ್–3655)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಹಝ್ರತ್ ಅಬೂಬಕರ್(ರ)ರನ್ನು ಸಂಬೋಧಿಸುತ್ತಾ ಹೀಗೆ ಹೇಳಿದರು: ಹಝ್ರತ್ ಪೈಗಂಬರ್(ಸ)ರ ನಂತರ ಅತ್ಯಂತ ಶ್ರೇಷ್ಠರಾಗಿರುವವರೇ,. ಇದನ್ನು ಆಲಿಸಿದಾಗ ಹಝ್ರತ್ ಅಬೂಬಕರ್(ರ) ಹೇಳಿದರು: ನೀವು ಹಾಗೆ ಹೇಳುತ್ತಿದ್ದೀರಿ ಎಂದಾದರೆ, ನಾನಂತು ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ಕೇಳಿದ್ದೇನೆ: ಉಮರ್‌ಗಿಂತ ಉತ್ತಮರಾದ ಯಾವುದೇ ವ್ಯಕ್ತಿಯ ಮೇಲೆ ಸೂರ್ಯನು ಉದಯಿಸಿಲ್ಲ. (ಸುನನ್ ಅತ್ತಿರ್‌ಮಿಝೀ, ಕಿತಾಬುಲ್ ಮನಾಖಿಬ್, ಹದೀಸ್–3684) ಎಂದರೆ ಹಝ್ರತ್ ಅಬೂಬಕರ್(ರ) ಬೇಗನೇ ವಿನಯವನ್ನು ಅವಲಂಬಿಸಿದರು.

ಅಬ್ದುಲ್ಲಾಹ್ ಬಿನ್ ಶಫೀಖ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ)ರ ಸಹಾಬಿಯರಲ್ಲಿ ಪ್ರವಾದಿಗೆ ಅತ್ಯಂತ ಪ್ರಿಯ ಯಾರಾಗಿದ್ದರು ಎಂದು ನಾನು ಹಝ್ರತ್ ಆಯಿಶ(ರ)ರೊಡನೆ ಕೇಳಿದೆ. ಅವರು ಹೇಳಿದರು: ಹಝ್ರತ್ ಅಬೂಬಕರ್, ಅನಂತರ ಯಾರೆಂದು ನಾನು ಕೇಳಿದೆ. ಹಝ್ರತ್ ಉಮರ್ ಎಂದು ಅವರು ಹೇಳಿದರು. ಅನಂತರ ಯಾರೆಂದು ನಾನು ಕೇಳಿದೆ. ಹಝ್ರತ್ ಅಬೂಉಬೈದ ಬಿನ್ ಜರ್ರಾಹ್ ಎಂದು ಅವರು ಹೇಳಿದರು. ಅನಂತರ ಯಾರೆಂದು ನಾನು ಕೇಳಿದೆ ಆಗ ಅವರು ಸುಮ್ಮನಿದ್ದರು.(ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3657)

ಮುಹಮ್ಮದ್ ಬಿನ್ ಸೀರೀನ್ ಹೇಳುತ್ತಾರೆ: ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್‌ರ ಕೊರತೆಗಳನ್ನು ಹೇಳುವ ವ್ಯಕ್ತಿಗೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಪ್ರೀತಿಯಿದೆ ಎಂಬುವುದನ್ನು ನಾನು ನಂಬಲಾರೆನು. ಅವನ ವಾದ ತಪ್ಪಾಗಿದೆ. ಏಕೆಂದರೆ ಅವರಿಬ್ಬರೂ ಹಝ್ರತ್ ಪೈಗಂಬರ್(ಸ)ರಿಗೆ ಅತ್ಯಂತ ಪ್ರಿಯರಾಗಿದ್ದರು.

ಹಝ್ರತ್ ಆಏದ್ ಬಿನ್ ಉಮ್ರೊ(ರ) ವರದಿ ಮಾಡುತ್ತಾರೆ: ಹಝ್ರತ್ ಸಲ್ಮಾನ್(ರ), ಹಝ್ರತ್ ಸುಹೈಬ್(ರ), ಹಝ್ರತ್ ಬಿಲಾಲ್(ರ) ಜನರ ನಡುವೆ ಕುಳಿತುಕೊಂಡಿದ್ದಾಗ ಅಬೂಸುಫ್‌ಯಾನ್ ಬಂದರು. ಆಗ ಜನರು ಹೇಳಿದರು: ಅಲ್ಲಾಹನಾಣೆ, ಅಲ್ಲಾಹನ ಖಡ್ಗಗಳು ಅಲ್ಲಾಹನ ಶತ್ರುವಿನ ಕೊರಳಿನೊಂದಿಗೆ ಈಗಲೂ ತನ್ನ ಪ್ರತೀಕಾರವನ್ನು ಪೂರ್ಣವಾಗಿ ಈಡೇರಿಸಿಲ್ಲ. ಇದನ್ನು ಆಲಿಸಿ ಹಝ್ರತ್ ಅಬೂಬಕರ್(ರ) ಹೇಳಿದರು: ಖುರೈಶಿಯರ ಸರದಾರರ ಕುರಿತು ನೀವೂ ಹೀಗೆಲ್ಲ ಹೇಳುತ್ತಿದ್ದೀರಾ? ಅನಂತರ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದಾಗ ಪೈಗಂಬರ್(ಸ) ಹೇಳಿದರು: ಹೇ ಅಬೂಬಕರ್, ನೀವು ಬಹುಶಃ (ಈ ಮಾತಿನಿಂದ) ಸಲ್ಮಾನ್, ಸುಹೈಬ್ ಮತ್ತು ಬಿಲಾಲ್‌ರನ್ನು ಬೇಸರಗೊಳಿಸಿರುವಿರಿ. ಅವರು ಬೇಸರಗೊಂಡಿರುವರು ಎಂದಾದರೆ, ನೀವು ನಮ್ಮ ಪ್ರಭುವನ್ನು ಅಸಂತುಷ್ಟಗೊಳಿಸಿದ್ದೀರಿ ಎಂದಾಯಿತು. ಇದನ್ನು ಕೇಳಿ ಹಝ್ರತ್ ಅಬೂಬಕರ್(ರ) ಆ ಮೂವರು ವ್ಯಕ್ತಿಗಳ ಬಳಿಗೆ ಹೋಗಿ ಹೀಗೆ ಹೇಳಿದರು: ಹೇ ನನ್ನ ಪ್ರಿಯ ಸಹೋದರರೇ, ನಾನು ನಿಮ್ಮನ್ನು ಬೇಸರಗೊಳಿಸಿದ್ದೇನೆಯೇ? ಆಗ ಅವರು ಹೇಳಿದರು: ಇಲ್ಲ, ಹಾಗೇನಿಲ್ಲ. (ಸಹೀಹ್ ಮುಸ್ಲಿಮ್ ಕಿತಾಬ್ ಫಝಾಎಲುಸ್ಸಹಾಬ, ಹದೀಸ್–6412) ಹಝ್ರತ್ ಅಬೂಬಕರ್(ರ)ರ ವಿನಯ ಎಷ್ಟರ ಮಟ್ಟಿಗೆ ಆಗಿತ್ತು ಎಂಬುದು ಇದರಿಂದ ಸಾಬೀತಾಗುತ್ತದೆ. ಯಾರನ್ನು ಹಝ್ರತ್

ಅಬೂಬಕರ್(ರ) ಸ್ವತಃ ಗುಲಾಮಗಿರಿಯಿಂದ ಬಿಡುಗಡೆಗೊಳಿಸಿದ್ದರೋ ಅವರ ಬಳಿಗೆ ಹೋಗಿ ಅವರೊಡನೆ ಕ್ಷಮೆ ಕೇಳುತ್ತಾರೆ. ಅದಲ್ಲದೆ ಅವರಿಗೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದ ಪ್ರೀತಿ ಮತ್ತು ಅನುಸರಣೆಯ ಮಟ್ಟ ಎಷ್ಟಿತ್ತು ಎಂದರೆ, ನೀವು ಅವರನ್ನು ಬೇಸರಗೊಳಿಸಿದ್ದೀರಿ ಎಂದು ಮಾತ್ರ ಹಝ್ರತ್ ಪೈಗಂಬರ್(ಸ) ಹೇಳಿದ್ದರು, ಕ್ಷಮೆ ಕೇಳಲು ಹೇಳಿರಲಿಲ್ಲ. ಆದರೆ ಅವರು ಸ್ವತಃ ಬೇಗನೇ ಮೂವರ ಬಳಿಗೆ ಹೋಗಿ ಅವರೊಡನೆ ಕ್ಷಮೆ ಕೇಳಿದರು. ಈ ಘಟನೆಯನ್ನು ವಿವರಿಸುತ್ತಾ, ಅಬು ಸುಫ್ಯಾನ್ ಇನ್ನೂ ಮುಸ್ಲಿಮರಾಗದಿದ್ದಾಗ ಹುದೈಬಿಯಾದ ಸಂಧಾನದ ಸಂದರ್ಭದಲ್ಲಿ ಅವಿಶ್ವಾಸಿಗಳು ಯುದ್ಧದ ವಿರಾಮದ ಒಪ್ಪಂದದ ನಂತರ ಈ ಘಟನೆಯನ್ನು ಶರಹ್‌ನಲ್ಲಿ ಬರೆಯಲಾಗಿದೆ. ಆ ಸಮಯದಲ್ಲಿ ಮುಸ್ಲಿಮರು ಅಂದುಕೊಂಡಿದ್ದರು ನಾವೇಕೆ ಅವರನ್ನು ಮೊದಲೇ ಕೊಂದಿರಲಿಲ್ಲ ಎಂದು. (ಸಾಹೀಹ್ ಮುಸ್ಲಿಂ, ಬಶರ್ಹ್ ಅಲ್-ನವಾವಿ, ಭಾಗ-16, ಪುಟ-96, ಕುರ್ತುಬಾ ಸಂಸ್ಥೆ, 1991)

ಪವಿತ್ರ ಖುರ್‌ಆನ್ ಕಂಠಪಾಠ ಮಾಡಿದ್ದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಮುಹಾಜಿರ್ ಸಹಾಬಿಯರಲ್ಲಿ ಈ ಕೆಳಗಿನ ಸಹಾಬಿಯರು ಪವಿತ್ರ ಖುರ್‌ಆನ್ ಕಂಠಪಾಠ ಮಾಡಿದ್ದರು ಎಂಬುದು ಸ್ಪಷ್ಟವಾಗುತ್ತದೆ ಎಂದು ಅಬೂಉಬೈದ(ರ) ಹೇಳುತ್ತಾರೆ: ಅಬೂಬಕರ್(ರ), ಉಮರ್(ರ), ಅಲಿ(ರ), ತಲ್‌ಹ(ರ), ಸಅದ್(ರ), ಇಬ್ನು ಮಸ್‌ಊದ್(ರ), ಹುದೈಫ(ರ), ಸಾಲಿಂ(ರ), ಅಬೂಹುರೈರ(ರ), ಅಬ್ದುಲ್ಲಾಹ್ ಬಿನ್ ಸಾಯಿಬ್(ರ), ಅಬ್ದುಲ್ಲಾಹ್ ಬಿನ್ ಉಮರ್(ರ), ಅಬ್ದುಲ್ಲಾಹ್ ಬಿನ್ ಅಬ್ಬಾಸ್(ರ), ಮತ್ತು ಸ್ತ್ರೀಯರಲ್ಲಿ ಹಝ್ರತ್ ಆಯಿಶ(ರ), ಹಝ್ರತ್ ಹಫ್‌ಸ(ರ), ಹಝ್ರತ್ ಉಮ್ಮೇ ಸಲ್ಮಾ(ರ). ಅವರಲ್ಲಿ ಹೆಚ್ಚಿನವರು ಹಝ್ರತ್ ಪೈಗಂಬರ್(ಸ)ರ ಜೀವಿತದಲ್ಲೇ ಪವಿತ್ರ ಖುರ್‌ಆನ್ ಕಂಠಪಾಠ ಮಾಡಿದ್ದರು ಮತ್ತು ಕೆಲವರು ಅವರ ನಿಧನದ ನಂತರ ಕಂಠಪಾಠ ಮಾಡಿದ್ದರು.
(ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-429-430)

ಸಾನಿಯಸ್‌ನೈನ್, ಎಂದರೆ, ಇಬ್ಬರಲ್ಲಿ ಒಬ್ಬರು ಎಂಬುದರ ಬಗ್ಗೆ ಹಝ್ರತ್ ಅಬೂಬಕರ್(ರ)ರ ಸ್ವಂತ ವರದಿಯಿದೆ. ಹಝ್ರತ್ ಅನಸ್(ರ) ಹಝ್ರತ್ ಅಬೂಬಕರ್(ರ)ರಿಂದ ವರದಿ ಮಾಡುತ್ತಾರೆ: ನಾನು ಹಝ್ರತ್ ಪೈಗಂಬರ್(ಸ)ರೊಡನೆ ಗುಹೆಯಲ್ಲಿದ್ದಾಗ ನಾನು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದೆ: ಹೊರಗೆ ನಿಂತಿರುವ ಸತ್ಯನಿಷೇಧಿಗಳಲ್ಲಿ ಯಾರಾದರೂ ಕೆಳಗೆ ಬಾಗಿಕೊಂಡು ಇಣುಕಿ ನೋಡಿದರೆ, ನಮ್ಮನ್ನು ಖಂಡಿತ ಕಾಣುವರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಇಬ್ಬರ ಜೊತೆಗೆ ಮೂರನೆಯವನಾಗಿ ಅಲ್ಲಾಹನು ಇರುವವರ ಬಗ್ಗೆ ನಿಮ್ಮ ಅಭಿಪ್ರಾಯವೇನು? (ಸಹೀಹ್ ಬುಖಾರಿ, ಕಿತಾಬ್ ಫಝಾಇಲ್ ಅಸ್ಹಾಬುನ್ನಬಿ(ಸ), ಹದೀಸ್-3653) ಇದು ಬುಖಾರಿಯ ವರದಿಯಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹಝ್ರತ್ ಅಬೂಬಕರ್(ರ)ರ ಗುಣಗಳು ಮತ್ತು ವಿಶಿಷ್ಟ ಶ್ರೇಷ್ಠತೆಗಳಲ್ಲಿ ಒಂದು ಏನೆಂದರೆ, ಹಿಜ್ರತ್ ಯಾತ್ರೆಯಲ್ಲಿ ಹಝ್ರತ್ ಅಬೂಬಕರ್(ರ)ರನ್ನು ಜೊತೆಗಾರರನ್ನಾಗಿ ಆಯ್ಕೆ ಮಾಡಲಾಯಿತು. ಸೃಷ್ಟಿಗಳಲ್ಲಿ ಅತ್ಯಂತ ಶ್ರೇಷ್ಠ ವ್ಯಕ್ತಿಯಾದ ಹಝ್ರತ್ ಪೈಗಂಬರ್(ಸ)ರ ಕಷ್ಟತೆಯ ಸಮಯದಲ್ಲಿ ಹಝ್ರತ್ ಅಬೂಬಕರ್(ರ) ಅವರ ಜೊತೆಗಿದ್ದರು. ಅಲ್ಲಾಹನ ಪ್ರಿಯ ಪೈಗಂಬರ್(ಸ)ರ ಜೊತೆಗೆ ಹಝ್ರತ್ ಅಬೂಬಕರ್(ರ)ರಿಗೆ ಇರುವ ಸಂಬಂಧ ಸ್ಪಷ್ಟವಾಗಲಿಕ್ಕಾಗಿ ಕಷ್ಟತೆಗಳ ಆರಂಭ ಸಮಯದಿಂದಲೇ ಹಝ್ರತ್ ಅಬೂಬಕರ್(ರ)ರನ್ನು ಹಝ್ರತ್ ಪೈಗಂಬರ್(ಸ)ರ ಸ್ನೇಹಿತರನ್ನಾಗಿ ಅಲ್ಲಾಹನು ಮಾಡಿದ್ದನು. ಇದರ ರಹಸ್ಯವೇನೆಂದರೆ, ಹಝ್ರತ್ ಅಬೂಬಕರ್(ರ) ಸಹಾಬಿಯರಲ್ಲಿ ಅತ್ಯಂತ ಧೈರ್ಯಶಾಲಿ, ಮುತ್ತಖಿ, ಹಝ್ರತ್ ಪೈಗಂಬರ್(ಸ)ರಿಗೆ ಅತ್ಯಂತ ಪ್ರಿಯ, ಧೈರ್ಯಶಾಲಿ ಯೋಧ ಮತ್ತು ಪ್ರಪಂಚದ ನೇತಾರರಾದ ಪೈಗಂಬರ್(ಸ)ರ ಪ್ರೇಮದಲ್ಲಿ ಲೀನರಾದ ವ್ಯಕ್ತಿಯಾಗಿರುವರು ಎಂದು ಅಲ್ಲಾಹನಿಗೆ ಚೆನ್ನಾಗಿ ಗೊತ್ತಿತ್ತು. ಹಝ್ರತ್ ಅಬೂಬಕರ್(ರ) ಆರಂಭದಿಂದಲೇ ಹಝ್ರತ್ ಪೈಗಂಬರ್(ಸ)ರಿಗೆ ಸಾಂಪತ್ತಿಕ ಸಹಾಯವನ್ನು ಮಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ)ರ ಮುಖ್ಯ ಕೆಲಸಗಳ ಗಮನ ವಹಿಸುತ್ತಿದ್ದರು. (ಸಿರ್‍ರುಲ್ ಖಿಲಾಫ ಅನುವಾದ, ಪುಟ-59-60, ರೂಹಾನಿ ಖಝಾಇನ್, ಸಂಪುಟ-8, ಪುಟ-338-339)

ಮುಸ್ಲಿಮೇತರ ಬರಹಗಾರರು ಕೂಡ ಹಝ್ರತ್ ಅಬೂಬಕರ್(ರ)ರಿಗೆ ಆದರಾಂಜಲಿಗಳನ್ನು ಅರ್ಪಿಸಿರುವರು.

ಅಲ್‌ಜೀರಿಯದ 20ನೇ ಶತಮಾನದ ಒಬ್ಬ ಚರಿತ್ರೆಗಾರನಾದ ಆಂದ್ರೇ ಸರ್ವಿಯರ್ ಬರೆಯುತ್ತಾರೆ: ಅಬೂಬಕರ್ ಸರಳ ಪ್ರಕೃತದವರಾಗಿದ್ದರು ಅನಿರೀಕ್ಷಿತ ಪ್ರಗತಿಯನ್ನು ಪಡೆದು ಕೂಡ ಸರಳ ಜೀವನವನ್ನು ಸಾಗಿಸಿದರು ಅವರು ನಿಧನರಾದಾಗ ಒಂದು ಹಳೆಯ ಬಟ್ಟೆ, ಒಬ್ಬ ಗುಲಾಮ ಮತ್ತು ಒಂದು ಒಂಟೆಯನ್ನು ಮಾತ್ರ ಬಿಟ್ಟು ಹೋಗಿದ್ದರು. ಹಝ್ರತ್ ಮುಹಮ್ಮದ್(ಸ) ಯಾವ ಶ್ರೇಷ್ಠತೆಯೊಂದಿಗೆ ಶತ್ರುಗಳ ವಿರುದ್ಧ ವಿಜಯವನ್ನು ಗಳಿಸಿದರೋ ಆ ಶ್ರೇಷ್ಠತೆ ಹಝ್ರತ್ ಅಬೂಬಕರ್(ರ)ರಲ್ಲೂ ಇತ್ತು. ಅದೇನೆಂದರೆ, ಅಚಂಚಲ ಮತ್ತು ಸುದೃಢವಾದ ಸತ್ಯವಿಶ್ವಾಸ. ಅಬೂಬಕರ್ ಸರಿಯಾದ ಸ್ಥಳದಲ್ಲಿ ಸರಿಯಾದ ವ್ಯಕ್ತಿಯಾಗಿದ್ದರು. ಎಲ್ಲಡೆ ದಂಗೆ ಎದ್ದ ಸಮಯದಲ್ಲಿ, ಹಿರಿ ವಯಸ್ಸಿನ ಮತ್ತು ಸಾತ್ವಿಕ ವ್ಯಕ್ತಿಯಾದ ಅಬೂಬಕರ್ ತನ್ನ ನಿಲುವಿನನಲ್ಲಿ ನೆಲೆಗೊಂಡರು. ಅಚಂಚಲವಾದ ಆತ್ಮವಿಶ್ವಾಸದೊಂದಿಗೆ ಹಝ್ರತ್ ಪೈಗಂಬರ್(ಸ)ರ ಕೆಲಸವನ್ನು ಪುನಃ ಶುರು ಮಾಡಿದರು. (Islam and the psychology of Muslim by Andre Servier page-51)

ನಂತರ ಒಬ್ಬ ಬ್ರಿಟಿಷ್ ಇತಿಹಾಸಕಾರ, ಜೆ.ಜೆ. ಸೌಂಡರ್ಸ್ ಬರೆಯುತ್ತಾರೆ: ಮೊದಲ ಖಲೀಫರ ಸ್ಮರಣೆಯು ಮುಸ್ಲಿಮರಲ್ಲಿ ಯಾವಾಗಲೂ ಅವರು ಓರ್ವ ಪರಿಪೂರ್ಣ ನಿಷ್ಠಾವಂತ ವ್ಯಕ್ತಿ, ಸಂತೋಷ ಮತ್ತು ದಯೆಯ ವ್ಯಕ್ತಿತ್ವದ ರೂಪದಲ್ಲಿ ಜೀವಂತವಾಗಿದೆ. ಮತ್ತು ತೀವ್ರ ಬಿರುಗಾಳಿಯೂ ಸಹ ಅವರ ಸ್ಥಿರಚಿತ್ತತೆಯನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ.

ಹಝ್ರತ್ ಅಬೂಬಕರ್(ರ)ರ ಆಡಳಿತ ಕಾಲವು ಬಹಳ ಹ್ರಸ್ವವಾಗಿತ್ತು. ಆದರೆ ಅವರಿಗೆ ಲಭಿಸಿದ ವಿಜಯಗಳು ಮಹತ್ತಾದದ್ದಾಗಿದ್ದುವು. ಅವರು ಸಂಯಮ, ಸ್ಥೈರ್ಯ ಮತ್ತು ಸ್ಥಿರಚಿತ್ತತೆಯಿಂದ ಧರ್ಮತ್ಯಾಗವನ್ನು ನಿಯಂತ್ರಿಸಿ ಅರಬ್ ಸಮುದಾಯವನ್ನು ಪುನಃ ಇಸ್ಲಾಮಿನ ವಲಯದಲ್ಲಿ ಪ್ರವೇಶಿಸಗೊಳಿಸಿದರು.
(A History of Medieval islam by J.J. Saunders page: 44-45 London 2002)

ಮತ್ತೊಬ್ಬ ಆಂಗ್ಲ ಬರಹಗಾರ ಎಚ. ಜಿ. ವೇಲ್ಸ್. ಹೇಳುತ್ತಾರೆ: ಇಸ್ಲಾಮಿನ ಆಡಳಿತದ ಬುನಾದಿ ಇರಿಸುವುದರಲ್ಲಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಅಬೂಬಕರ್‌ರ ಪಾತ್ರ ಹೆಚ್ಚಾಗಿದೆ. ಇದೊಂದು ಅತಿಶಯೋಕ್ತಿಯ ಮಾತಾಗಿದೆ. ಅನಾವಶ್ಯಕವಾದ ಮಾತಾಗಿದೆ. ಹೇಗಿದ್ದರೂ ಮುಂದೆ ಹೀಗೆ ಹೇಳುತ್ತಾನೆ: ಹಝ್ರತ್ ಪೈಗಂಬರ್(ಸ) ನಿಧನರಾದಾಗ ಅಬೂಬಕರ್(ರ) ಖಲೀಫ ಮತ್ತು ಉತ್ತರಾಧಿಕಾರಿಯಾದರು. ಪರ್ವತವನ್ನು ಕೂಡ ಅಲುಗಾಡಿಸುವ ದೃಢವಿಶ್ವಾಸದೊಂದಿಗೆ ಅವರ ಸರಳತೆ ಮತ್ತು ವಿವೇಕದಿಂದ 3 ಅಥವಾ 4 ಸಾವಿರ ಅರಬರನ್ನು ಒಳಗೊಂಡ ಸಣ್ಣ ಸೈನ್ಯದೊಂದಿಗೆ ಪೂರ್ತಿ ಲೋಕವನ್ನು ವಿಧೇಯಗೊಳಿಸುವ ಕೆಲಸವನ್ನು ಶುರುಮಾಡಿದರು. (A Short History Of the world by H.G. Wells page 76)

ಈ ಜನರಿಗೆ ಹಝ್ರತ್ ಪೈಗಂಬರ್(ಸ)ರ ಪ್ರವಾದಿತ್ವದ ಉನ್ನತ ಮತ್ತು ಶ್ರೇಷ್ಠ ಪದವಿಯ ಅರಿವು ಮತ್ತು ಪರಿಜ್ಞಾನ ಇಲ್ಲದ ಕಾರಣದಿಂದ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮುಂತಾದವರನ್ನು ಹೊಗಳುವುದರಲ್ಲಿ ಅತಿಶಯೋಕ್ತಿಯನ್ನು ತೋರಿಸುತ್ತಾರೆ. ಅದು ಯಾವುದೇ ರೀತಿಯಲ್ಲಿ ಸರಿಯಲ್ಲ. ಸತ್ಯದಲ್ಲಿ ಹಝ್ರತ್ ಅಬೂಬಕರ್(ರ) ಆದರೂ ಹಝ್ರತ್ ಉಮರ್(ರ) ಆದರೂ ಸರಿ, ಅವರೆಲ್ಲರೂ ತಮ್ಮ ನೇತಾರರಾದ ಹಝ್ರತ್ ಪೈಗಂಬರ್(ಸ)ರಿಗೆ ಪರಿಪೂರ್ಣವಾಗಿ ನಿಷ್ಠಾವಂತರಾಗಿದ್ದರು.

ಈ ಜನರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಪ್ರಜ್ಞೆಯಾಗಿರಲಿಲ್ಲ, ಆದರೆ ಅವರು ಸೇವಕರ ರೂಪದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಕೈ ಮತ್ತು ಕಾಲುಗಳಾಗಿದ್ದರು. ಅಂತೆಯೇ ಅವರು ಬರೆದಿರುವುದು, ಇಸ್ಲಾಂ ಧರ್ಮವು ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ರವರ ಮನಸ್ಸಿನ ಹೆಸರು ಅಥವಾ ಕೆಲಸವಾಗಿದೆ ಎಂದು ಆದರೆ ಇಸ್ಲಾಮ್ ಧರ್ಮವು ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಮನಸ್ಸಿನ ಹೆಸರು ಅಥವಾ ಕೆಲಸವಾಗಿರಲಿಲ್ಲ ಬದಲಿಗೆ ಅದು ದೈವಿಕ ಮಾರ್ಗದರ್ಶನ ಮತ್ತು ದೈವಿಕ ಇಲ್‌ಹಾಮ್‌ನ ಫಲವಾಗಿ ಒಂದು ಪರಿಪೂರ್ಣ ಶರೀಯ್ಯತ್ ಮತ್ತು ದೀನಿನ ಹೆಸರು ಇಸ್ಲಾಮ್ ಆಗಿದೆ. ಮತ್ತು ಹಝ್ರತ್ ಅಬೂಬಕರ್(ರ) ರವರು ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರಿಗೆ ಯಾವುದೇ ಗಾಬರಿ ಅಥವಾ ತಲ್ಲಣಗಳ ಸಂದರ್ಭದಲ್ಲಿ ಗುರಾಣಿಯಾದರು ಎಂದಲ್ಲ. ಬದಲಿಗೆ ಜನರಲ್ಲಿ ಧೀರರೂ ಮತ್ತು ಶೂರರಾದ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಸಂಪೂರ್ಣ ಜೀವಿತಕಾಲದಲ್ಲಿ ಯಾವುದೇ ಗಾಬರಿಯ ಸಂದರ್ಭವನ್ನು ಕಾಣುವುದಿಲ್ಲ ಒಂದುವೇಳೆ ಯಾವುದಾದರು ಸಂಕಟದ ಅವಕಾಶವಿದ್ದರೂ ಸರ್ವಶಕ್ತನಾದ ಅಲ್ಲಾಹನು ಪೈಗಂಬರ್ ಸಲ್ಲಲ್ಲಹು ಅಲೈಹಿವಸಲ್ಲಮ್ ಅವರಿಗೆ ಗುರಾಣಿಯಾಗಿದ್ದನು. ಅಬೂಬಕರ್ ಅವರು ಪ್ರವಾದಿಯವರಿಗೆ ಗುರಾಣಿಯಾಗಿದ್ದರು ಎಂದು ಲೇಖಕರು ಬರೆದಿದ್ದಾರೆ, ಆದರೆ ಹಝ್ರತ್ ಅಬೂಬಕರ್(ರ) ಅವರ ಜೀವನದಲ್ಲಿ ತೊಂದರೆ ಅಥವಾ ಭಯದ ಸಮಯವಿದ್ದರೂ ಸಹ, ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರು ಅವರಿಗಾಗಿ ಗುರಾಣಿಯಾಗಿದ್ದನ್ನು ನಾವು ನೋಡಿದ್ದೇವೆ. ಉದಾಹರಣೆಗೆ ವಲಸೆಯ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ಅವರು ತುಂಬಾ ಚಿಂತಿತರಾಗಿದ್ದರು ಮತ್ತು ಗಾಬರಿಗೊಂಡರು. ವಾಸ್ತವವಾಗಿ, ಈ ಭಯವು ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಪ್ರೀತಿಗಾಗಿ ಆಗಿತ್ತು, ಆದರೆ ಹಝ್ರತ್ ಅಬುಬಕರ್(ರ) ಅವರ ಈ ಭೀತಿಯ ಸಂದರ್ಭದಲ್ಲಿ, ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ರಕ್ಷಕರಾದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರು ಹಝ್ರತ್ ಅಬೂಬಕರ್(ರ) ಅವರಿಗೆ **ಲಾತಹ್‌ಝನ್ ಇನ್ನಲ್ಲಾಹ ಮಾಅನಾ** (ಅತ್ತೌಬ: 40) ಅಂದರೆ ಎಲೈ ಅಬೂಬಕರ್! ನೀವು ಹೆದರದಿರಿ . ಅಲ್ಲಾಹನು ನಮ್ಮೊಂದಿಗಿದ್ದಾನೆ ಎಂದು ಹೇಳಿದರು. ಈಗಾಗಲೇ ಹೇಳಿದಂತೆ ಹಝ್ರತ್ ಅಬೂಬಕರ್(ರ) ಅವರು ಭಯಭೀತರಾದಾಗ, ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರನ್ನು ಸಮಾಧಾನಪಡಿಸಿದರು ಎಂದು ಹೇಳಿದ್ದಾರೆ. ಆದ್ದರಿಂದ ಈ ಒಂದು ಘಟನೆ ಮಾತ್ರ ಅವರ ದೃಢಸಂಕಲ್ಪ, ವಿಶ್ವಾಸ ಮತ್ತು ಅಲ್ಲಾಹನ ವಿಶೇಷ ಪ್ರವಾದಿ ಎಂಬುದಕ್ಕೆ ಸ್ಪಷ್ಟ ಪುರಾವೆಯಾಗಿದೆ. ಆದರೆ ಯಾವುದೇ ಸಂದರ್ಭದಲ್ಲಿ, ಈ ಕುರುಡರು ಸತ್ಯವನ್ನು ಹೇಳಲು ಒತ್ತಾಯಿಸಿದರೆ, ಅವರು ವಿಷಯಗಳನ್ನು ಬೆರೆಸಲು ಪ್ರಯತ್ನಿಸುತ್ತಾರೆ.

ಇನ್ನೊಬ್ಬ ಬ್ರಿಟಿಷ್ ಓರಿಯಂಟಲಿಸ್ಟ್ ಟಿ.ಡಬ್ಲ್ಯೂ. ಅರ್ನಾಲ್ಡ್ ಹೇಳುತ್ತಾನೆ: ಅವರು (ಅಬೂಬಕರ್(ರ)) ಓರ್ವ ಶ್ರೀಮಂತ ವ್ಯಾಪಾರಿಯಾಗಿದ್ದರು. ಅವರ ಉನ್ನತ ಸ್ವಭಾವ ಮತ್ತು ಅವರ ಬುದ್ಧಿವಂತಿಕೆ ಮತ್ತು ಸಾಮರ್ಥ್ಯಕ್ಕಾಗಿ ಅವರು ತಮ್ಮ ದೇಶವಾಸಿಗಳಿಂದ ಹೆಚ್ಚು ಗೌರವಿಸಲ್ಪಟ್ಟರು. ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ, ಅವರು ತಮ್ಮ ಯಜಮಾನರಾದ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಬೋಧನೆಗಳನ್ನು ನಂಬಿದ್ದಕ್ಕಾಗಿ ಅವಿಶ್ವಾಸಿಗಳ ಕಿರುಕುಳಕ್ಕೊಳಗಾದ ಮುಸ್ಲಿಂ ಗುಲಾಮರನ್ನು ಖರೀದಿಸಲು ಅವರು ತಮ್ಮ ಸಂಪತ್ತಿನ ಹೆಚ್ಚಿನ ಭಾಗವನ್ನು ಖರ್ಚು ಮಾಡಿದರು.

(The Preaching Of Islam by T.W. Arnold page-10 Archibald constable & co 1896)

ನಂತರ ಸ್ಕಾಟ್ಲೆಂಡ್‌ನ ಓರಿಯಂಟಲಿಸ್ಟ್ ಮತ್ತು ಬ್ರಿಟಿಷ್ ಭಾರತದಲ್ಲಿನ ವಾಯುವ್ಯ ಪ್ರಾಂತ್ಯಗಳ ಲೆಫ್ಟಿನೆಂಟ್ ಗವರ್ನರ್ ಸರ್ ವಿಲಿಯಂ ಮ್ಯೂರ್ ಇದ್ದಾರೆ. ಅವರು ಬರೆಯುತ್ತಾರೆ ಹಝ್ರತ್ ಅಬೂಬಕರ್(ರ) ಅವರ ಆಳ್ವಿಕೆಯು ಬಹಳ ಚಿಕ್ಕದಾಗಿದೆ ಆದರೆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ನಂತರ ಇಸ್ಲಾಂ ಧರ್ಮವು ಅಬೂಬಕರ್(ರ) ಅವರಿಗಿಂತ ಹೆಚ್ಚು ಅನುಗ್ರಹಿಸಲ್ಪಟ್ಟಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ನಂತರ, ಅಬೂಬಕರ್(ರ) ಅವರಿಗಿಂತ ಹೆಚ್ಚು ಯಾರೂ ಇಸ್ಲಾಂಗೆ ಸೇವೆ ಸಲ್ಲಿಸಲಿಲ್ಲ. (The Caliphate its rise, decline and Fall by Sir William Muir page-86, The Religious Tract society 1892)

ಹಝ್ರತ್ ಅಬೂಬಕರ್(ರ)ರ ಉತ್ತಮ ನೈತಿಕಗುಣಗಳ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ದೊಡ್ಡ ದೊಡ್ಡ ಅರಸರು ಅಬೂಬಕರ್ ಮತ್ತು ಉಮರ್ ಮಾತ್ರವಲ್ಲ ಅಬೂಹುರೈರರ ಹೆಸರೆತ್ತಿ ರಝಿಯಲ್ಲಾಹು ಅನ್‌ಹು ಎಂದು ಹೇಳುತ್ತಿದ್ದರು ಮತ್ತು ಅವರ ಸೇವೆ ಮಾಡುವ ಸಂದರ್ಭವಾದರೂ ಸಿಕ್ಕಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಬಯಸುತ್ತಿದ್ದರು ಎಂಬುದು ಸತ್ಯವಲ್ಲವೇ? ಹೀಗಿರುವಾಗ, ಅಬೂಬಕರ್(ರ), ಉಮರ್(ರ) ಮತ್ತು ಅಬೂಹುರೈರ(ರ) ಸರಳ ಜೀವಿತವನ್ನು ಸಾಗಿಸಿ ಸ್ವತಃ ನಷ್ಟಕ್ಕೆ ಒಳಗಾದರು ಎಂದು ಯಾರಿಗೆ ಹೇಳಲು ಸಾಧ್ಯ? ನಿಸ್ಸಂಶಯವಾಗಿಯೂ ಅವರು ಲೌಕಿಕವಾದ ದೃಷ್ಟಿಯಲ್ಲಿ ನೋಡುವುದಾದರೆ ತಮ್ಮ ಮೇಲೆ ಒಂದು ಮರಣವನ್ನು ಸ್ವೀಕಾರ ಮಾಡಿಕೊಂಡಿದ್ದರು. ಆದರೆ ಅವರ ಈ ಮರಣ ಅವರಿಗೆ ಜೀವದಾಯಕವಾಯಿತು. ಈಗ ಯಾವುದೇ ಶಕ್ತಿಗೆ ಅವರನ್ನು ವಧಿಸಲು ಸಾಧ್ಯವಲ್ಲ. ಅವರು ಖಿಯಾಮತ್ ದಿನದ ತನಕ ಜೀವಂತವಾಗಿ ಇರುವರು. (ಶುಕ್ರಿಯ ಔರ್ ಎಲಾನ್ ಝುರೂರಿ, ಅನ್ವಾರುಲ್ ಉಲೂಮ್, ಸಂಪುಟ–2, ಪುಟ–74)

ಮತ್ತು ಅವರು ಹೇಳುತ್ತಾರೆ: ಅಲ್ಲಾಹನು ಅಬೂಬಕರ್(ರ)ರನ್ನು ಅಬೂಬಕರ್ ಮಾಡಿದ್ದು ಅವರು ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಜನಿಸಿದ್ದರು ಎಂಬ ಕಾರಣದಿಂದಲ್ಲ. ಅಲ್ಲಾಹನು ಉಮರ್(ರ)ರಿಗೆ ಉಮರ್‌ರ ಸ್ಥಾನ ನೀಡಿದ್ದು ಅವರು ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಜನಿಸಿದ್ದರು ಎಂಬ ಕಾರಣದಿಂದಲ್ಲ. ಅಲ್ಲಾಹನು ಉಸ್ಮಾನ್(ರ)ರಿಗೆ ಮತ್ತು ಅಲಿ(ರ)ರಿಗೆ ಉಸ್ಮಾನ್ ಮತ್ತು ಅಲಿ(ರ)ರ ಸ್ಥಾನ ನೀಡಿದ್ದು ಅವರು ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಜನಸಿದ್ದರು ಎಂಬ ಕಾರಣದಿಂದಲ್ಲ. ಅಲ್ಲಾಹನು ತಲ್‌ಹ(ರ)ರಿಗೆ ಮತ್ತು ಝುಬೇರ್(ರ)ರಿಗೆ ಸ್ಥಾನ ನೀಡಿದ್ದು ಅವರು ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಮತ್ತು ಅವರ ಕುಟುಂಬದಲ್ಲಿ ಜನಿಸಿದ್ದರು ಎಂಬ ಕಾರಣದಿಂದಲ್ಲ. ಬದಲಾಗಿ ಅವರು ತಮ್ಮ ತ್ಯಾಗಗಳನ್ನು ಎಂತಹ ಪದವಿಗೆ ಮುಟ್ಟಿಸಿದ್ದರು ಎಂದರೆ, ಅದಕ್ಕಿಂತ ಹೆಚ್ಚು ಒಬ್ಬ ಮನುಷ್ಯನಿಗೆ ಊಹಿಸಲು ಕೂಡ ಸಾಧ್ಯವಲ್ಲ. (ಖುತ್ಬಾತೆ ಮಹ್ಮೂದ್, ಸಂಪುಟ–26, ಪುಟ–384–385)

ಒಟ್ಟಿನಲ್ಲಿ ಈ ತ್ಯಾಗಗಳು ಮನುಷ್ಯನನ್ನು ಆ ಸ್ಥಾನಕ್ಕೆ ತಲುಪಿಸುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಸ್ಥಳದಲ್ಲಿ ಹೇಳಿದರು, ಹಝ್ರತ್ ಅಬೂಬಕರ್(ರ) ರವರಿಗೆ ನಮ್ಮ ಹೃದಯದಲ್ಲಿ ತುಂಬಾ ಗೌರವವಿದೆ, ಆದರೆ ಈ ಗೌರವವು ಅವರ ವಂಶಸ್ಥರಿಗೆ ಸಲ್ಲುತ್ತದೆ ಎಂದು ಯಾರಾದರೂ ಹೇಳಬಹುದೇ? ಹಝ್ರತ್ ಅಬೂಬಕ್ಕರ್(ರ) ಅವರ ಪೀಳಿಗೆಯು ಎಲ್ಲಿ ಹೋಯಿತು ಮತ್ತು ಅವರ ಪೀಳಿಗೆಯ ಪರಿಸ್ಥಿತಿಗಳು ಸುರಕ್ಷಿತವಾಗಿಲ್ಲ ಎಂದು ನಮ್ಮಲ್ಲಿ ಅನೇಕರು ಅರಿವಿಲ್ಲದವರು ಇದ್ದಾರೆ. ಇಂದು ಹಝ್ರತ್ ಅಬೂಬಕರ್(ರ) ಅವರ ವಂಶಸ್ಥರು ಎಂದು ಹೇಳಿಕೊಳ್ಳುವ ಮತ್ತು ತಮ್ಮನ್ನು ತಾವು ಸಿದ್ದೀಖಿಗಳು ಎಂದು ಕರೆದುಕೊಳ್ಳುವ ಅನೇಕ ಜನರಿದ್ದಾರೆ. ಆದರೆ ಅವರು ನಿಜವಾಗಿಯೂ ಸಿದ್ದಿಖಿಗಳೆ ಎಂದು ಪ್ರಮಾಣ ಮಾಡಿ ಮತ್ತು ನಿಮ್ಮ ವಂಶವು ಹಝ್ರತ್ ಅಬೂಬಕರ್(ರ) ಅವರ ಬಳಿಗೆ ಹೋಗುತ್ತದೆ ಎಂದು ಯಾರಾದರೂ ಅವರಿಗೆ ಹೇಳಿದರೆ? ಹೀಗೆ ಅವರು ಎಂದಿಗೂ ಪ್ರಮಾಣ ಮಾಡಿ ಹೇಳಲು ಸಾಧ್ಯವಿಲ್ಲ ಮತ್ತು ಒಂದುವೇಳೆ ಅವರು ಪ್ರಮಾಣ ಮಾಡಿದರೂ, ಅವರು ಸುಳ್ಳು ಹೇಳುತ್ತಿದ್ದಾರೆ ಮತ್ತು ವಿಶ್ವಾಸದ್ರೋಹಿಗಳು ಎಂದು ನಾವು ಹೇಳುತ್ತೇವೆ. ಇದಕ್ಕೆ ಕಾರಣವೆಂದರೆ ಪ್ರಸ್ತುತ ಕಾಲದಲ್ಲಿ ಯಾರಾದರು ತನ್ನನ್ನು ತಾನು ಹಝ್ರತ್ ಅಬೂಬಕರ್(ರ) ಅವರ ಪೀಳಿಗೆಗೆ ಸೇರಿರುವನು ಎಂದು ಹೇಲಲು ಹಝ್ರತ್ ಅಬೂಬಕರ್(ರ) ಅವರ ಪೀಳಿಗೆಯ ಇತಿಹಾಸವು ಅಷ್ಟು ಸುರಕ್ಷಿತವಾಗಿಲ್ಲ. ಆದ್ದರಿಂದ ನಾವು ಹಝ್ರತ್ ಅಬೂಬಕರ್(ರ) ಅವರನ್ನು ಅವರ ಪೀಳಿಗೆಯ ಕೆಲಸವು ಉದಾತ್ತವಾಗಿದೆ ಎಂದು ಗೌರವಿಸುತ್ತಿಲ್ಲ, ನಾವು ಹಝ್ರತ್ ಉಮರ್(ರ) ಅವರನ್ನು ಅವರ ಪೀಳಿಗೆಯ ಕೆಲಸವು ಅತ್ಯಂತ ಉನ್ನತ ಗುಣಮಟ್ಟದ್ದಾಗಿದೆ ಎಂದು ಗೌರವಿಸುತ್ತಿಲ್ಲ, ನಾವು ಹಝ್ರತ್ ಉಸ್ಮಾನ್(ರ) ಅವರನ್ನು ಅವರ ಪೀಳಿಗೆಯು ಬದಲಾವಣೆಯನ್ನು ತರುತ್ತಿದೆ ಎಂದು ಗೌರವಿಸುತ್ತಿಲ್ಲ ಮತ್ತು ನಾವು ಹಝ್ರತ್ ಅಲಿ(ರ) ಅವರನ್ನು ಅವರ ಪೀಳಿಗೆಯಲ್ಲಿ ವಿಶೇಷ ಗುಣಗಳಿವೆ ಎಂದು ನೆನಪಿಸಿಕೊಳ್ಳುವುದಿಲ್ಲ. (ಹಝ್ರತ್ ಅಲಿಯವರ ವಂಶವು ಇನ್ನೂ ಮುಂದುವರೆದಿದೆ, ಆದರೆ ಅವರ ವಂಶವು ಇನ್ನೂ ಸ್ಥಾಪಿತವಾಗಿರುವುದರಿಂದ ಅವರನ್ನು ಗೌರವಿಸಲಾಗುವುದಿಲ್ಲ.) ಮತ್ತುಳಿದ ಎಲ್ಲಾ ಸಹಾಬರವರನ್ನು ಅವರ ಪೀಳಿಗೆಯ ಕಾರಣದಿಂದ ಅವರನ್ನು ಗೌರವಿಸುತ್ತಿಲ್ಲ. ಸತ್ಯಾಂಶವೇನೆಂದರೆ ನಾವು ಅವರನ್ನು ಅವರ ವೈಯಕ್ತಿಕ ತ್ಯಾಗದಿಂದಾಗಿ ನೆನಪಿಸಿಕೊಳ್ಳುತ್ತೇವೆ ಮತ್ತು ಗೌರವಿಸುತ್ತೇವೆ. (ಖುತ್ಬಾತೆ ಮಹ್ಮೂದ್, ಸಂಪುಟ–27, ಪುಟ–657)

ಹಝ್ರತ್ ಮುಸ್ಲಿಹ್ ಮೌಊದ್(ರ) ಮತ್ತೊಂದೆಡೆ ಹೇಳುತ್ತಾರೆ: ಹಝ್ರತ್ ಅಬೂಬಕರ್(ರ)ರನ್ನು ನೋಡಿರಿ. ಅವರು ಮಕ್ಕದ ಒಬ್ಬ ಸಾಮಾನ್ಯ ವ್ಯಾಪಾರಿಯಾಗಿದ್ದರು. ರಸೂಲುಲ್ಲಾಹ್(ಸ) ಆಗಮಿಸದೇ ಇರುವ ಅವಸ್ಥೆಯಲ್ಲಿ ಮಕ್ಕದ ಚರಿತ್ರೆಯನ್ನು ಬರೆಯಲ್ಪಟ್ಟಿದ್ದರೆ, ಅಬೂಬಕರ್ ಅರೇಬಿಯದ ಒಬ್ಬ ಸಭ್ಯ ಮತ್ತು ಪ್ರಾಮಾಣಿಕ ವ್ಯಾಪಾರಿ ಎಂದು ಮಾತ್ರ ಚರಿತ್ರೆಗಾರರು ಪ್ರಸ್ತಾಪಿಸಬಹುದಾಗಿತ್ತು. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ)ರನ್ನು ಪರಿಪೂರ್ಣವಾಗಿ ಅನುಸರಿಸಿದ ಕಾರಣದಿಂದ ಅಬೂಬಕರ್(ರ)ರಿಗೆ ಎಂತಹ ಪದವಿ ಲಭಿಸಿತು ಎಂದರೆ ಇಂದು ಪೂರ್ತಿ ಲೋಕವು ಗೌರವಭಾವದಿಂದ ಅವರ ಹೆಸರನ್ನು ಪ್ರಸ್ತಾಪಿಸುತ್ತಾರೆ.

ಹಝ್ರತ್ ಪೈಗಂಬರ್(ಸ) ನಿಧನರಾಗಿ ಹಝ್ರತ್ ಅಬೂಬಕರ್(ರ)ರನ್ನು ಮುಸ್ಲಿಮರು ತಮ್ಮ ಖಲೀಫ ಮತ್ತು ಬಾದಶಾಹವನ್ನಾಗಿ ಮಾಡಿದಾಗ ಮಕ್ಕದಲ್ಲೂ ಅದರ ಸುದ್ದಿ ಮುಟ್ಟಿತು. ಒಂದು ಸಭೆಯಲ್ಲಿ ಅನೇಕ ಜನರು ಕುಳಿತುಕೊಂಡಿದ್ದರು. ಅವರಲ್ಲಿ ಹಝ್ರತ್ ಅಬೂಬಕರ್(ರ)ರ ತಂದೆ ಕೂಡ ಇದ್ದರು. ಜನರು ಹಝ್ರತ್ ಅಬೂಬಕರ್(ರ)ರ ಕೈಯಲ್ಲಿ ಬೈಅತ್ ಮಾಡಿರುವವರು ಎಂಬ ಮಾತನ್ನು ಅವರು ಆಲಿಸಿದರು. ಅವರಿಗೆ ಈ ಸಂಗತಿಯನ್ನು ನಂಬಲು ಸಾಧ್ಯವಾಗುತ್ತಿರಲಿಲ್ಲ. ನೀವು ಯಾ ಅಬೂಬಕರ್‌ರ ಬಗ್ಗೆ ಹೇಳುತ್ತಿದ್ದೀರಿ ಎಂದು ಅವರು ಕೇಳಿದರು. ನಿಮ್ಮ ಪುತ್ರನಾದ ಅಬೂಬಕರ್ ಬಗ್ಗೆ ಹೇಳುತ್ತಿದ್ದೇನೆ ಎಂದು ಸುದ್ದಿ ತಂದವನು ಹೇಳಿದನು. ಅರೇಬಿಯದ ಪ್ರತಿಯೊಂದು ಗೋತ್ರದ ಹೆಸರನ್ನು ಪ್ರಸ್ತಾಪಿಸಿಕೊಂಡು ಅವರು ಕೂಡ ಬೈಅತ್ ಮಾಡಿರುವರೋ ಎಂದು ಹಝ್ರತ್ ಅಬೂಬಕರ್(ರ)ರ ತಂದೆಯಾದ ಅಬೂಖಹಾಫ ಕೇಳಿದರು. ಎಲ್ಲರೂ ಒಮ್ಮತಾಭಿಪ್ರಾಯದಿಂದ ಹಝ್ರತ್ ಅಬೂಬಕರ್(ರ)ರನ್ನು ಖಲೀಫ ಮತ್ತು ಅರಸನನ್ನಾಗಿ ಮಾಡಿರುವರು ಎಂದು ಹೇಳಿದಾಗ ಅಬೂಖಹಾಫ ಅನಿಯಂತ್ರಿತವಾಗಿ ಹೀಗೆ ಹೇಳಿದರು: **ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್‌ದಹೂ ಲಾ ಶರೀಕ ಲಹೂ ಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವ ರಸೂಲುಹೂ.** ಎಂದರೆ ಅಲ್ಲಾಹನಲ್ಲದೇ ಬೇರೆ ಆರಾಧ್ಯನಿಲ್ಲವೆಂದೂ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನ ದಾಸ ಮತ್ತು ಸತ್ಯಪ್ರವಾದಿಯಾಗಿರುವರು ಎಂದೂ ನಾನು ಸಾಕ್ಷ್ಯವಹಿಸುತ್ತೇನೆ. ಸತ್ಯದಲ್ಲಿ ಅವರು ಮುಂಚೆಯೇ ಮುಸ್ಲಿಮರಾಗಿದ್ದರು. ಫತ್‌ಹೆ ಮಕ್ಕದ ನಂತರ ಅಥವಾ ಬಹುಶಃ ಅದಕ್ಕೆ ಸ್ವಲ್ಪ ಮುಂಚೆ ಅಬೂಖಹಾಫ ಮುಸ್ಲಿಮರಾಗಿದ್ದರು. ಅವರು ಪುನಃ ಕಲಿಮ ಉಚ್ಚರಿಸಲು ಕಾರಣವೇನೆಂದರೆ, ಹಝ್ರತ್ ಅಬೂಬಕರ್(ರ) ಖಲೀಫರಾದಾಗ ಅವರು ಕಣ್ಣುಗಳು ತೆರೆಯಲ್ಪಟ್ಟುವು. ಇದು ಇಸ್ಲಾಮಿನ ಸತ್ಯತೆಗೆ ಒಂದು ಶಕ್ತವಾದ ಪುರಾವೆಯಾಗಿದೆ ಎಂದು ಅವರು ಮನವರಿಕೆಕೊಂಡರು. ಇಲ್ಲದಿದ್ದರೆ ನನ್ನ ಪುತ್ರನ ಕೈಯಲ್ಲಿ ಪೂರ್ತಿ ಅರಬ್ ಒಟ್ಟುಸೇರಲು ಹೇಗೆ ಸಾಧ್ಯ ಎಂದು ಅವರು ಭಾವಿಸಿದರು. (ತಫ್ಸೀರೆ ಕಬೀರ್, ಸಂಪುಟ–6, ಪುಟ–205–206)

ಮತ್ತೊಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ)ರನ್ನು ನೋಡಿರಿ. ಅವರು ಇಸ್ಲಾಮನ್ನು ಸ್ವೀಕಾರ ಮಾಡಿದಾಗ, ಮಕ್ಕದ ಒಬ್ಬ ಲೀಡರ್ ಇಸ್ಲಾಂ ಸ್ವೀಕಾರ ಮಾಡಿಕೊಂಡು ನಿಂದ್ಯರಾದರು ಎಂದು ಜನರು ಹೇಳಲು ಶುರುಮಾಡಿದರು. ಆದರೆ ಇಸ್ಲಾಮಿಗಿಂತ ಮುಂಚೆ ಅವರಿಗೆ ಯಾವ ಗೌರವವಿರಬಹುದಾಗಿತ್ತು. ಇನ್ನೂರು ಮುನ್ನೂರು ಜನರು ಅವರ ಹೆಸರನ್ನು ಗೌರವದಿಂದ ಹೇಳುತ್ತಿದ್ದರು. ಆದರೆ ಇಸ್ಲಾಮಿನ ಅನುಗ್ರಹದಿಂದ ಅಲ್ಲಾಹನು ಅವರಿಗೆ ಖಿಲಾಫತ್ ಮತ್ತು ರಾಜತನದ ಅನುಗ್ರಹವನ್ನು ದಯಪಾಲಿಸಿದನು. ಅವರಿಗೆ ಲೋಕದೆಲ್ಲಡೆ ಸ್ಥಾಯಿಯಾದ ಗೌರವ ಮತ್ತು ಕೊನೆಗೊಳ್ಳದ ಪ್ರಸಿದ್ಧಿಯನ್ನು ನೀಡಿದನು. ಒಂದು ಗೋತ್ರದ ಲೀಡರ್ ಆಗುವುದು ಎಲ್ಲಿಯ ಸ್ಥಾನ ಪೂರ್ತಿ ಮುಸ್ಲಿಮರ ಖಲೀಫ ಮತ್ತು ಅರಬ್ ದೇಶಗಳ ಅರಸನಾಗುವುದು ಎಲ್ಲಿಯ ಸ್ಥಾನ. ಅವರು ಇರಾನ್ ಮತ್ತು ರೋಮಿನೊಂದಿಗೆ ಸೆಣಸಾಡಿ ಅವರನ್ನು ಪರಾಜತಿಗೊಳಿಸಿದರು. (ತಫ್ಸೀರೆ ಕಬೀರ್, ಸಂಪುಟ–2, ಪುಟ–87)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನೋಡಿರಿ. ರಾಜತನ ಹಝ್ರತ್ ಪೈಗಂಬರ್(ಸ)ರ ಕಾಲಡಿಯಲ್ಲಿ ಮಾತ್ರವಲ್ಲ, ಅವರ ಸೇವಕರ ಕಾಲಡಿಗಳಲ್ಲೂ ಬಂದು ಸೇರಿತ್ತು. ಆದರೆ ಹಝ್ರತ್ ಪೈಗಂಬರ್(ಸ)ರಿಗೆ ರಾಜತನ ಲಭಿಸದ ಸಮಯದಲ್ಲೂ ಅವರು ಅದನ್ನು ಬಯಸಿರಲಿಲ್ಲ, ಅವರಿಗೆ ರಾಜತನ ಲಭಿಸಿದ ಸಮಯದಲ್ಲೂ ಅದನ್ನು ಆಶಿಸಲಿಲ್ಲ. ಅದೇ ರೀತಿಯಲ್ಲಿ ಹಝ್ರತ್ ಅಬೂಬಕರ್(ರ) ರಾಜತನವನ್ನು ಬಯಸಿರಲಿಲ್ಲ, ಹಝ್ರತ್ ಉಮರ್(ರ) ರಾಜತನವನ್ನು ಬಯಸಿರಲಿಲ್ಲ, ಹಝ್ರತ್ ಉಸ್ಮಾನ್(ರ) ರಾಜತನವನ್ನು ಬಯಸಿರಲಿಲ್ಲ, ಹಝ್ರತ್ ಅಲಿ(ರ) ರಾಜತನವನ್ನು ಬಯಸಿರಲಿಲ್ಲ, ಅವರಲ್ಲಿ ರಾಜತನದ ಲಕ್ಷಣಗಳು ಇರಲೇ ಇಲ್ಲ. ಅವರು ಲೋಕದ ಎಷ್ಟು ಸಮರ್ಥ ರಾಜರಾಗಿದ್ದರು ಎಂದರೆ, ಅದರ ಮಾದರಿಯನ್ನು ಲೋಕದಲ್ಲಿ ಕಾಣಲೇ ಸಾಧ್ಯವಿಲ್ಲ. ಅವರ ಸ್ವಭಾವ ಎಷ್ಟು ಸರಳವಾಗಿತ್ತು ಎಂದರೆ, ಅವರಲ್ಲ ಎಷ್ಟು ವಿನಮ್ರತೆಯಿತ್ತು ಎಂದರೆ, ಬಾಹ್ಯವಾಗಿ ನೋಡುವುದಾದರೆ, ಅವರು ಅರಸರು ಎಂದು ಗೊತ್ತಾಗುತ್ತಿರಲ್ಲ. ನನ್ನ ಆಡಳಿತವಾಗಿದೆ, ನಾನು ಅರಸ ಎಂದೂ ಅವರಲ್ಲಿ ಯಾರೂ ಹೇಳಿರಲಿಲ್ಲ. ಸತ್ಯದಲ್ಲಿ ಅಲ್ಲಾಹನಿಗೆ ಶರಣನಾಗುವವರ ಪಾದಗಳಲ್ಲಿ ಲೋಕವು ಸ್ವತಃ ಬಂದು ಬೀಳುತ್ತದೆ. ಅವರಿಗೆ ರಾಜತನದಿಂದ ಪ್ರಯೋಜನ ಲಭಿಸಿರಬಹುದು ಎಂದು ಜನರು ಭಾವಿಸುತ್ತಾರೆ. ಆದರೆ ಅಲ್ಲಾಹನಿಗೆ ಶರಣಾಗುವವರ ಸೇವಕರಾಗುವುದರಿಂದಲೇ ನಮಗೆ ಗೌರವ ಸಿಗುವುದು ಎಂದು ರಾಜತನಗಳಿಗೆ ಗೊತ್ತಿದೆ. (ಅಲ್ಲಾಹು ತಆಲ ಸೇ ಸಚ್ಚ ಔರ್ ಹಖೀಖಿ ತಅಲ್ಲುಖ್ ಖಿಎಮ್ ಕರ್ನೆ ಮೇಹೀ ಹಮಾರಿ ಕಾಮಿಯಾಬಿ ಹೈ, ಅನ್ವಾರುಲ್ ಉಲೂಮ್, ಸಂಪುಟ–21, ಪುಟ–99)

ನಂತರ ಮತ್ತೊಂದು ಸ್ಥಳದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನೋಡಿ! ಅಬೂಬಕರ್ ಅರಸರಾದರು. ಆದರೆ ಅವರು ಅರಸರಾಗುವುದು ಅಸಾಧ್ಯವೆಂದು ಅವರ ತಂದೆ ಭಾವಿಸಿದರು. ಏಕೆಂದರೆ ಅವರು ಸರ್ವಶಕ್ತನಾದ ಅಲ್ಲಾಹನಿಂದ ಅರಸತನವನ್ನು ಪಡೆದಿದ್ದರು. ಅವರಿಗೆ ಹೋಲಿಸಿದರೆ, ತೈಮೂರ್

ಕೂಡ ಓರ್ವ ಶ್ರೇಷ್ಠ ರಾಜನಾಗಿದ್ದನು ಆದರೆ ಅವನ ಪ್ರಾಪಂಚಿಕ ಯೋಜನೆಗಳಿಂದ ಅವನು ರಾಜನಾದನು. ನೆಪೋಲಿಯನ್ ಸಹ ಮಹಾನ್ ರಾಜನಾಗಿದ್ದನು ಆದರೆ ಅವನು ತನ್ನ ಕಠಿಣ ಪರಿಶ್ರಮ ಮತ್ತು ಲೌಕಿಕ ವಿಧಾನಗಳಿಂದ ರಾಜನಾದನು. ನಾದಿರ್ ಶಾ ಕೂಡ ಒಬ್ಬ ಮಹಾನ್ ರಾಜನಾಗಿದ್ದನು ಆದರೆ ಅವನು ಸಹ ತನ್ನ ವೈಯಕ್ತಿಕ ಶ್ರಮ ಮತ್ತು ಪ್ರಯತ್ನ ಮತ್ತು ಲೌಕಿಕ ವಿಧಾನಗಳ ಮೂಲಕ ರಾಜ್ಯವನ್ನು ಪಡೆದನು. ಹೀಗೆ ರಾಜ್ಯವನ್ನು ಎಲ್ಲರಿಗೂ ನೀಡಲಾಯಿತು. ಆದರೆ ತೈಮೂರ್ ಪುರುಷರಿಂದ ರಾಜ್ಯವನ್ನು ಪಡೆದನು ಎಂದು ನಾವು ಹೇಳುತ್ತೇವೆ. ಆದರೆ ಹಝ್ರತ್ ಅಬೂಬಕರ್(ರ) ಅವರಿಗೆ ರಾಜ್ಯವು ಸರ್ವಶಕ್ತನಾದ ಅಲ್ಲಾಹನಿಂದ ಲಭಿಸಿತು. ನಾವು ನೆಪೋಲಿಯನ್ ಪ್ರಾಪಂಚಿಕ ವಿಧಾನಗಳ ಮೂಲಕ ರಾಜ್ಯವನ್ನು ಪಡೆದನೆಂದು ಹೇಳುತ್ತೇವೆ, ಆದರೆ ಹಝ್ರತ್ ಉಮರ್(ರ) ಅವರು ಸರ್ವಶಕ್ತನಾದ ಅಲ್ಲಾಹನಿಂ ರಾಜ್ಯವನ್ನು ಪಡೆದರು. ಚಂಗೇಸ್ ಖಾನ್ ಪ್ರಾಪಂಚಿಕ ವಿಧಾನದಿಂದ ರಾಜ್ಯವನ್ನು ಪಡೆದನು ಎಂದು ನಾವು ಹೇಳುತ್ತೇವೆ, ಆದರೆ ಹಝ್ರತ್ ಉಸ್ಮಾನ್(ರ) ಅವರಿಗೆ ರಾಜ್ಯವನ್ನು ಅಲ್ಲಾಹನಿಂದ ನೀಡಲಾಯಿತು. ನಾದಿರ್ ಷಾ ಲೌಕಿಕ ವಿಧಾನಗಳ ಮೂಲಕ ರಾಜನಾದನೆಂದು ನಾವು ಹೇಳುತ್ತೇವೆ, ಆದರೆ ಹಝ್ರತ್ ಅಲಿ(ರ) ಅವರಿಗೆ ಸರ್ವಶಕ್ತನಾದ ಅಲ್ಲಾಹನು ರಾಜ್ಯವನ್ನು ನೀಡಿದನು.

ಹೀಗೆ ರಾಜ್ಯಗಳು ಎಲ್ಲರು ಪಡೆದರು, ಲೌಕಿಕ ರಜರುಗಳ ವೈಭವವೂ ಇತ್ತು, ದರ್ಪವೂ ಇತ್ತು. ಅವರ ಕಾನೂನು ಸಹ ನಡೆಯುತ್ತಿತ್ತು ಮತ್ತು ಖಲೀಫರ ಕಾನೂನು ಸಹ ನಡೆಯುತ್ತಾ ಇತ್ತು. ಅವರ ಕಾನೂನು ಅಬೂಬಕರ್(ರ), ಉಮರ್(ರ), ಉಸ್ಮಾನ್(ರ) ಮತ್ತು ಅಲಿ(ರ) ಅವರಿಗಿಂತ ಹೆಚ್ಚು ಚಾಲ್ತಿಯಲ್ಲಿತ್ತು. ಆದರೆ ಇವರನ್ನು ಮಹೋನ್ನತನಾದ ಅಲ್ಲಾಹನಿಂದ ರಾಜರನ್ನಾಗಿ ನೇಮಿಸಲಾಯಿತು" ಎಂದರೆ ಈ ನಾಲ್ವರು "ಮತ್ತು ಅವರು ಲೌಕಿಕ ರಾಜರಾಗಿದ್ದವರು ಮನುಷ್ಯರಿಂದ ರಾಜರಾದರು". ಆದ್ದರಿಂದ ಪೈಗಂಬರ್(ಸ) ಅವರು ಹೇಳಿದಾಗ: ಒಬ್ಬ ವ್ಯಕ್ತಿಯು ಯಾವುದೇ ಪ್ರಮುಖ ಕೆಲಸ ಮಾಡುವ ಮೊದಲು ಬಿಸ್ಮಿಲ್ಲಾಹ್ ಪಠಿಸುವುದಿಲ್ಲವೋ ಅವರು ಅಲ್ಲಾಹನ ಅನುಗ್ರಹವನ್ನು ಪಡೆಯಲು ಸಾಧ್ಯವಿಲ್ಲ. ಅವರು(ಸ) ಇಲ್ಲಿ ಬಿಸ್ಮಿಲ್ಲಾಹ್ ದ ಅನುಗ್ರಹವನ್ನು ಉಲ್ಲೇಖಿಸುತ್ತಿದ್ದಾರೆ. ಇದರಿಂದ ಅವನು ತನ್ನ ಉದ್ದೇಶದಲ್ಲಿ ವಿಫಲನಾಗುತ್ತಾನೆ ಎಂದು ಅರ್ಥವಲ್ಲ. ಬದಲಿಗೆ, ಅವನು ಸರ್ವಶಕ್ತನಾದ ಅಲ್ಲಾಹನಿಂದ ಆ ಗುರಿಯನ್ನು ಪಡೆಯಲು ಸಾಧ್ಯವಿಲ್ಲ ಎಂದರ್ಥ. ಸರ್ವಶಕ್ತನಾದ ಅಲ್ಲಾಹನನು ನೀಡಬೇಕಾದ ರಾಜ್ಯವನ್ನು ಹಝ್ರತ್ ಅಬೂಬಕರ್(ರ), ಉಮರ್(ರ), ಉಸ್ಮಾನ್(ರ) ಮತ್ತು ಅಲಿ(ರ) ಅವರಿಗೆ ನೀಡಲಾಯಿತು. ಅವರನ್ನು ಬಿಟ್ಟರೆ ಬೇರೆ ಯಾರಿಗೂ ಸಿಗಲಿಲ್ಲ. ಇತರರು ಪಡೆದ ರಾಜ್ಯವು ಸೈತಾನನಿಂದ ಪಡೆದರು ಅಥವಾ ಮಾನವರಿಂದ ಪಡೆದರು. ಇಲ್ಲದಿದ್ದರೆ, ಲೆನಿನ್, ಸ್ಟಾಲಿನ್ ಮತ್ತು ಮಲ್ನಿಕೋವ್ ಬಿಸ್ಮಿಲ್ಲಾವನ್ನು ಓದಿರಲಿಲ್ಲ, ಆದರೆ ಅವರಿಗೆ ರಾಜಪ್ರಭುತ್ವವೂ ಸಿಕ್ಕಿತು. ರೂಸ್ವೆಲ್ಟ್, ಟ್ರೂಮನ್ ಮತ್ತು ಐಸೆನ್ಹೋವರ್ ಕೂಡ ಬಿಸ್ಮಿಲ್ಲಾವನ್ನು ಪಠಿಸಲಿಲ್ಲ, ಆದರೆ ಅವರು ರಾಜಪ್ರಭುತ್ವವನ್ನು ಸಹ ಪಡೆದರು. ಅವರಿಗೆ ಬಿಸ್ಮಿಲ್ಲಾ ಗೊತ್ತಿರಲಿಲ್ಲ, ಅಥವಾ ಅವರು ತಮ್ಮ ಹೃದಯದಲ್ಲಿ ಬಿಸ್ಮಿಲ್ಲಾವನ್ನು ಗೌರವಿಸುತ್ತಿರಲಿಲ್ಲ. ಆದ್ದರಿಂದ ಬಿಸ್ಮಿಲ್ಲಾಹ್ ಪಠಿಸದೆ ಒಬ್ಬನು ಅಲ್ಲಾಹನಿಂದ ಅನುಗ್ರಹವನ್ನು ಪಡೆಯುವುದಿಲ್ಲ ಎಂದು ಪೈಗಂಬರ್(ಸ) ಅವರು ಹೇಳಿದಾಗ, ಅದರ ಅರ್ಥ ಅವರು ಸರ್ವಶಕ್ತ ಅಲ್ಲಾಹನಿಂದ ಏನನ್ನೂ ಸ್ವೀಕರಿಸುವುದಿಲ್ಲ ಎಂದು ಅರ್ಥೈಸಿದರು. ಪ್ರತಿ ಪ್ರಮುಖ ಕೆಲಸದ ಮೊದಲು ಬಿಸ್ಮಿಲ್ಲಾಹ್ ವನ್ನು ಪಠಿಸುವವನು ಮಾತ್ರ ಸರ್ವಶಕ್ತನಾದ ಅಲ್ಲಾಹನಿಂದ ಅನುಗ್ರಹಗಳನ್ನು ಪಡೆಯುತ್ತಾನೆ. ಸರ್ವಶಕ್ತನಾದ ಅಲ್ಲಾಹನಿಂದ ಪಡೆದದ್ದು ಹೆಚ್ಚು ಅನುಗ್ರಹದಾಯಕವೇ ಅಥವಾ ಜನರಿಂದ ಲಭಿಸುವುದು ಹೆಚ್ಚು ಅನುಗ್ರಹದಾಯಕ ಎಂದು ಈಗ ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬಹುದು. ಮಾನವನ ಮೂಲಕ ಪಡೆದ ರಾಜ್ಯವನ್ನು ಮುಚ್ಚಬಹುದು, ಆದರೆ ಸರ್ವಶಕ್ತನಾದ ಅಲ್ಲಾಹನು ನೀಡಿದ ರಾಜ್ಯವನ್ನು ಮುಚ್ಚಲಾಗುವುದಿಲ್ಲ.

ಇಂದು ಮುಸ್ಲಿಮರು ಈ ವಿಷಯವನ್ನು ಅರ್ಥಮಾಡಿಕೊಳ್ಳಬೇಕು. ಅವರು ಬಿಸ್ಮಿಲ್ಲಾಹ್ ಅನ್ನು ಸಹ ಪಠಿಸುತ್ತಾರೆ, ಆದರೆ ಅದು ಸಹ ಬಾಹ್ಯವಾಗಿ ಬಾಯಿಯಿಂದ ಮಾತ್ರ ಪಠಿಸುತ್ತಿದ್ದಾರೆ ಮನಸ್ಸಿನಿಂದ ಪಠಿಸುತ್ತಿಲ್ಲ ಎಂದು ತೋರುತ್ತದೆ.

ನಂತರ ಅವರು(ರ) ಬರೆಯುತ್ತಾರೆ: ಯಝೀದ್ ಕೂಡ ಒಬ್ಬ ರಾಜನಾಗಿದ್ದನು. ಅವನು ಎಷ್ಟು ಹೆಮ್ಮೆಪಡುತ್ತಿದ್ದನು. ಅವನಿಗೆ ಅಧಿಕಾರದ ಆವೇಶ ತುಂಬ ಇತ್ತು. ಅವನು ಪೈಗಂಬರ್(ಸ) ಅವರ ಕುಟುಂಬವನ್ನು ನಾಶಪಡಿಸಿದನು. ಅವರು ಬಾಹ್ಯವಾಗಿ ತನ್ನನ್ನು ಮುಸ್ಲಿಂ ಎಂದು ಕರೆದುಕೊಳ್ಳುತ್ತಿದ್ದನು. "ಅವನು ಪೈಗಂಬರ್(ಸ) ಅವರ ಮಕ್ಕಳನ್ನು ಕೊಂದನು ಮತ್ತು ಅವನ ಕತ್ತು ಇಳಿಸಲಿಲ್ಲ." ಅವನು ಹಠಮಾರಿಯಾಗಿದ್ದನು "ನನ್ನ ಮುಂದೆ ಯಾರೂ ಮಾತನಾಡುವುದಿಲ್ಲ ಎಂದು ಅವನು ಭಾವಿಸಿದನು.

ಹಝ್ರತ್ ಅಬೂಬಕರ್(ರ) ಕೂಡ ರಾಜರಾದರು. ಆದರೆ ಅವರಲ್ಲಿ ವಿನಮ್ರ ಭಾವ ಇತ್ತು ಮತ್ತು ಅವರು ವಿಧೇಯರಾಗಿದ್ದರು. ಜನರ ಸೇವೆ ಮಾಡಲು ಅಲ್ಲಾಹನು ನನ್ನನ್ನು ನೇಮಿಸಿದ್ದಾನೆ ಎಂದು ಅವರು ಹೇಳುತ್ತಿದ್ದರು. ಮತ್ತು ಸೇವೆಗಾಗಿ ನನಗೆ ಸಿಗುವ ಸಮಯವೂ ಅಲ್ಲಾಹನ ಕಡೆಯಿಂದ ನನ್ನ ಮೇಲೆ ಕರುಣೆಯಾಗಿದೆ.

ಆದರೆ ಯಝೀದ್ ನನ್ನ ತಂದೆಯಿಂದ ನನಗೆ ರಾಜ್ಯ ಸಿಕ್ಕಿತು ಎಂದು ಹೇಳುತ್ತಿದ್ದನು. ನನಗೆ ಬೇಕಾದವರನ್ನು ನಾನು ಕೊಲ್ಲುತ್ತೇನೆ ಮತ್ತು ನನಗೆ ಬೇಕಾದವರನ್ನು ಬದುಕಿಸುತ್ತೇನೆ. ಬಾಹ್ಯವಾಗಿ ನೋಡಿದರೆ ಯಝೀದ್ ತನ್ನ ರಾಜ್ಯದಲ್ಲಿ ಹಝ್ರತ್ ಅಬೂಬಕರ್(ರ) ಅವರಿಗಿಂತ ಹೆಚ್ಚು ಶಕ್ತಿಯನ್ನು ಹೋಂದಿದ್ದನು. ನಾನು ಪಾರಿವಾರದ ರಾಜನಾಗಿದ್ದೇನೆ ಎಂದು ಹೇಳುತ್ತಿದ್ದನು. ನನ್ನ ಮುಂದೆ ಮಾತನಾಡುವ ಶಕ್ತಿ ಯಾರಿಗಿದೆ? ಆದರೆ ಹಝ್ರತ್ ಅಬೂಬಕರ್(ರ) ನನ್ನಲ್ಲಿ ರಾಜನಾಗುವ ಸಾಮರ್ಥ್ಯ ಎಲ್ಲಿದೆ ಎಂದು ಹೇಳುತ್ತಿದ್ದರು. ನನಗೆ ಏನನ್ನು ನೀಡಲಾಗಿತ್ತೋ ಅದನ್ನು ಸರ್ವಶಕ್ತನಾದ ಅಲ್ಲಾಹನು ನೀಡಿದ್ದಾನೆ. ನನ್ನ ಸ್ವಂತ ಬಲದಿಂದ ನಾನು ರಾಜನಾಗಲು ಸಾಧ್ಯವಾಗಲಿಲ್ಲ. ನಾನು ಎಲ್ಲರ ಸೇವಕನಾಗಿದ್ದೇನೆ. ನಾನು ಬಡವರ ಸೇವಕನಾಗಿದ್ದೇನೆ ಮತ್ತು ಶ್ರೀಮಂತರ ಸೇವಕನಾಗಿದ್ದೇನೆ. ನಾನೇನಾದರೂ ತಪ್ಪು ಮಾಡಿದ್ದಲ್ಲಿ ಈಗಲೇ ನನ್ನಿಂದ ಸೇಡು ತೀರಿಸಿಕೊಳ್ಳಿ. ಪುನರುತ್ಥಾನದ ದಿನದಂದು ನನ್ನನ್ನು ಹಾಳು ಮಾಡಬೇಡಿ." ಹಝ್ರತ್ ಅಬೂಬಕರ್(ರ)ರವರ ಬಗ್ಗೆ "ಓರ್ವ ಕೇಳುಗನು ಇವರು ಯಾರು ಎಂದು ಹೇಳಬಹುದು. ಇವರಿಗೆ ಓರ್ವ ಕಮಾಂಡರ್‌ನ ಸ್ಥಾನಮಾನವೂ ಇಲ್ಲ. ಆದರೆ ಅವನು ಯಝೀದ್‌ನ ಮಾತುಗಳನ್ನು ಕೇಳಿದರೆ ಕೈಸರ್ ಮತ್ತು ಕಸ್ರಾಗಳಿಗೆ ಸೇರಿದ ಮಾತುಗಳು ಇದಾಗಿವೆ ಎಂದು ಹೇಳಬಹುದು. ಯಝೀದ್‌ನ ಮಾತುಗಳ ರಾಜರ ಮಾತುಗಳಾಗಿವೆ. "ಆದರೆ ಹಝ್ರತ್ ಅಬೂಬಕರ್(ರ) ನಿಧನರಾದಾಗ ಅವರ ಪುತ್ರರು, ಮೊಮ್ಮಕ್ಕಳು ಮತ್ತು ಮೊಮ್ಮಕ್ಕಳ ಮಕ್ಕಳು, ನಂತರ ಮರಿಮೊಮ್ಮಕ್ಕಳು ಮತ್ತು ನಂತರ ಮೊಮ್ಮಕ್ಕಳು ಮತ್ತು ಮೊಮ್ಮಕ್ಕಳು ಎಂಬ ಪ್ರಶ್ನೆಯೇ ಇಲ್ಲದ ಪೀಳಿಗೆಯು ಅಬೂಬಕರ್(ರ) ಅವರೊಂದಿಗಿನ ಸಂಬಂಧದ ಬಗ್ಗೆ ಸಮಾನವಾಗಿ ಹೆಮ್ಮೆಪಡುತ್ತಾರೆ. ಅವರಲ್ಲದೆ, ಅಬೂಬಕ್ಕರ್(ರ) ಅವರಿಗೆ ಸಂಬಂಧವೇ ಇಲ್ಲದವರು, ಅವರು ನಿಮ್ಮ ಕುಟುಂಬಕ್ಕೆ ಸೇರದವರನ್ನು ಭೇಟಿ ಮಾಡದ ಜನರು, ನಿಮ್ಮ ಕಥೆಗಳನ್ನು ಓದಿದರೆ ಇಂದಿಗೂ ಅವರ ಕಣ್ಣಲ್ಲಿ ನೀರು ಬರುತ್ತದೆ. ಅವರ ಪ್ರೀತಿ ಉತ್ಕಟವಾಗಿದೆ. ಯಾರಾದರೂ ಹಝ್ರತ ಅಬೂಬಕರ್(ರ) ಅವರ ಬಗ್ಗೆ ಕೆಟ್ಟದಾಗಿ ಮಾತನಾಡಿದರೆ ಅವರ ರಕ್ತವು ಕುದಿಯಲು ಪ್ರಾರಂಭಿಸುತ್ತದೆ. ಹೀಗೆ ಅನ್ಯರೂ ಸಹ ಅವರಿಗಾಗಿ ಪ್ರಾಣ ತ್ಯಾಗಕ್ಕೆ ಸಿದ್ಧರಾಗಿರುತ್ತಾರೆ ನಿಮ್ಮ ಹೆಸರು ಕೇಳಿದ ಪ್ರತಿಯೊಬ್ಬರು **ರದಿಯಲ್ಲಾಹು ತಆಲಾ ಅನ್ಹು** ಎಂದು ಹೇಳುತ್ತಾರೆ. ಇನ್ನೊಂದೆಡೆ ತಾನು ರಾಜ ಪರಂಪರೆಯವನು ಎಂದು ಹೇಳಿಕೊಳ್ಳುತ್ತಿದ್ದ ಯಝೀದ್ ಅವನು ನಿಧನ ಹೊಂದಿದ ನಂತರ ಜನರು ಅವನ ಜಾಗದಲ್ಲಿ ಆತನ ಪುತ್ರನನ್ನು ರಾಜನನ್ನಾಗಿ ಮಾಡಿದರು. ಶುಕ್ರವಾರ ಬಂದಾಗ, ಅವರು ಧರ್ಮಪೀಠದ ಮೇಲೆ ನಿಂತು ಹೇಳಿದನು: ಓ ಜನರೇ! ಅವರಿಗಿಂತ ಹೆಚ್ಚು ರಾಜತ್ವಕ್ಕೆ ಅರ್ಹರು ಇದ್ದಾಗ ನನ್ನ ಅಜ್ಜ ರಾಜನಾದನು. ಅವರಿಗಿಂತ ಹೆಚ್ಚು ಅರ್ಹರು ಇದ್ದಾಗ ನನ್ನ ತಂದೆಯು ರಾಜನಾದರು. ಈಗ ನನಗಿಂತ ಹೆಚ್ಚು ಜನರು ಅರ್ಹರು ಇದ್ದರೂ ನನ್ನನ್ನು ರಾಜನನ್ನಾಗಿ ಮಾಡಲಾಗಿದೆ. ಓ ಜನರೇ! ನನ್ನಿಂದ ಈ ಹೊರೆ ಹೊರೆಯನು ಸಾಧ್ಯವಿಲ್ಲ. ನನ್ನ ತಂದೆ ಮತ್ತು ನನ್ನ ಅಜ್ಜ ಅರ್ಹರ ಹಕ್ಕುಗಳನ್ನು ಕಸಿದುಕೊಂಡಿದ್ದಾರೆ ಆದರೆ ನಾನು ಇದಕ್ಕಾಗಿ ಸಿದ್ಧವಿಲ್ಲ. ನಿಮಗೆ ಬೇಕಾದವರಿಗೆ ನಿಮ್ಮ ಖಿಲಾಫತ್ ಅನ್ನು ನೀಡಿ. ನಾನು ಅದಕ್ಕೆ ಅರ್ಹನಲ್ಲ ಅಥವಾ ನನ್ನ ಪೂರ್ವಜರು ಅದಕ್ಕೆ ಅರ್ಹರೆಂದು ನಾನು ಪರಿಗಣಿಸುವುದಿಲ್ಲ. ಅವರು ದಬ್ಬಾಳಿಕೆಯ ಮತ್ತು ಕ್ರೂರವಾಗಿ ಆಡಳಿತವನ್ನು ತೆಗೆದುಕೊಂಡರು. ನಾನು ಈಗ ಅವರ ಹಕ್ಕುದಾರರನ್ನು ಅವರ ಹಕ್ಕನ್ನು ಹಿಂದಿರುಗಿಸಲು ಬಯಸುತ್ತೇನೆ. ಹೀಗೆ ಹೇಳಿ ಮನೆಗೆ ತೆರಳಿದನು. ಈ ಘಟನೆಯನ್ನು ತಾಯಿ ಕೇಳಿದಾಗ ಅವರು ಹೇಳಿದರು. ಮೂರ್ಖನೇ! ನೀನು ನಿನ್ನ ಪೂರ್ವಜರ ಮೂಗನ್ನು ಕತ್ತರಿಸಿದ್ದೀಯ. ಅದಕ್ಕೆ ಅವನು ಉತ್ತರಿಸಿದನು. ತಾಯಿ! ಸರ್ವಶಕ್ತನಾದ ಅಲ್ಲಾಹನು ನಿಮಗೆ ಬುದ್ಧಿಯನ್ನು ನೀಡಿದ್ದರೆ, ನಾನು ನನ್ನ ಪೂರ್ವಜರ ಮೂಗನ್ನು ಕತ್ತರಿಸಲಿಲ್ಲ ಅವರ ಮೂಗನ್ನು ಜೋಡಿಸಿದ್ದೇನೆ ಎಂದು ನೀವು ಅರ್ಥಮಾಡಿಕೊಳ್ಳುತ್ತಿದ್ದೀರಿ. ತದನಂತರ ಅವನು ಸಾಯುವವರೆಗೂ ಮನೆಯಿಂದ ಹೊರಗೆ ಬರದೆ ಮನೆಯ ಮೂಲೆಯಲ್ಲಿ ಕುಳಿತಿದ್ದನು. (ಖುತ್ಬಾತೆ ಮಹ್ಮೂದ್, ಸಂಪುಟ–34, ಪುಟ–86–88)

ಹೀಗೆ ಸರ್ವಶಕ್ತನಾದ ಅಲ್ಲಾಹನಿಂದ ಲಭಿಸುವ ಈ ರಾಜ್ಯದ ಹಕ್ಕನ್ನು ಸಹ ನೀಡಲಾಗುತ್ತದೆ. ಇದು ನಮ್ಮ ಮುಸ್ಲಿಂ ನಾಯಕರಿಗೆ, ರಾಜರಿಗೆ ಪಾಠವೂ ಆಗಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇಸ್ಲಾಮಿನ ಸೇವೆ ಮತ್ತು ದೀನಿಗಾಗಿ ತ್ಯಾಗಗಳನ್ನು ಮಾಡಿದ ಕಾರಣದಿಂದ ಇಂದು ಹಝ್ರತ್ ಅಬೂಬಕರ್(ರ)ರಿಗೆ ಲಭಿಸಿದ ಉನ್ನತ ಸ್ಥಾನವು ಲೋಕದ ದೊಡ್ಡ ದೊಡ್ಡ ಅರಸರಿಗೆ ಲಭಿಸಿದೆಯೇ? ಇಂದು ಲೋಕದ ಅರಸರಲ್ಲಿ ಒಬ್ಬ ಅರಸನಿಗೂ ಹಝ್ರತ್ ಅಬೂಬಕರ್(ರ)ರಿಗೆ ಲಭಿಸಿದಷ್ಟು ಶ್ರೇಷ್ಠತೆ ಲಭಿಸಿಲ್ಲ. ಮಾತ್ರವಲ್ಲ, ಹಝ್ರತ್ ಅಬೂಬಕರ್(ರ)ರ ಮಾತನ್ನು ಬಿಡಿರಿ, ಹಝ್ರತ್ ಅಬೂಬಕರ್(ರ)ರ ಸೇವಕರಿಗೆ ಲಭಿಸಿದ ಗೌರವ ಕೂಡ ದೊಡ್ಡ ದೊಡ್ಡ ಅರಸರಿಗೆ ಮುಸ್ಲಿಮರು ನೀಡುವುದಿಲ್ಲ. ಅಷ್ಟು ಮಾತ್ರವಲ್ಲ, ಸತ್ಯವೇನೆಂದರೆ, ಹಝ್ರತ್ ಅಬೂಬಕರ್(ರ)ರ ನಾಯಿ ಕೂಡ ನಮಗೆ ಬಹಳ ಆದರಣೀಯ ವ್ಯಕ್ತಿಗಳಿಗಿಂತ ಹೆಚ್ಚು ಪ್ರಿಯ. ಏಕೆಂದರೆ, ಹಝ್ರತ್ ಅಬೂಬಕರ್(ರ) ಮುಹಮ್ಮದ್ ರಸೂಲುಲ್ಲಾಹ್(ಸ)ರ ಮನೆಯ ಸೇವಕರಾಗಿದ್ದರು. ಯಾರು ಮುಹಮ್ಮದ್(ಸ)ರ ಮನೆಯ ಸೇವಕರಾಗಿರುವರೋ ಅವರ ಪ್ರತಿಯೊಂದು ವಸ್ತು ನಮಗೆ ಇಷ್ಟವಾಗುತ್ತದೆ. ಈಗ ಯಾವನೇ ವ್ಯಕ್ತಿಗೆ ಆ ಗೌರವಭಾವವನ್ನು ನಮ್ಮ ಹೃದಯಗಳಿಂದ ಅಳಿಸಿ ಹಾಕಲು ಸಾಧ್ಯವಲ್ಲ. (ಖುತ್ಬಾತೆ ಮಹ್ಮೂದ್, ಸಂಪುಟ–19, ಪುಟ–681)

ಪೈಗಂಬರ್(ಸ) ಅವರನ್ನು ಅವಮಾನಿಸುತ್ತಿದ್ದಾರೆ ಎಂದು ನಮ್ಮ ಮೇಲೆ ಆರೋಪಿಸುತ್ತಾರೆ, ಆದರೆ ನಮ್ಮ ಆಲೋಚನೆಗಳು ಇದಾಗಿವೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ತಡವಾಗಿ ಇಸ್ಲಾಂ ಸ್ವೀಕಾರ ಮಾಡಿದ್ದ ಹಝ್ರತ್ ಅಬೂಬಕರ್(ರ)ರ ಒಬ್ಬ ಪುತ್ರನು ಒಮ್ಮೆ ಹಝ್ರತ್ ಪೈಗಂಬರ್(ಸ)ರ ಮಸೀದಿಯಲ್ಲಿ ಕುಳಿತುಕೊಂಡಿದ್ದರು. ಅನೇಕ ಮಾತುಕತೆಗಳು ನಡೆಯುತ್ತಿದ್ದುವು. ಹೀಗೆ ಮಾತು ಮಾತಿನಲ್ಲಿ ಆ ಪುತ್ರನು ಹಝ್ರತ್ ಅಬೂಬಕರ್(ರ)ರೊಡನೆ ಹೀಗೆ ಹೇಳಿದರು: ಒಂದು ಯುದ್ಧ ವೇಳೆಯಲ್ಲಿ ನಾನು ಒಂದು ಬಂಡೆಗಲ್ಲಿನ ಹಿಂದೆ ಅಡಗಿ ನಿಂತಿದ್ದೆ. ನೀವು ನನ್ನ ಮುಂದಿನಿಂತ ಎರಡು ಬಾರಿ ದಾಟಿ ಹೋದಿರಿ. ನಾನು ಬಯಸಿದ್ದರೆ, ನಿಮ್ಮನ್ನು ಕೊಲ್ಲಬಹುದಾಗಿತ್ತು. ಆದರೆ ನೀವು ನಮ್ಮ ತಂದೆಯಾಗಿದ್ದೀರಿ ಎಂಬ ಯೋಚನೆಯಿಂದ ನಾನು ಕೈಯೆತ್ತಲಿಲ್ಲ. ಇದನ್ನು ಕೇಳಿ ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ನಿನ್ನನ್ನು ಆಗ ನೋಡಿರಲಿಲ್ಲ. ನಾನು ನಿನ್ನನ್ನು ನೋಡಿದ್ದರೆ, ನೀನು ಅಲ್ಲಾಹನ ಶತ್ರುವಾಗಿ ಯುದ್ಧ

ಮೈದಾನದಲ್ಲಿ ಬಂದ ಕಾರಣದಿಂದ ನಾನು ನಿನ್ನನ್ನು ಖಂಡಿತ ವಧಿಸುತ್ತಿದ್ದೆ.
(ಖುತ್ಬಾತೆ ಮಹ್ಮೂದ್, ಸಂಪುಟ–16, ಪುಟ–621–622)

ಹಝ್ರತ್ ಅಬೂಬಕರ್(ರ)ರ ಶ್ರೇಷ್ಠ ಸ್ವಭಾವಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಬೂಬಕರ್(ರ) ಎಂತಹ ವ್ಯಕ್ತಿಯಾಗಿದ್ದರು ಎಂದರೆ, ಅವರ ಪ್ರಕೃತದಲ್ಲಿ ಸೌಭಾಗ್ಯದ ಎಣ್ಣೆ ಮತ್ತು ಬತ್ತಿ ಮೊದಲೇ ಇದ್ದುವು. ಆದ್ದರಿಂದ ರಸೂಲುಲ್ಲಾಹ್(ಸ)ರ ಪರಿಶುದ್ಧ ಬೋಧನೆಗಳು ಅದನ್ನು ತಕ್ಷಣವೇ ಪ್ರಭಾವಿತಗೊಳಿಸಿ ಬೆಳಗಿಸಿತು. ಅವರು ಹಝ್ರತ್ ಪೈಗಂಬರ್(ಸ)ರೊಂದಿಗೆ ಯಾವುದೇ ಚರ್ಚೆ ನಡೆಸಲಿಲ್ಲ, ಯಾವುದೇ ಕುರುಹು ಮತ್ತು ದೃಷ್ಟಾಂತವನ್ನು ಬೇಡಲಿಲ್ಲ. ಆಲಿಸಿದ ಕೂಡಲೇ, ನೀವು ಪ್ರವಾದಿತ್ವ ವಾದವನ್ನು ಮಾಡಿದ್ದೀರಾ ಎಂದು ಮಾತ್ರ ಕೇಳಿದರು. ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದಾಗ, ಅವರು ಹೀಗೆ ಹೇಳಿದರು: ನಾನು ಮೊತ್ತಮೊದಲಾಗಿ ನಂಬುತ್ತೇನೆ ಎಂಬುವುದಕ್ಕೆ ನೀವು ಸಾಕ್ಷಿಯಾಗಿರಿ, ಪ್ರಶ್ನೆಗಳನ್ನು ಕೇಳುವವರು ಸನ್ಮಾರ್ಗವನ್ನು ಗಳಿಸುವ ಸಾಧ್ಯತೆ ಬಹಳ ಕಡಿಮೆಯಾಗಿರುತ್ತದೆ ಎಂದು ಅನುಭವದಿಂದ ತಿಳಿದುಬರುತ್ತದೆ. ಆದರೆ ಸದ್ಭಾವನೆ ಮತ್ತು ಸಹನೆ ತೋರಿಸುವವರು ಸನ್ಮಾರ್ಗದಿಂದ ಪೂರ್ಣವಾದ ಪಾಲನ್ನು ಪಡೆಯುತ್ತಾರೆ. ಇದರ ಮಾದರಿ ಅಬೂಬಕರ್(ರ) ಮತ್ತು ಅಬೂಜಹಲ್ ಇಬ್ಬರಲ್ಲೂ ಕಾಣಬಹುದಾಗಿದೆ. ಅಬೂಬಕರ್(ರ) ವಾಗ್ವಾದ ಮಾಡಲಿಲ್ಲ, ದೃಷ್ಟಾಂತಗಳನ್ನು ಕೇಳಲಿಲ್ಲ, ಆದರೆ ದೃಷ್ಟಾಂತವನ್ನು ಆವಶ್ಯಪಡುವವರಿಗೆ ಲಭಿಸದ್ದು ಹಝ್ರತ್ ಅಬೂಬಕರ್(ರ)ರಿಗೆ ಲಭಿಸಿತು. ಅವರು ದೃಷ್ಟಾಂತಗಳ ಮೇಲೆ ದೃಷ್ಟಾಂತಗಳನ್ನು ನೋಡಿದರು ಮತ್ತು ಸ್ವತಃ ಒಬ್ಬ ಮಹತ್ತಾದ ದೃಷ್ಟಾಂತವಾದರು. ಅಬೂಜಹಲ್ ಕುತರ್ಕ ಮಾಡಿದನು, ವಿರೋಧ ಮತ್ತು ಮೂಢತೆಯಿಂದ ದೂರ ಸರಿಯಲಿಲ್ಲ. ಅವನು ಕೂಡ ದೃಷ್ಟಾಂತಗಳ ಮೇಲೆ ದೃಷ್ಟಾಂತಗಳನ್ನು ನೋಡಿದ್ದರೂ ಅವನಗೆ ಅವು ಪ್ರಯೋಜನಕಾರಿಯಾಗಲಿಲ್ಲ. ಕೊನೆಗೆ ಸ್ವತಃ ಇತರರಿಗೆ ದೃಷ್ಟಾಂತವಾಗಿ ವಿರೋಧಿಯಾಗಿಯೇ ನಾಶವಾದನು. (ಮಲ್‌ಫೂಝಾತ್, ಸಂಪುಟ–2, ಪುಟ–165, 1984 ಆವೃತಿ)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮಕ್ಕದ ಮಣ್ಣು ಒಂದೇ ಆಗಿತ್ತು. ಅದರಲ್ಲೇ ಅಬೂಬಕರ್(ರ) ಮತ್ತು ಅಬೂಜಹಲ್ ಜನಿಸಿದ್ದರು. ಎಲ್ಲ ವಿಭಾಗಗಳ ಮತ್ತು ಎಲ್ಲ ಪದವಿಗಳ ಕೋಟಿಗಟ್ಟಲೆ ಜನರು ಈಗ ಬಂದು ಸೇರುವ ಅದೇ ಮಕ್ಕವಾಗಿದೆ ಅದು. ಅದೇ ಭೂಮಿಯಲ್ಲಿ ಇಬ್ಬರೂ ಜನಿಸಿದ್ದರು. ಅವರಲ್ಲಿ ಅಬೂಬಕರ್(ರ) ತನ್ನ ಒಳಿತು ಮತ್ತು ಸತ್ಯಸಂಧತೆಯ ಕಾರಣದಿಂದ ಸನ್ಮಾರ್ಗವನ್ನು ಪಡೆದುಕೊಂಡು ಸಿದ್ದೀಖುಗಳ ಶ್ರೇಷ್ಠತೆಯನ್ನು ಗಳಿಸಿದರು. ಆದರೆ ಅಬೂಜಹಲ್ ತನ್ನ ದುಷ್ಟತನ, ಮೂಢತೆ, ಅನಾವಶ್ಯಕವಾದ ವೈರ ಮತ್ತು ಸತ್ಯದ ವಿರೋಧದ ಕಾರಣದಿಂದ ಕುಪ್ರಸಿದ್ಧರಾದರು ನೆನಪಿಡಿರಿ, ಔನತ್ಯವೆಂಬುದು ಎರಡೇ ವಿಧಗಳಲ್ಲಿ ಇರುತ್ತವೆ. ಒಂದು ರಹ್ಮಾನಿ ಮತ್ತೊಂದು ಶೈತಾನಿ. ಒಂದೇ ಜಾಗದಲ್ಲಿ ಇಬ್ಬರೂ ಇದ್ದರು. ಅಲ್ಲಾಹನ ಪೈಗಂಬರ್(ಸ) ಯಾರೊಡನೆಯೂ ಯಾವುದೇ ವ್ಯತ್ಯಾಸವನ್ನು ಮಾಡಿರಲಿಲ್ಲ. ಅಲ್ಲಾಹನು ನೀಡಿದ ಆದೇಶವನ್ನು ಅವರು ಒಂದೇ ರೀತಿಯಲ್ಲಿ ಎಲ್ಲರಿಗೂ ತಲುಪಿಸಿದರು. ಆದರೆ ದುರದೃಷ್ಟ ವಂಚಿತನಾಗುತ್ತಾನೆ. ಸೌಭಾಗ್ಯಶಾಲಿ ಸನ್ಮಾರ್ಗವನ್ನು ಪಡೆದು ಪರಿಪೂರ್ಣನಾದನು. ಅಬೂಜಹಲ್ ಮತ್ತು ಅವನ ಜೊತೆಗಾರರು ಅನೇಕ ದೃಷ್ಟಾಂತಗಳನ್ನು ನೋಡಿದರು. ದೈವಿಕ ಅನುಗ್ರಹಗಳ ಪ್ರಕಾಶಗಳನ್ನು ನೋಡಿದರು. ಆದರೆ ಯಾವುದೇ ಪ್ರಯೋಜನವನ್ನು ಪಡೆಯಲಿಲ್ಲ.
(ಮಲ್‌ಫೂಝಾತ್, ಸಂಪುಟ–2, ಪುಟ–164, 1984 ಆವೃತಿ)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೋಡಿರಿ, ಮಕ್ಕದಲ್ಲಿ ಹಝ್ರತ್ ಪೈಗಂಬರ್(ಸ) ಆಗಮಿಸಿದಾಗ ಅಬೂಜಹಲ್ ಕೂಡ ಮಕ್ಕದಲ್ಲೇ ಇದ್ದರು. ಹಝ್ರತ್ ಅಬೂಬಕರ್ ಸಿದ್ದೀಖ್(ರ) ಕೂಡ ಮಕ್ಕದಲ್ಲೇ ಇದ್ದರು. ಆದರೆ ಅಬೂಬಕರ್(ರ) ಪ್ರಕೃತಕ್ಕೆ ಸತ್ಯದೊಂದಿಗೆ ಎಂತಹ ಹೋಲಿಕೆಯಿತ್ತು ಎಂದರೆ ಅವರು ಮಕ್ಕದಲ್ಲಿ ಪ್ರವೇಶಿಸಿರಲಿಲ್ಲ. ಮಾರ್ಗದಲ್ಲೇ ಒಬ್ಬ ವ್ಯಕ್ತಿಯೊಡನೆ ಕೇಳಿದರು: ಹೊಸ ಸುದ್ದಿಯೇನಾದರೂ ಇದ್ದರೆ ಹೇಳು. ಅವನು ಹೇಳಿದನು: ಹಝ್ರತ್ ಪೈಗಂಬರ್(ಸ) ನುಬುವ್ವತ್ ವಾದವನ್ನು ಮಾಡಿರುವರು. ಆಗ ಅಲ್ಲೇ ಸತ್ಯವಿಶ್ವಾಸವನ್ನು ಕೈಗೊಂಡರು. ಯಾವುದೇ ದೃಷ್ಟಾಂತ ಮತ್ತು ಗುರುತನ್ನು ಕೇಳಲಿಲ್ಲ. ಆದರೆ ಅನಂತರ ಅನೇಕ ದೃಷ್ಟಾಂತಗಳನ್ನು ನೋಡಿದರು ಮತ್ತು ಸ್ವತಃ ಒಂದು ದೃಷ್ಟಾಂತವಾದರು. ಆದರೆ ಅಬೂಜಹಲ್ ಸಾವಿರಾರು ದೃಷ್ಟಾಂತಗಳನ್ನು ನೋಡಿಯೂ ವಿರೋಧ ಮತ್ತು ನರಾಕರಣೆಯಿಂದ ದೂರವಾಗಲಿಲ್ಲ.

ಇದರಲ್ಲಿರುವ ರಹಸ್ಯವೇನು? ಜನನ ಇಬ್ಬರದ್ದೂ ಒಂದೇ ಜಾಗದಲ್ಲಾಗಿತ್ತು. ಒಬ್ಬರು ಸಿದ್ದೀಖ್ ಆದರು. ಆದರೆ ಅಬುಲ್‌ಹಕಮ್ ಎಂದು ಕರೆಯಲ್ಪಡುತ್ತಿದ್ದವನು ಅಬೂಜಹಲ್ ಆದನು. ಅದರ ರಹಸ್ಯವೇನೆಂದರೆ, ಅವನ ಪ್ರಕೃತಕ್ಕೆ ಸತ್ಯದೊಂದಿಗೆ ಯಾವುದೇ ಸಾಮ್ಯತೆಯಿರಲಿಲ್ಲ. ಒಟ್ಟಿನಲ್ಲಿ ವಿಶ್ವಾಸದ ಕಾರ್ಯಗಳು ಸಾಮ್ಯತೆಯ ಆಧಾರದಲ್ಲಾಗಿರುತ್ತದೆ. (ಮಲ್‌ಫೂಝಾತ್, ಸಂಪುಟ–5, ಪುಟ–11–12. 1984 ಆವೃತಿ)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನ್ನ ಪ್ರಭು ನನಗೆ ಹೀಗೆ ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾನೆ: ಹಝ್ರತ್ ಅಬೂಬಕರ್ ಸಿದ್ದೀಖ್, ಹಝ್ರತ್ ಉಮರ್ ಫಾರೂಖ್ ಮತ್ತು ಹಝ್ರತ್ ಉಸ್ಮಾನ್(ರ) ಸಾತ್ವಿಕರೂ ಸತ್ಯವಿಶ್ವಾಸಿಗಳೂ ಅಲ್ಲಾಹನು ಆಯ್ಕೆ ಮಾಡಿದ ವ್ಯಕ್ತಿಗಳಲ್ಲಿ ಸೇರಿದವರೂ ದಯಾವಂತನಾದ ಅಲ್ಲಾಹನ ಅನುಗ್ರಹದಿಂದ ವಿಶಿಷ್ಟಗೊಂಡವರೂ ಆಗಿದ್ದರು. ಜ್ಞಾನಿಗಳಾದ ಅನೇಕರು ಅವರ ಸ್ವಭಾವ ಶ್ರೇಷ್ಠತೆಗಳ ಬಗ್ಗೆ ಸಾಕ್ಷ್ಯವಹಿಸಿದ್ದಾರೆ.

ಈ ಖ಼ಲೀಫರು ಅತ್ಯುನ್ನತನಾದ ಅಲ್ಲಾಹನ ಸಂಪ್ರೀತಿಗಾಗಿ ಸ್ವದೇಶವನ್ನು ತ್ಯಜಿಸಿದರು. ಪ್ರತಿಯೊಂದು ಯುದ್ಧದ ಬೆಂಕಿಯಲ್ಲಿ ಪ್ರವೇಶಿಸಿದರು. ಬೇಸಿಗೆಗಾಲದ ಮಧ್ಯಾಹ್ನದ ಬಿಸಿಲು ಮತ್ತು ಚಳಿಗಾಲದ ರಾತ್ರಿಯ ತಂಪಿನ ಪರಿವೆ ಮಾಡಲಿಲ್ಲ. ಬದಲಾಗಿ ಯುವಕರಂತೆ ಧರ್ಮದ ಮಾರ್ಗಗಳಲ್ಲಿ ತಲ್ಲೀನರಾಗಿದ್ದರು. ಸ್ವಂತ ಮತ್ತು ಪರರ ಕಡೆಗೆ ಆಕರ್ಷಿತರಾಗಿರಲಿಲ್ಲ. ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗಾಗಿ ಎಲ್ಲರಿಗೂ ವಿದಾಯ ಹೇಳಿದರು. ಅವರ ಸತ್ಕರ್ಮಗಳಲ್ಲಿ ಸುವಾಸನೆ ಮತ್ತು ಕೃತ್ಯಗಳಲ್ಲಿ ಸುಗಂಧವಿತ್ತು. ಇವೆಲ್ಲವೂ ಅವರ ಪದವಿಯ ತೋಟಗಳು ಮತ್ತು ಒಳಿತುಗಳ ತೋಟಗಳ ಕಡೆಗೆ ಬೊಟ್ಟು ಮಾಡುತ್ತದೆ. ಅದರ ತಣ್ಣನೆಯ ಗಾಳಿ ತನ್ನ ಸುಗಂಧಭರಿತ ಅಲೆಗಳ ಮೂಲಕ ಅವರ ರಹಸ್ಯಗಳ ಬಗ್ಗೆ ಸುಳಿವು ನೀಡುತ್ತದೆ. ಅವರ ಪ್ರಕಾಶಗಳು ತನ್ನ ಪೂರ್ಣ ತೇಜಸ್ಸಿನಿಂದ ನಮ್ಮ ಮೇಲೆ ಪ್ರಕಟವಾಗುತ್ತವೆ. (ಸಿರ್ರುಲ್ ಖಿಲಾಫ಼ ಅನುವಾದ, ಪುಟ–25–26)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನಾಣೆ, ಶೇಖೈನ್‌ರಾದ ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್ ಹಾಗೂ ಮೂರನೆಯದಾಗಿ ಧುನ್ನುರೈನ್‌ರಾದ ಹಝ್ರತ್ ಉಸ್ಮಾನ್‌ರನ್ನು(ರ) ಇಸ್ಲಾಮಿನ ಬಾಗಿಲುಗಳ ಮತ್ತು ಸೃಷ್ಟಿಗಳಲ್ಲಿ ಉತ್ತಮರಾದ ಮುಹಮ್ಮದ್ ರಸೂಲುಲ್ಲಾಹ್‌ರ ಸೈನ್ಯದ ಪ್ರಮುಖರನ್ನಾಗಿ ಅಲ್ಲಾಹನು ಮಾಡಿರುವನು. ಆದ್ದರಿಂದ ಯಾರು ಅವರ ಮಹತ್ವವನ್ನು ನಿರಾಕರಿಸಿತ್ತಾರೋ, ಅವರ ಖಚಿತ ಪುರಾವೆಗಳನ್ನು ನೀಚವೆಂದು ಭಾವಿಸುತ್ತಾರೋ, ಅವರನ್ನು ಗೌರವಿಸುವುದಿಲ್ಲವೋ, ಮಾತ್ರವಲ್ಲ ಅವರನ್ನು ನಿಂದಿಸುತ್ತಾರೋ, ಅವರನ್ನು ಬೈಯ್ಯಲು ನಾಲಗೆಯನ್ನು ಚಾಚುತ್ತಾರೋ, ಅವರಿಗೆ ದುರ್ಗತಿ ಉಂಟಾಗುವುದು ಮತ್ತು ಅವರಿಗೆ ಸತ್ಯವಿಶ್ವಾಸ ನಷ್ಟವಾಗುವುದು ಎಂಬ ಭಯ ನನಗಿದೆ.

ಮತ್ತು ಅವರನ್ನು ನೋಯಿಸಿದವರು, ಅವರನ್ನು ಶಪಿಸಿದರು ಮತ್ತು ಅವರನ್ನು ನಿಂದಿಸಿದರು, ನಂತರ ಅವರ ಹೃದಯದ ಕಠಿಣತೆ ಮತ್ತು ಕರುಣಾಮಯಿಯಾದ ಅಲ್ಲಾಹನ ಕೋಪವು ಅವರ ಅಂತ್ಯವಾಯಿತು. ಈ ನಿಷ್ಠಾವಂತರ ಮೇಲೆ ದ್ವೇಷ ಮತ್ತು ಅಸೂಯೆಯನ್ನು ಹೊಂದಿರುವುದು ತನ್ನ ಅನುಗ್ರಹವನ್ನು ತೋರಿಸುವ ಅಲ್ಲಾಹನ ಅತ್ಯಂತ ದೊಡ್ಡ ಸಂಪರ್ಕ ಕಡಿತಕ್ಕೆ ಇದು ಕಾರಣವಾಗುತ್ತದೆ ಮತ್ತು ಅವರೊಂದಿಗೆ ದ್ವೇಷವನ್ನು ಹೊಂದಿರುವ ವ್ಯಕ್ತಿಯ ಮೇಲೆ ಕರುಣೆಯ ಎಲ್ಲಾ ಮಾರ್ಗಗಳು ಕಡಿತಗೊಳಿಸಲಾಗುತ್ತದೆ ಮತ್ತು ಜ್ಞಾನ ಮತ್ತು ಬುದ್ಧಿವಂತಿಕೆಯ ಬಾಗಿಲುಗಳು ತೆರೆಯುವುದಿಲ್ಲ ಎಂದು ನಾನಗೆ ಬಹಳ ವರ್ಷಗಳ ಅನುಭವವಾಗಿದೆ ಮತ್ತು ನಾನು ಉದರ ಬಗ್ಗೆ ಮುಂಚೆಯೇ ತಿಳಿಸಿದ್ದೇನೆ. (ಸಿರ್ರುಲ್ ಖಿಲಾಫ ಅನುವಾದ, ಪುಟ–28–29)

ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಅಲ್ಲಾಹನಿಂದ ಸಾಬೀತಾಗಿರುವ ವ್ಯಕ್ತಿಯನ್ನು ನೀವು ಹೇಗೆ ಶಪಿಸುತ್ತೀರಿ?" ಕೆಲವು ಜನರು, ಪಂಗಡಗಳು ಸಹ ತಪ್ಪು ಪದಗಳನ್ನು ಬಳಸುತ್ತಾರೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು, "ಅಲ್ಲಾಹನಿಂದ ಸಾಬೀತಾಗಿರುವ ಮತ್ತು ಅವನು ಅಲ್ಲಾಹನ ಸಹಾಯವನ್ನು ಕೇಳಿದಾಗ ಅಲ್ಲಾಹನು ಅವನಿಗೆ ಸಹಾಯ ನೀಡಿದನು ಮತ್ತು ಆತನ ಸಹಾಯಕ್ಕಾಗಿ ಚಿಹ್ನೆಗಳನ್ನು ತೋರಿಸಿದನು ಮತ್ತು ದುಷ್ಟ ಮನಸ್ಸುಗಳನ್ನು ನಾಶಪಡಿಸಿರುವ ವ್ಯಕ್ತಿಯನ್ನು ನೀವು ಹೇಗೆ ಶಪಿಸುತ್ತೀರಿ. ಮತ್ತು ನೀವು (ಅಬೂಬಕರ್(ರ)) ಅವರು ಇಸ್ಲಾಂ ಧರ್ಮವನ್ನು ಪಥನಗೊಳಿಸುವ ಪ್ರಯೋಗ ಮತ್ತು ಹಿಂಸೆ ಹಾಗೂ ಕ್ರೌರ್ಯದ ಪ್ರವಾಹದಿಂದ ರಕ್ಷಿಸಿದರು ಮತ್ತು ಬುಸುಗುಟ್ಟುವ ಹೆಬ್ಬಾವನ್ನು ನಶಿಸಿದರು. ಅವರು(ರ) ಶಾಂತಿ ಮತ್ತು ಸುವ್ಯವಸ್ಥೆಯನ್ನು ಸ್ಥಾಪಿಸಿದರು ಮತ್ತು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನ ಅನುಗ್ರಹದಿಂದ ಪ್ರತಿಯೊಬ್ಬ ಸುಳ್ಳುಗಾರನನ್ನು ಸೋಲಿಸಿದರು. ಮತ್ತು ಹಝ್ರತ್ (ಅಬೂಬಕರ್) ಸಿದ್ದಿಕ್(ರ) ಅವರ ಅನೇಕ ಇತರ ಗುಣಗಳನ್ನು ಹೊಂದಿದ್ದಾರೆ ಮತ್ತು ಅಸಂಖ್ಯಾತ ಅನುಗ್ರಹಗಳನ್ನು ಹೊಂದಿದ್ದಾರೆ ಮತ್ತು ಮುಸ್ಲಿಮರು ಹಝ್ರತ್ ಅಬೂಬಕರ್(ರ)ರವರ ಕರುಣೆಯ ಹೊರೆಯಲ್ಲಿವೆ. ಮತ್ತು ಇದನ್ನು ಮೊದಲ ಹಂತದ ಅತ್ಯಾಚಾರಿಯಾಗಿರುವ ವ್ಯಕ್ತಿ ಮಾತ್ರ ನಿರಾಕರಿಸುತ್ತಾನೆ.

ಅಲ್ಲಾಹನು ನಿಮ್ಮನ್ನು(ರ) ವಿಶ್ವಾಸಿಗಳಿಗೆ ಶಾಂತಿಯ ಮೂಲವನ್ನಾಗಿ ಮತ್ತು ಧರ್ಮಭ್ರಷ್ಟರಿಗೆ ಮತ್ತು ಅವಿಶ್ವಾಸಿಗಳಿಗೆ ಅಗ್ನಿಶಾಮಕವನ್ನಾಗಿ ಮಾಡಿದಂತೆಯೇ, ಅಲ್ಲಾಹನು ನಿಮ್ಮನ್ನು ಮೊದಲ ದರ್ಜೆಯ ಪವಿತ್ರ ಖುರ್‌ಆನ್‌ನ ಬೆಂಬಲಿಗನಾಗಿ ಮತ್ತು ಪವಿತ್ರ ಖುರ್‌ಆನ್‌ನ ಸೇವಕನಾಗಿ ಮತ್ತು ಸರ್ವಶಕ್ತನಾದ ಅಲ್ಲಾಹನ ಶ್ರೇಷ್ಠತೆಯ ಗ್ರಂಥದ ಪ್ರಕಾಶಕನನ್ನಾಗಿ ಮಾಡಿದನು. ಆದ್ದರಿಂದ ಅವರು(ರ) ತಮ್ಮ ಎಲ್ಲಾ ಪ್ರಯತ್ನಗಳನ್ನು ಪವಿತ್ರ ಖುರ್‌ಆನ್ ಅನ್ನು ಸಂಗ್ರಹಿಸಲು ಮತ್ತು ಪೈಗಂಬರ್(ಸ) ಅವರು ವಿವರಿಸಿದ ಕ್ರಮವನ್ನು ಅನುಸರಿಸಿ ಸಂಪೂರ್ಣ ಪ್ರಯತ್ನವನ್ನು ಪಡೆದರು. ಮತ್ತು ಧರ್ಮದ ದುಃಖದಲ್ಲಿ ಅಬೂಬಕರ್(ರ)ರವರ ಕಣ್ಣುಗಳು ಚಿಲುಮೆ ಹರಿಯುವುದಕ್ಕಿಂತ ಹೆಚ್ಚಾಗಿ ಕಣ್ಣೀರು ಸುರಿಸುತ್ತಿತ್ತು." (ಸಿರ್ರುಲ್ ಖಿಲಾಫ ಅನುವಾದ, ಪುಟ–57–58)

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ವಿಚಿತ್ರ ವಿಷಯವೆಂದರೆ ಶಿಯಾ ಮಹನೀಯರು" ಶಿಯಾ ಆಗಿರುವ ಕೆಲವು ಜನರು (ಹಝ್ರತ್) ಅಬೂಬಕರ್ ಸಿದ್ದೀಕ್(ರ) ಅವರನ್ನು ಅನೇಕ ಶತ್ರುಗಳ ದಿನಗಳಲ್ಲಿ ವಿಶ್ವಾಸ ತಂದರು ಮತ್ತು ಅವರು(ರ) ತೀವ್ರ ಪರೀಕ್ಷೆಗಳನ್ನು ಡದುರಿಸಿದರು ಮತ್ತು ರಸೂಲುಲ್ಲಾಹ್(ಸ) ಅವರ ಒಡನಾಟಿಯಾದರು ಮತ್ತು ರಸೂಲುಲ್ಲಾಹ್(ಸ) ಅವರು (ಮಕ್ಕಾದಿಂದ) ಹೊರಟಾಗ ಹಝ್ರತ್ ಅಬೂಬಕರ್(ರ) ಅವರು ಪರಿಪೂರ್ಣ ಪ್ರಾಮಾಣಿಕತೆ ಮತ್ತು ಪರಿಶುದ್ಧತೆಯಿಂದ ಮತ್ತು ಕಷ್ಟಗಳನ್ನು ಸಹಿಸಿಕೊಂಡರು ಮತ್ತು ತಮ್ಮ ಪ್ರೀತಿಯ ದೇಶವನ್ನು ಮತ್ತು ತಮ್ಮ ಸ್ನೇಹಿತರನ್ನು ಮತ್ತು ಅವರ ಇಡೀ ಕುಟುಂಬವನ್ನು ತೊರೆದು ಮಹೋನ್ನತನಾದ ಅಲ್ಲಾಹನನ್ನು ಸ್ವೀಕರಿಸಿದರು. ನಂತರ ಅವರು ಪ್ರತಿ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಅವಿಶ್ವಾಸಿಗಳ ವಿರುದ್ಧ ಹೋರಾಡಿದರು ಮತ್ತು ಪ್ರವಾದಿ (ಅಹ್ಮದ್) ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಸಹಾಯ ಮಾಡಿದರು. ನಂತರ ಅವರನ್ನು ಕಪಟಿಗಳ ಗುಂಪು ಧರ್ಮಭ್ರಷ್ಟಗೊಳಿಸಿದಾಗ ಮತ್ತು

*(ಪುಟ 12 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

"ಪ್ರವಾದಿತ್ವದ ಪುಸ್ತಕದ ಸಂಕ್ಷಿಪ್ತ ಆವೃತ್ತಿಯಾಗಿದ್ದರು" (ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ನಿಸ್ಸಂಶಯವಾಗಿಯೂ ಅಬೂಬಕರ್ ಸಿದ್ದೀಖ್(ರ) ಮತ್ತು ಉಮರ್ ಫಾರೂಖ್(ರ) ಅಲ್ಲಾಹನಿಗಾಗಿ ಉನ್ನತ ಶಿಖರವನ್ನು ಏರಿದ ತಂಡದ ಸರದಾರರಾಗಿದ್ದರು.

ಅಲ್ಲಾಹನು ಅಬೂಬಕರ್ ಸಿದ್ದೀಖ್(ರ)ರ ಮೇಲೆ ಕಾರುಣ್ಯಗಳನ್ನು ವರ್ಷಿಸಲಿ. ಅವರು ಇಸ್ಲಾಮನ್ನು ಜೀವಂತಗೊಳಿಸಿದರು ಮತ್ತು ಸತ್ಯನಿಷೇಧಿಗಳನ್ನು ವಧಿಸಿದರು ಹಾಗೂ ಖಿಯಾಮತ್ ತನಕ ತನ್ನ ಒಳಿತುಗಳ ಅನುಗ್ರಹಗಳನ್ನು ಜಾರಿಗೊಳಿಸಿದರು.

ನಿಸ್ಸಂಶಯವಾಗಿಯೂ ಹಝ್ರ್‌ರತ್ ಅಬೂಬಕರ್(ರ) ಇಸ್ಲಾಂ ಮತ್ತು ಪ್ರವಾದಿಗಳಿಗೆ ಹೆಮ್ಮೆಯಾಗಿರುವರು.

ಹಝ್ರ್‌ರತ್ ಅಬೂಬಕರ್(ರ)ರ ಆತ್ಮದಲ್ಲಿ ಸತ್ಯಸಂಧತೆ, ಪರಿಶುದ್ಧಿ, ಸ್ಥೈರ್ಯ ಮತ್ತು ದೇವಭಕ್ತಿ ಇದ್ದುವು. ಪೂರ್ತಿ ಲೋಕವೇ ಧರ್ಮತ್ಯಾಗ ಮಾಡಿದರೂ ಅವರು ಅದರ ಪರಿವೆ ಮಾಡುತ್ತಿರಲಿಲ್ಲ ಮತ್ತು ಹಿಂದೆ ಸರಿಯುತ್ತಿರಲಿಲ್ಲ.

ಹಝ್ರ್‌ರತ್ ಅಬೂಬಕರ್(ರ)ರ ಸ್ಥಾನ ಮತ್ತು ಮಹಿಮೆಯನ್ನು ಸ್ಪಷ್ಟಪಡಿಸುವ ಉದ್ದೇಶದಿಂದ ಹಝ್ರ್‌ರತ್ ಪೈಗಂಬರ್(ಸ) ಹಝ್ರ್‌ರತ್ ಅಬೂಬಕರ್(ರ)ರಿಗೆ ಹೊರತು ಬೇರೆ ಯಾವ ಸಹಾಬಿಗೂ ಸಿದ್ದೀಖ್ ಎಂದು ಹೆಸರು ನೀಡಲಿಲ್ಲ.

ಇಬ್ನು ಖ಼ಲ್‌ದೂನ್ ಹೇಳುತ್ತಾರೆ: ಹಝ್ರ್‌ರತ್ ಅಬೂಬಕರ್(ರ)ರ ಮೇಲೆ ಅಲ್ಲಾಹನು ಮಾಡಿದ ಸೂಕ್ಷ್ಮವಾದ ಔದಾರ್ಯ ಮತ್ತು ಹಝ್ರ್‌ರತ್ ಪೈಗಂಬರ್(ಸ)ರೊಂದಿಗೆ ಅವರಿಗಿದ್ದ ಶ್ರೇಷ್ಠವಾದ ಸಾಮೀಪ್ಯದ ವೈಶಿಷ್ಟ್ಯವೇನೆಂದರೆ, ಹಝ್ರ್‌ರತ್ ಪೈಗಂಬರ್(ಸ)ರನ್ನು ಎತ್ತಲಾದ ಅದೇ ಮಂಚದಲ್ಲಿ ಅಬೂಬಕರ್(ರ)ರನ್ನು ಎತ್ತಲಾಯಿತು. ಅವರ ಖಬರನ್ನು ಹಝ್ರ್‌ರತ್ ಪೈಗಂಬರ್(ಸ)ರ ಖಬರಿನ ಹಾಗೆ ಸಮತಟ್ಟುಗೊಳಿಸಲಾಯಿತು.

ಹಝ್ರ್‌ರತ್ ಅಬೂಬಕರ್ ಸಿದ್ದೀಖ್(ರ)ರ ಮಾದರಿಯನ್ನು ಸದಾ ನಿಮ್ಮ ಮುಂದಿರಿಸಿರಿ. ಹಝ್ರ್‌ರತ್ ಪೈಗಂಬರ್(ಸ)ರ ಆ ಕಾಲಘಟ್ಟದ ಬಗ್ಗೆ ಚಿಂತಿಸಿರಿ. ಖುರೈಶಿನ ಶತ್ರುಗಳು ಎಲ್ಲೆಡೆ ಪಿತೂರಿ ಮಾಡಲು ತಯಾರಾಗಿ ನಿಂತಿದ್ದರು. ಅವರು ಹಝ್ರ್‌ರತ್ ಪೈಗಂಬರ್(ಸ)ರನ್ನು ವಧಿಸಲು ಯೋಜನೆ ಹಾಕಿದ್ದರು. ಆ ಕಾಲವು ಬಹಳ ವಿಪತ್ತಿನದ್ದಾಗಿತ್ತು. ಆ ಸಮಯದಲ್ಲಿ ಹಝ್ರ್‌ರತ್ ಅಬೂಬಕರ್(ರ) ಸತ್ಯಕ್ಕೆ ನೆರವಾಗಿ ನಿಂತರು. ಅಂತಹ ಉದಾಹರಣೆ ಲೋಕದಲ್ಲಿ ಕಾಣಲು ಸಾಧ್ಯವಲ್ಲ. ಈ ಶಕ್ತಿಯು ಸತ್ಯಸಂಧತೆ ಮತ್ತು ಸತ್ಯವಿಶ್ವಾಸವಿಲ್ಲದೇ ಲಭಿಸಲು ಸಾಧ್ಯವಲ್ಲ. (ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

## ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ್‌ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ

ಒಬ್ಬ ವ್ಯಕ್ತಿ ಎಲ್ಲಿ ವರೆಗೆ ಅಬೂಬಕರ್, ಉಮರ್, ಉಸ್ಮಾನ್ ಮತ್ತು ಅಲಿ ರಝಿಯಲ್ಲಾಹು ಅನ್‌ಹುಂ ಅಜ್‌ಮಈನ್‌ರ ಬಣ್ಣವನ್ನು ತನ್ನೊಳಗೆ ಉಂಟುಮಾಡಿದಿಲ್ಲವೋ ಅಲ್ಲಿಯ ವರೆಗೂ ಮುಸ್ಲಿಮ್ ಮತ್ತು ಮೂಮಿನ್ ಆಗಲಾರನು. ಅವರಂತು ತಮ್ಮ ಜೀವಿತಗಳನ್ನು ಅಲ್ಲಾಹನ ಮಾರ್ಗದಲ್ಲಿ ವಖ್ಫ್ ಮಾಡಿದ್ದರು.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09–12–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಕಳೆದ ಖುತ್ಬದಲ್ಲಿ ಹಝ್ರ್‌ರತ್ ಅಬೂಬಕರ್(ರ)ರ ಕುರಿತು ಹಝ್ರ್‌ರತ್ ಮಸೀಹ್ ಮೌಊದ್(ಅ)ರ ಕೆಲವು ಉಲ್ಲೇಖಗಳನ್ನು ಮುಂದಿರಿಸಿದ್ದೆ. ಈ ಬಗ್ಗೆ ಹಝ್ರ್‌ರತ್ ಮಸೀಹ್ ಮೌಊದ್(ಅ)ರ ಇನ್ನಷ್ಟು ಉಲ್ಲೇಖಗಳನ್ನು ನಾನು ಮುಂದಿರಿಸುತ್ತೇನೆ.

ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಿಸ್ಸಂಶಯವಾಗಿಯೂ ಅಬೂಬಕರ್ ಸಿದ್ದೀಖ್(ರ) ಮತ್ತು ಉಮರ್ ಫಾರೂಖ್(ರ) ಅಲ್ಲಾಹನಿಗಾಗಿ ಉನ್ನತ ಶಿಖರವನ್ನು ಏರಿದ ತಂಡದ ಸರದಾರರಾಗಿದ್ದರು. ಅವರು ನಾಗರಿಕ ಮತ್ತು ಗ್ರಾಮೀನ ನಿವಾಸಿಗಳನ್ನು ಸತ್ಯದ ಕಡೆಗೆ ಕರೆದರು. ಅವರ ಸಂದೇಶ ದೂರದ ಪ್ರದೇಶಗಳ ತನಕ ಹರಡಿತು. ಅವರಿಬ್ಬರ ಖಿ಼ಲಾಫತಿನಲ್ಲೂ ಇಸ್ಲಾಮಿನ ಫಲಗಳು ಹೇರಳವಾಗಿ ಇರಿಸಲಾದುವು. ಅನೇಕ ತರದ ವಿಜಯಗಳು ಮತ್ತು ಯಶಸ್ಸುಗಳೊಂದಿಗೆ ಪರಿಪೂರ್ಣವಾದ ಸುಗಂಧದಿಂದ ಇಸ್ಲಾಂ ಸುವಾಸಿತಗೊಳಿಸಲಾಯಿತು.

ಹಝ್ರ್‌ರತ್ ಸಿದ್ದೀಖ್ ಅಕ್ಬರ್(ರ)ರ ಕಾಲದಲ್ಲಿ ಅನೇಕ ವಿಧಗಳ ಪಿತೂರಿಗಳ ಬೆಂಕಿಯಿಂದ ಇಸ್ಲಾಂ ಆವರಿಸಲ್ಪಟ್ಟಿತ್ತು. ಸ್ಪಷ್ಟವಾದ ರಕ್ತಪಾತಗಳು ಅವರ ಜಮಾಅತಿನ ಮೇಲೆ ನಡೆಯಲು ಸಾಧ್ಯತೆಯಿತ್ತು. ಒಟ್ಟಿನಲ್ಲಿ, ಸರಿಯಾದ ಸಮಯದಲ್ಲಿ ಹಝ್ರ್‌ರತ್ ಅಬೂಬಕರ್(ರ)ರ ಸತ್ಯಸಂಧತೆಯ ಕಾರಣದಿಂದ ಮಹೋನ್ನತ ಪ್ರಭುವಾದ ಅಲ್ಲಾಹನು ಇಸ್ಲಾಮಿನ ಸಹಾಯಕ್ಕಾಗಿ ತಲುಪಿದನು. ಆಳವಾದ ಬಾವಿಗಳಿಂದ ಅದರ ಅಮೂಲ್ಯವಾದ ವಸ್ತುಗಳನ್ನು ಹೊರಗೆಳೆದನು. ಹೀಗೆ ಇಸ್ಲಾಂ ದುರಾವಸ್ಥೆಯ ಹೀನಾಯ ಮಟ್ಟದಿಂದ ಉನ್ನತ ಸ್ಥಿತಿಗೆ ತಲುಪಿತು. ಆದ್ದರಿಂದ ನಮ್ಮ ಮೇಲೆ ನ್ಯಾಯವೇನೆಂದರೆ ನಾವು ಈ ಸಹಾಯಕನಿಗೆ ಕೃತಜ್ಞರಾಗಿರಬೇಕು ಮತ್ತು ಶತ್ರುಗಳ ಬಗ್ಗೆ ಕಾಳಜಿ ವಹಿಸಬಾರದು. ಆದ್ದರಿಂದ ನೀವು ನಿಮ್ಮ ಸಯ್ಯದ್ ವ ಮೌಲಾ ಹಝ್ರ್‌ರತ್ ಮುಹಮ್ಮದ್(ಸ) ಅವರನ್ನು ಸಹಾಯ ಮಾಡಿದ ಮತ್ತು ನಿಮ್ಮ ಧರ್ಮವನ್ನು ರಕ್ಷಿಸಿದ ವ್ಯಕ್ತಿ ಹಾಗೂ ಅಲ್ಲಾಹನಿಗಾಗಿ ನಿಮ್ಮ ಸುಧರಣೆಯನ್ನು ಬಯಸಿ ನಿಮ್ಮಿಂದ ಯಾವುದೇ ಪ್ರತಿಫಲವನ್ನು ಪಡೆಯದ ವ್ಯಕತಿಯಿಂದ ದೂರ ಸರಿಯಬೇಡಿ. ಹೀಗಿರುವಾಗ ಹಝ್ರ್‌ರತ್ ಸಿದ್ದಿಕ್ ಅಕ್ಬರ್(ರ) ಅವರ ಹಿರಿಮೆಯನ್ನು ಹೇಗೆ ಅಲ್ಲಗಳೆಯಲು ಸಾಧ್ಯ ಎಂಬುದು ಅಚ್ಚರಿಯ ಸಂಗತಿಯೇ? ಮತ್ತು ನಿಮ್ಮ(ರ) ಗುಣಲಕ್ಷಣಗಳು ಬೆಳದಿಂಗಳ ಚಂದಿರನಂತೆ ಪ್ರಕಾಶಮಾನವಾಗಿದೆ ಮತ್ತು ನಿಸ್ಸಂದೇಹವಾಗಿ ಪ್ರತಿಯೊಬ್ಬ ಮುಮಿನ್ ನೀವು ನೆಟ್ಟ ಮರದ ಹಣ್ಣುಗಳನ್ನು ಸೇವಿಸತ್ತಿದ್ದಾರೆ ಮತ್ತು ನೀವು ಕಲಿಸಿದ ಜ್ಞಾನದಿಂದ ಪ್ರಯೋಜನ ಪಡೆಯುತ್ತಿದ್ದಾರೆ ಎಂಬುದು ಸತ್ಯವಾಗಿದೆ. ನೀವು ನಮ್ಮ ಧರ್ಮಕ್ಕೆ ಫುರ್ಖಾನ್ (ಪವಿತ್ರ ಖುರ್‌ಆನ್) ಮತ್ತು ನಮ್ಮ ಜಗತ್ತಿಗೆ ಶಾಂತಿ ಮತ್ತು ಸುವ್ಯವಸ್ಥೆಯನ್ನು ನೀಡಿದ್ದೀರಿ. ಮತ್ತು ಅವುಗಳನ್ನು ನಿರಾಕರಿಸುವವನು ಸುಳ್ಳು ಹೇಳುತ್ತಾನೆ ಮತ್ತು ನಾಶ ಹಾಗೂ ಶೈತಾನನೊಂದಿಗೆ ಸೇರಿದವನಾಗುತ್ತಾನೆ." ಹೇಳುತ್ತಾರೆ: "ಹಝ್ರ್‌ರತ್ ಅಬೂಬಕರ್(ರ)ರ ಸ್ಥಾನಮಾನದ ಬಗ್ಗೆ ಸಂಶಯ ಹೊಂದಿರುವವರು

ನಿಜವಾಗಿಯೂ ತಪ್ಪಿತಸ್ಥರು. ಅಂಥವರು ಹೇರಳವಾದ ನೀರನ್ನು ಕಡಿಮೆಯೆಂದು ಭಾವಿಸಿದರು. ಅತ್ಯುನ್ನತ ಪದವಿಯ ಗೌರವಯುತ ಮತ್ತು ಆದರಣೀಯ ವ್ಯಕ್ತಿಯನ್ನು ಅವರು ಕೋಪದಿಂದ ನಿಂದಿಸಿದರು."

ಅವರು ಹೇಳಿದರು, "ಮತ್ತು ಹಝ್ರತ್ ಸಿದ್ದಿಕ್(ರ) ಅವರ ಪ್ರೀತಿಯ ಪಾತ್ರವು ಭರವಸೆ ಮತ್ತು ಭಯ, ಉತ್ಸಾಹ, ಪ್ರೀತಿ ಮತ್ತು ವಾತ್ಸಲ್ಯದ ಸಂಯೋಜನೆಯಾಗಿದೆ ಮತ್ತು ಅವರ ಸ್ವಭಾವವು ಪ್ರಾಮಾಣಿಕತೆ ಮತ್ತು ಪರಿಶುದ್ಧತೆಯಲ್ಲಿ ಪರಿಪೂರ್ಣವಾಗಿತ್ತು."

ಮತ್ತು ಅವರು ತಮ್ಮ ಆತ್ಮ ಹಾಗೂ ಅದರ ಸಂತೋಷಗಳಿಂದ ದೂರವಿದ್ದರು ಮತ್ತು ಲೋಭ ಮತ್ತು ಅದರ ಭಾವನೆಗಳಿಂದ ಸಂಪೂರ್ಣವಾಗಿ ದೂರವಿದ್ದರು ಮತ್ತು ಅವರು ಉನ್ನತ ಮಟ್ಟದ ವೈರಾಗಿಯಾಗಿದ್ದರು ಮತ್ತು ಅವರಿಂದ ಕೇವಲ ಸುಧಾರಣೆಯು ಹೊರಹೊಮ್ಮಿತು ಮತ್ತು ಅವರಿಂದ ಮುಮಿನ್‌ಗಳಿಗೆ ಕಲ್ಯಾಣ ಮತ್ತು ಯೋಗಕ್ಷೇಮ ಮಾತ್ರ ಕಾಣಿಸಿಕೊಂಡಿತು. ನೀವು ಚಿತ್ರಹಿಂಸೆ ಮತ್ತು ಸಂಕಟದ ಆರೋಪದಿಂದ ಮುಕ್ತರಾಗಿದ್ದರು. ಆದುದರಿಂದ ಆಂತರಿಕ ಕಲಹಗಳನ್ನು ನೋಡದೆ ಅವರನ್ನು ಒಳ್ಳೆಯತನದ ರೂಪದಲ್ಲಿ ಪರಿಗಣಿಸಿ. ನೀವು ಯೋಚಿಸುವುದಿಲ್ಲವೇ ಆ ವ್ಯಕ್ತಿ ತನ್ನ ಭಗವಂತನ ಆದೇಶ ಹಾಗೂ ಸಂತೋಷದಿಂದ ತನ್ನನ್ನು ಶ್ರೀಮಂತನನ್ನಾಗಿ ಮಾಡಲಿ ಅಥವಾ ತನ್ನ ಉದ್ಯೋಗಿಯನ್ನಗಿ ಮಾಡಲಿ ಎಂದು ತನ್ನ ಮಕ್ಕಳ ಕಡೆಗೆ ಗಮನ ಹರಿಸಲಿಲ್ಲ ಮತ್ತು ತನ್ನ ಆವಶ್ಯಕತೆಗೆ ಬೇಕಾದಷ್ಟು ಮಾತ್ರ ಲೋಕದಿಂದ ಪಾಲು ಪಡೆದ ವ್ಯಕ್ತಿಯು ಹಝ್ರತ್ ಪೈಗಂಬರ್(ಸ)ರ ಕುಟುಂಬದ ಮೇಲೆ ದೌರ್ಜನ್ಯ ಮಾಡುತ್ತಿದ್ದರು ಎಂದು ಯೋಚಿಸಲು ಹೇಗೆ ಸಾಧ್ಯ?
(ಸಿರ್ರುಲ್ ಖಿಲಾಫ (ಅನುವಾದಕ) ಪುಟಗಳು 79–82)

ಅಲ್ಲಾಹನು ಅಬೂಬಕರ್ ಸಿದ್ದೀಖ್(ರ)ರ ಮೇಲೆ ಕಾರುಣ್ಯಗಳನ್ನು ವರ್ಷಿಸಲಿ. ಅವರು ಇಸ್ಲಾಮನ್ನು ಜೀವಂತಗೊಳಿಸಿದರು ಮತ್ತು ಸತ್ಯನಿಷೇಧಿಗಳನ್ನು ವಧಿಸಿದರು ಹಾಗೂ ಖಿಯಾಮತ್ ತನಕ ತನ್ನ ಒಳಿತುಗಳ ಅನುಗ್ರಹಗಳನ್ನು ಜಾರಿಗೊಳಿಸಿದರು. ಅವರು ಬಹಳವಾಗಿ ನಮ್ರತೆಯುಳ್ಳವರೂ ಅಲ್ಲಾಹನ ಕಡೆಗೆ ಪೂರ್ಣವಾಗಿ ಭರವಸೆ ಹೊಂದಿರುವವರೂ ವಿನಮ್ರತೆಯಿಂದ ದುಆ ಮಾಡುವವರೂ ಅಲ್ಲಾಹನ ಮುಂದೆ ಬಹಳವಾಗಿ ಸಾಷ್ಟಾಂಗ ಮಾಡುವವರೂ ಆಗಿದ್ದರು. ಅಲ್ಲಾಹನ ಸನ್ನಿಧಿಯಲ್ಲಿ ಅಳಲು ಮತ್ತು ವಿನಯದಿಂದ ಬಾಗುವುದು ಮತ್ತು ಅವನ ಆಸ್ಥಾನವನ್ನು ಬಿಗಿಯಾಗಿ ಹಿಡಿಯುವುದು ಅವರ ಅಭ್ಯಾಸವಾಗಿತ್ತು. ಅವರು ಸಜದದ ಸ್ಥಿತಿಯಲ್ಲಿ ಪ್ರಾರ್ಥನೆಯಲ್ಲಿ ಪೂರ್ಣವಾಗಿ ತಲ್ಲೀನರಾಗುತ್ತಿದ್ದರು ಮತ್ತು ಪವಿತ್ರ ಖುರ್‌ಆನ್ ಪಾರಾಯಣ ಮಾಡುವಾಗ ಅಳುತ್ತಿದ್ದರು.

ನಿಸ್ಸಂಶಯವಾಗಿಯೂ ಹಝ್ರತ್ ಅಬೂಬಕರ್(ರ) ಇಸ್ಲಾಂ ಮತ್ತು ಪ್ರವಾದಿಗಳಿಗೆ ಹೆಮ್ಮೆಯಾಗಿರುವರು. ಅವರ ಸ್ವಭಾವ ಗುಣವು ಸೃಷ್ಟಿಗಳಲ್ಲಿ ಅತ್ಯುತ್ತಮರಾದ ಪೈಗಂಬರ್(ಸ)ರ ಸ್ವಭಾವ ಗುಣಕ್ಕೆ ಸಮೀಪವಾಗಿತ್ತು. ಪ್ರವಾದಿತ್ವದ ಸುಗಂಧಗಳನ್ನು ಸ್ವೀಕಾರ ಮಾಡಲಿಕ್ಕೆ ತಯಾರಾದ ಜನರಲ್ಲಿ ಅವರು ಮೊದಲಿಗರಾಗಿದ್ದರು. ಕೊಳಕಿನಿಂದ ತುಂಬಿದ ಹೊದಿಕೆಗಳನ್ನು ಪರಿಶುದ್ಧ ಮತ್ತು ಸ್ವಚ್ಛ ಉಡಿಗೆಯನ್ನಾಗಿ ಮಾಡಿದ ಜನರಲ್ಲಿ ಅವರು ಪ್ರಥಮರಾಗಿದ್ದರು. ಪ್ರವಾದಿಗಳ ಬಹುತೇಕ ಗುಣಗಳಲ್ಲಿ ಅವರು ಪ್ರವಾದಿಗಳಿಗೆ ಸಾಮ್ಯತೆಯನ್ನು ಹೊಂದಿದ್ದರು.

ನಾವು ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪದ ಹೊರತು ಬೇರೆ ಯಾವ ಸಹಾಬಿಯ ಪ್ರಸ್ತಾಪವನ್ನು ಸ್ಪಷ್ಟವಾಗಿ ಮತ್ತು ಖಚಿತವಾಗಿ ಪ್ರಸ್ತಾಪಿಸಿದ್ದಾಗಿ ಕಾಣುವುದಿಲ್ಲ. ಸಂಶಯ ನಿವಾರಣೆಗಾಗಿ ಕೆಲವರನ್ನು ಪ್ರಸ್ತಾಪಿಸಿದ್ದು ಹೊರತುಪಡಿಸಿ. ಸಂಶಯಕ್ಕೆ ಸತ್ಯದ ಮುಂದೆ ಯಾವುದೇ ಸ್ಥಾನವಿಲ್ಲ. ಸತ್ಯಾನ್ವೇಷಿಗಳನ್ನು ತೃಪ್ತಿಪಡಿಸಲು ಅದಕ್ಕೆ ಸಾಧ್ಯವಲ್ಲ. ಯಾರು ಹಝ್ರತ್ ಅಬೂಬಕರ್(ರ)ರೊಡನೆ ಶತ್ರುತ್ವವನ್ನು ಇರಿಸುತ್ತಾನೋ ಅಂಥವನ ಮತ್ತು ಸತ್ಯದ ನಡುವೆ ಮುಚ್ಚಲ್ಪಟ್ಟ ಒಂದು ಬಾಗಿಲು ತಡೆಯಾಗಿ ಇರುವುದು. ಸತ್ಯಸಂಧರ ಸರದಾರರ ಕಡೆಗೆ ಮರಳದೇ ಅದು ತೆರೆಯಲ್ಪಡಲಾರದು. (ಸಿರ್ರುಲ್ ಖಿಲಾಫ (ಅನುವಾದ) ಪುಟ–99–100)

ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಸಿದ್ದೀಕ್(ರ) ಅವರ ಸೃಷ್ಟಿಯು ಸೃಷ್ಟಿಕರ್ತನ ಕಡೆಗೆ ಗಮನ ಹರಿಸುವುದಲ್ಲಿ ಮತ್ತು ಪ್ರವಾದಿ ಮುಹಮ್ಮದ್(ಸ) ಅವರ ಕಡೆಗೆ ತಿರುಗುವುದರಲ್ಲಿ ಆಯಿತು. ಅವರು ಪ್ರವಾದಿತ್ವದ ಅಭಿವ್ಯಕ್ತಿಗೆ ಎಲ್ಲಾ ಮಾನವರಿಗಿಂತ ಹೆಚ್ಚು ಅರ್ಹರಾಗಿದ್ದರು ಮತ್ತು ಹಝ್ರತ್ ಸೃಷ್ಟಿಯಲ್ಲಿ ಉತ್ತಮರಾದ ಪ್ರವಾದಿ(ಸ) ಅವರ ಖಲೀಫರಾಗಲು ಆದ್ಯತೆ ಹೊಂದಿದ್ದರು ಮತ್ತು ತಮ್ಮ ಪ್ರವಾದಿ(ಸ) ಅವರೊಂದಿಗೆ ಪರಿಪೂರ್ಣ ಏಕತೆ ಮತ್ತು ಸಾಮರಸ್ಯವನ್ನು ಸ್ಥಾಪಿಸಿದ್ದರು. ಅಲ್ಲದೆ, ಅವರು ಎಲ್ಲಾ ನಡವಳಿಕೆಗಳು, ಗುಣಲಕ್ಷಣಗಳು ಮತ್ತು ಅಭ್ಯಾಸಗಳನ್ನು ಅಳವಡಿಸಿಕೊಳ್ಳುವಲ್ಲಿ ಮತ್ತು ವೈಯಕ್ತಿಕ ಮತ್ತು ಸಾರ್ವತ್ರಿಕ ಸಂಬಂಧಗಳನ್ನು ತೊರೆಯುವುದರಲ್ಲಿ ರಸೂಲುಲ್ಲಾಹ್(ಸ) ಅವರ (ಪರಿಪೂರ್ಣ) ಅಭಿವ್ಯಕ್ತಿಯಾಗಿದ್ದರು ಅಂದರೆ ಕತ್ತಿಗಳು ಮತ್ತು ಈಟಿಗಳ ಬಲದಿಂದ ಕೂಡ ಅವರಿಬ್ಬರ ಸಂಬಂಧದಲ್ಲಿ ಯಾವುದೆ ತಡೆವುಂಟಾಗಲಿಲ್ಲ. ಮತ್ತು ನೀವು(ರ) ಈ ಸ್ಥಿತಿಯಲ್ಲಿ ಶಾಶ್ವತವಾಗಿ ಉಳಿದುಕೋಮಡರು ಮತ್ತು ಯಾವುದೇ ತೊಂದರೆಗಳು ಹಾಗೂ ಭಯಾನಕ ಸನ್ನಿವೇಶಗಳು, ಹಾಗೆಯೇ ಶಾಪಗಳು ಮತ್ತು ವಾಗ್ದಂಡನೆಗಳು ಯಾವುದೂ ನಿಮ್ಮನ್ನು ತೊಂದರೆಗೊಳಿಸಲಿಲ್ಲ.

ಮತ್ತು ಹಝ್ರತ್ ಅಬೂಬಕರ್(ರ)ರ ಆತ್ಮದಲ್ಲಿ ಸತ್ಯಸಂಧತೆ, ಪರಿಶುದ್ಧಿ, ಸ್ಥೈರ್ಯ ಮತ್ತು ದೇವಭಕ್ತಿ ಇದ್ದುವು. ಪೂರ್ತಿ ಲೋಕವೇ ಧರ್ಮತ್ಯಾಗ ಮಾಡಿದರೂ ಅವರು ಅದರ ಪರಿವೆ ಮಾಡುತ್ತಿರಲಿಲ್ಲ ಮತ್ತು ಹಿಂದೆ ಸರಿಯುತ್ತಿರಲಿಲ್ಲ. ಬದಲಾಗಿ ಅವರು ಪ್ರತಿ ಕ್ಷಣವು ತನ್ನ ಹೆಜ್ಜೆಯನ್ನು ಮುಂದಕ್ಕೆ ಇರಿಸುತ್ತಾ ಹೋದರು. ಆದ್ದರಿಂದಲೇ ಅಲ್ಲಾಹನು ಪ್ರವಾದಿಗಳ ನಂತರ ಸಿದ್ದೀಖರ ಪ್ರಸ್ತಾಪವನ್ನು ಮಾಡಿರುವನು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ: **ಫಉಲಾಯಿಕ ಮಅಲ್ಲಝೀನ ಅನ್‌ಅಮಲ್ಲಾಹು ಮಿನನ್ನಬೀಈನ** ವಸ್ಸಿದ್ದೀಖೀನ ವಶ್ಶುಹದಾಯಿ ವಸ್ಸಾಲಿಹೀನ್ (ಅನ್ನಿಸಾ: 70) ಈ ವಚನದಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಅವರಿಗೆ ಇತರರ ಮೇಲೆ ಇರುವ ಶ್ರೇಷ್ಠತೆಯ ಕುರಿತು ಸೂಚಿಸಲಾಗಿದೆ. ಏಕೆಂದರೆ, ಹಝ್ರತ್ ಅಬೂಬಕರ್(ರ)ರ ಸ್ಥಾನ ಮತ್ತು ಮಹಿಮೆಯನ್ನು ಸ್ಪಷ್ಟಪಡಿಸುವ ಉದ್ದೇಶದಿಂದ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರಿಗೆ ಹೊರತು ಬೇರೆ ಯಾವ ಸಹಾಬಿಗೂ ಸಿದ್ದೀಖ್ ಎಂದು ಹೆಸರು ನೀಡಲಿಲ್ಲ.

ಈ ವಚನದಲ್ಲಿ ಸನ್ಮಾರ್ಗವನ್ನು ಅರಸುವವರಿಗಾಗಿ ಪರಿಪೂರ್ಣತೆಯ ಪದವಿಗಳು ಮತ್ತು ಅವುಗಳಿಗೆ ಬೇಕಾದ ಯೋಗ್ಯತೆಗಳ ಕಡೆಗೆ ಬಹಳ ದೊಡ್ಡ ಸೂಚನೆಯನ್ನು ನೀಡಲಾಗಿದೆ. ಈ ವಚನ ಅಬೂಬಕರ್ ಸಿದ್ದೀಕ್(ರ)ರ ಶ್ರೇಷ್ಠತೆಗೆ ಬಹಳ ದೊಡ್ಡ ಸಾಕ್ಷ್ಯವಾಗಿದೆ ಎಂದು ಈ ವಚನದ ಬಗ್ಗೆ ಯೋಚಿಸಿದಾಗ ತಿಳಿದುಬಂತು. ಸತ್ಯಶೋಧನೆಯ ಕುರಿತು ಆಸಕ್ತಿಯಿರುವ ಪ್ರತಿಯೊಬ್ಬರಿಗೂ ಇದರಲ್ಲಿರುವ ಆಳವಾದ ರಹಸ್ಯ ಗೊತ್ತಾಗುವುದು. ಒಟ್ಟಿನಲ್ಲಿ ಅಬೂಬಕರ್(ರ) ಎಂಬವರು ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ನಾಲಗೆಯಿಂದ ಸಿದ್ದೀಕ್ ಎಂಬ ಬಿರುದು ನಾಮವನ್ನು ಪಡೆದ ವ್ಯಕ್ತಿಯಾಗಿರುವರು. (ಸಿರ್ರುಲ್ ಖಿಲಾಫ (ಅನುವಾದ) ಪುಟ–104–107)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಬ್ನು ಖ಼ಲ್‌ದೂನ್ ಹೀಗೆ ಹೇಳಿರುವರು – ಹಝ್ರತ್ ಪೈಗಂಬರ್(ಸ)ರ ರೋಗ ವರ್ಧಿಸಿ ಪ್ರಜ್ಞೆ ತಪ್ಪುವಂತಹ ಸ್ಥಿತಿಯಲ್ಲಿ ನಮಾಝಿನ ಸಮಯವಾದಾಗ ಅವರು ಹೇಳಿದರು: ಜನರಿಗಾಗಿ ನಮಾಝಿನ ಇಮಾಮತ್ ವಹಿಸಲು ಅಬೂಬಕರ್‌ರೊಡನೆ ಹೇಳಿರಿ. ಮೂರು ಸಂಗತಿಗಳ ಬಗ್ಗೆ ಉಯಿಲು ಮಾಡಿದ ನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಅಬೂಬಕರ್‌ರ ಬಾಗಿಲನ್ನು ಹೊರತುಪಡಿಸಿ ಮಸೀದಿಯ ಕಡೆಗೆ ತೆರೆಯಲಾಗುವ ಎಲ್ಲ ಬಾಗಿಲುಗಳನ್ನು ಮುಚ್ಚಿರಿ. ಏಕೆಂದರೆ, ಔದಾರ್ಯದಲ್ಲಿ ಬೇರೆ ಯಾವ ಸಹಾಬಿಯನ್ನು ಕೂಡ ಅಬೂಬಕರ್‌ಗಿಂತ ಶ್ರೇಷ್ಠರು ಎಂದು ನಾನು ಭಾವಿಸುವುದಿಲ್ಲ.
(ಭಾಗ–2, ಪುಟ–62)

ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಬ್ನು ಖ಼ಲ್‌ದೂನ್ ಹೇಳುತ್ತಾರೆ: ಹಝ್ರತ್ ಅಬೂಬಕರ್(ರ)ರ ಮೇಲೆ ಅಲ್ಲಾಹನು ಮಾಡಿದ ಸೂಕ್ಷ್ಮವಾದ ಔದಾರ್ಯ ಮತ್ತು ಹಝ್ರತ್ ಪೈಗಂಬರ್(ಸ)ರೊಂದಿಗೆ ಅವರಿಗಿದ್ದ ಶ್ರೇಷ್ಠವಾದ ಸಾಮೀಪ್ಯದ ವೈಶಿಷ್ಟ್ಯವೇನೆಂದರೆ, ಹಝ್ರತ್ ಪೈಗಂಬರ್(ಸ)ರನ್ನು ಎತ್ತಲಾದ ಅದೇ ಮಂಚದಲ್ಲಿ ಅಬೂಬಕರ್(ರ)ರನ್ನು ಎತ್ತಲಾಯಿತು. ಅವರ ಖಬರನ್ನು ಹಝ್ರತ್ ಪೈಗಂಬರ್(ಸ)ರ ಖಬರಿನ ಹಾಗೆ ಸಮತಟ್ಟುಗೊಳಿಸಲಾಯಿತು. ಹಝ್ರತ್ ಪೈಗಂಬರ್(ಸ)ರ ಸಮಾಧಿಗೆ ಬಹಳ ಸಮೀಪವಾಗಿ ಹಝ್ರತ್ ಅಬೂಬಕರ್(ರ)ರ ಸಮಾಧಿಯನ್ನು ಸಹಾಬಿಯರು ಮಾಡಿದ್ದರು.

ಅಬೂಬಕರ್(ರ) ಉಚ್ಛರಿಸಿದ ಕೊನೆಯ ಮಾತು ಹೀಗಾಗಿತ್ತು: ಹೇ ಅಲ್ಲಾಹ್, ನನ್ನನ್ನು ಮುಸ್ಲಿಮನಾದ ಸ್ಥಿತಿಯಲ್ಲಿ ಮೃತಪಡಿಸು ಮತ್ತು ನನ್ನನ್ನು ಸಜ್ಜನರಲ್ಲಿ ಸೇರಿಸು. (ಪುಟ–176) (ಸಿರ್ರುಲ್ ಖಿಲಾಫ (ಅನುವಾದ) ಪುಟ–189–190, ಅಡಿಟಿಪ್ಪಣಿ)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಬಹಳ ಅಪರೂಪದ ದೈವಿಕ ವ್ಯಕ್ತಿಯಾಗಿದ್ದರು. ಅವರು ಅಂಧಕಾರಗಳ ನಂತರ ಇಸ್ಲಾಮಿನ ಮುಖಕ್ಕೆ ಕಾಂತಿಯನ್ನು ದಯಪಾಲಿಸಿದರು. ಇಸ್ಲಾಮನ್ನು ಉಪೇಕ್ಷಿಸಿದವರನ್ನು ಅವರು ಎದುರಿಸಿದರು. ಸತ್ಯವನ್ನು ನಿರಾಕರಿಸಿದವರೊಡನೆ ಅವರು ಯುದ್ಧ ಮಾಡಿದರು. ಇಸ್ಲಾಮಿನ ಭವನದಲ್ಲಿ ಪ್ರವೇಶಿಸಿದವರೊಡನೆ ಅವರು ಸೌಮ್ಯ ಮತ್ತು ವಾತ್ಸಲ್ಯದಿಂದ ವರ್ತಿಸಿದರು. ಅವರು ಇಸ್ಲಾಮಿನ ಪ್ರಚಾರಕ್ಕಾಗಿ ಕಷ್ಟತೆಗಳನ್ನು ಸಹಿಸಿದರು. ಎದುರಾಳಿಗಳೊಡನೆ ಹೋರಾಟ ನಡೆಸಲು ಅವರು ಎದ್ದು ನಿಂತರು. ಪ್ರವಾದಿತ್ವದ ಸುಳ್ಳುವಾದವನ್ನು ಮಾಡಿದ ಪ್ರತಿಯೊಬ್ಬರನ್ನು ಅವರು ನಾಶ ಮಾಡಿದರು. ಅಲ್ಲಾಹನಿಗಾಗಿ ಎಲ್ಲ ಸಂಬಂಧಗಳನ್ನು ದೂರಕ್ಕೆ ಬಿಸಾಕಿದರು. ಅವರ ಎಲ್ಲ ಸಂತೋಷಗಳು ಹಝ್ರತ್ ಪೈಗಂಬರ್(ಸ)ರ ಅನುಸರಣೆಯಲ್ಲಾಗಿದ್ದುವು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ಹೇಳಿದ್ದೆಲ್ಲವೂ ನನ್ನ ಸ್ವಾರ್ಥ ಅಭಿಲಾಷೆಯನ್ನು ಹಿಂಬಾಲಿಸುತ್ತಾ ಹೇಳಿದ್ದಲ್ಲ.

ಬದಲಾಗಿ ನಾನು ನಡೆಯಲು ಮತ್ತು ಬರೆಯಲು ಆರಂಭಿಸಿದಾಗಿನಿಂದ ಸತ್ಯಶೋಧನೆ ನಡೆಸುವುದು ನನ್ನ ರೀತಿ ಮತ್ತು ಚಿಂತನ ಮಂಥನ ಮಾಡುವುದು ನನ್ನ ಗುರಿಯಾಗಿತ್ತು. ನಾನು ಇದರ ಬಗ್ಗೆ ಪೂರ್ಣವಾಗಿ ಶೋಧನೆ ನಡೆಸಿದ್ದೇನೆ. ನಾನು ಪ್ರತಿಯೊಂದು ಸಂಗತಿಯ ಅನ್ವೇಷಣೆ ನಡೆಸುತ್ತಿದ್ದೆ ಮತ್ತು ಎಲ್ಲ ಜ್ಞಾನಿಗಳೊಡನೆ ಇದರ ಬಗ್ಗೆ ಕೇಳುತ್ತಿದ್ದೆ. ನಾನು ಅಬೂಬಕರ್ ಸಿದ್ದೀಖ್(ರ)ರನ್ನು ನಿಜವಾಗಿಯೂ ಸತ್ಯಸಂಧರನ್ನಾಗಿ ಕಂಡೆನು. ಸಕಲ ಇಮಾಮರ ಇಮಾಮಾಗಿ ಹಾಗೂ ದೀನ್ ಮತ್ತು ಸಮುದಾಯದ ದೀಪವಾಗಿ ಅಬೂಬಕರ್(ರ)ರನ್ನು ಸತ್ಯಾನ್ವೇಷಣೆಯ ಮೂಲಕ ಕಂಡಾಗ ನಾನು ಅವರ ರಿಕಾಪನ್ನು ಬಿಗಿಯಾಗಿ ಹಿಡಿದೆನು ಮತ್ತು ಅವರ ಅಭಯದಲ್ಲಿ ಸುರಕ್ಷಿತನಾದೆನು. ಸಜ್ಜನರನ್ನು ಪ್ರೀತಿಸಿಕೊಂಡು ನನ್ನ ಪ್ರಭುವಿನ ಕಾರುಣ್ಯವನ್ನು ಪಡೆಯಲು ನಾನು ಬಯಸಿದೆ. ಹೀಗೆ ಕಾರುಣ್ಯನಿಧಿಯಾದ ಅಲ್ಲಾಹನು ನನ್ನ ಮೇಲೆ ಕೃಪೆದೋರಿದನು. ಅಭಯ ನೀಡಿದನು, ನನಗೆ ನೆರವು ನೀಡಿದನು, ನನ್ನ ತರಬೇತಿ ಮಾಡಿದನು ಮತ್ತು ನನ್ನನ್ನು ಆದರಣೀಯ ಜನರಲ್ಲಿ ಒಬ್ಬರನ್ನಾಗಿ ಮಾಡಿದನು, ತನ್ನ ವಿಶಿಷ್ಟ ಕಾರುಣ್ಯದಿಂದ ಅವನು ನನ್ನನ್ನು ಈ ಶತಮಾನದ ಮುಜದ್ದಿದ್ ಮತ್ತು ಮಸೀಹ್ ಮೌಊದನ್ನಾಗಿ ಮಾಡಿದನು ಮತ್ತು ನನ್ನನ್ನು ದೈವಿಕ ವಚನವನ್ನು ಗಳಿಸುವವನನ್ನಾಗಿ ಮಾಡಿದನು. ಅವನು ನನ್ನ ದುಃಖವನ್ನು ದೂರೀಕರಿಸಿದನು, ಲೋಕದಲ್ಲಿ ಯಾರಿಗೂ ಕೊಡದಂಥದ್ದನ್ನು ಅವನು ನನಗೆ ದಯಪಾಲಿಸಿದನು. ಇವೆಲ್ಲವೂ ಉಮ್ಮಿಯಾದ ಹಝ್ರತ್ ಪೈಗಂಬರ್(ಸ)ರೊಡನೆ ಮತ್ತು ಅವರ ನಿಕಟ ಸ್ನೇಹಿತರನ್ನು ಪ್ರೀತಿಸಿದ ಕಾರಣದಿಂದ ಲಭಿಸಿದ್ದುವು. ಹೇ ಅಲ್ಲಾಹ್, ಪ್ರವಾದಿಗಳಲ್ಲಿ ಶ್ರೇಷ್ಠರಾದ, ಖಾತಮುಲ್ ಅಂಬಿಯರಾದ ಮತ್ತು ಲೋಕದ ಎಲ್ಲ ಮನುಷ್ಯರಿಗಿಂತ ಶ್ರೇಷ್ಠರಾದ ನಿನ್ನ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಆಶೀರ್ವಾದಗಳನ್ನು ಮತ್ತು ಶಾಂತಿಯನ್ನು ವರ್ಷಿಸು.

ಅಲ್ಲಾಹನಾಣೆ, ಹಝ್ರತ್ ಅಬೂಬಕರ್(ರ) ಮಕ್ಕಾ ಮದೀನದಲ್ಲೂ ಎರಡೂ ಖಬರುಗಳಲ್ಲೂ ಹಝ್ರತ್ ಪೈಗಂಬರ್(ಸ)ರ ಜೊತೆಗಾರರಾಗಿರುವರು. ನಾನು ಇಲ್ಲಿ ಉದ್ದೇಶಿಸಿದ್ದು ಒಂದು ಗುಹೆಯೆಂಬ ಖಬರ್, ಮತ್ತೊಂದು ಹಝ್ರತ್ ಪೈಗಂಬರ್(ಸ) ಖಬರಿನ ಜೊತೆಗೆ ಇರುವ ಖಬರ್ ಆಗಿದೆ. ಆದ್ದರಿಂದ, ನೀವು ಸಿದ್ದಿಕ್ ಅಕ್ಬರ್ ಅವರ ಸ್ಥಾನವನ್ನು ಅರ್ಥಮಾಡಿಕೊಂಡರೆ, ನಿಮಗೆ ಆಳವಾದ ತಿಳುವಳಿಕೆ ಇರುತ್ತದೆ. ಅಲ್ಲಾಹನು ನಿಮ್ಮನ್ನು ಮತ್ತು ನಿಮ್ಮ ಖಲೀಫತ್ ಅನ್ನು ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಿದ್ದಾನೆ ಮತ್ತು ಅತ್ಯುತ್ತಮ ಪದಗಳಲ್ಲಿ ನಿಮ್ಮನ್ನು ಹೊಗಳಿದ್ದಾನೆ. ಹಝ್ರತ್ ಮಸೀಹ್ ಮೌಊದ್(ಅ) ಅವರು ಹೇಳಿದರು: ನಿಸ್ಸಂದೇಹವಾಗಿ, ನೀವು ಅಲ್ಲಾಹನ ಪ್ರೀಯರಾಗಿದ್ದೀರಿ ಮತ್ತು ಅಲ್ಲಾಹನ ಒಲವು ಹೊಂದಿದ್ದೀರಿ ಮತ್ತು ಮೂರ್ಖ ವ್ಯಕ್ತಿಯನ್ನು ಹೊರತುಪಡಿಸಿ ಯಾರೂ ನಿಮ್ಮ ಘನತೆಯನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಇಸ್ಲಾಂಗೆ ಬಂದ ಎಲ್ಲಾ ಬೆದರಿಕೆಗಳನ್ನು ನಿಮ್ಮ ಖಿಲಾಫತ್ ತೆಗೆದುಹಾಕಿತು. ಅವರು(ಅ) ಹೇಳುತ್ತಾರೆ: ಮತ್ತು ನಿಮ್ಮ ಅನುಗ್ರಹದಿಂದ, ಮುಸ್ಲಿಮರ ಸಂತೋಷವು ಅದರ ಪೂರ್ಣತೆಯನ್ನು ತಲುಪಿತು. ಒಂದು ವೇಳೆ ಸೃಷ್ಟಿಗಳಲ್ಲಿ ಉತ್ತಮರಾಗಿರುವ ಪ್ರವಾದಿ(ಸ) ಅವರ ಸಿದ್ದೀಕೆ ಅಕ್ಬರ್ ಸಿದ್ದೀಕ್ ಆಗಿರದಿದ್ದರೆ ಇಸ್ಲಾಂ ಧರ್ಮದ ಸ್ತಂಭವು ಕುಸಿಯುವ ಸಾಧ್ಯತೆ ಇತ್ತು.

ನೀವು ಇಸ್ಲಾಂ ಅನ್ನು ದುರ್ಬಲ ಮತ್ತು ದುರ್ಬಲ ಮತ್ತು ದುರ್ಬಲ ವ್ಯಕ್ತಿಯಂತೆ ಕಂಡುಕೊಂಡಿದ್ದೀರಿ, ಆದ್ದರಿಂದ ನೀವು ಅದರ ವೈಭವ ಮತ್ತು ತಾಜಾತನವನ್ನು ಮರುಸ್ಥಾಪಿಸಲು ತಜ್ಞರಂತೆ ಎದ್ದಿದ್ದೀರಿ ಮತ್ತು ನೀವು ಕಳೆದುಹೋದ ನಿಮ್ಮ ವಸ್ತುವನ್ನು ಹುಡುಕುವಲ್ಲಿ ತೊಡಗಿದ್ದೀರಿ. ಮುಖ, ಅದರ ಯೌವನದ ಸೌಂದರ್ಯ ಮತ್ತು ಅದರ ಶುದ್ಧ ನೀರಿನ ಮಾಧುರ್ಯ ಮತ್ತು ಇದೆಲ್ಲವೂ ಈ ಅಮೀನ್ ಸೇವಕನ ಪ್ರಾಮಾಣಿಕತೆಯಿಂದ ಸಂಭವಿಸಿತು.

ನೀವು ನಿಮ್ಮ ಆತ್ಮವನ್ನು ಮಣ್ಣುಪಾಲು ಮಾಡಿದರು ಮತ್ತು ನಿಮ್ಮ ಸ್ಥಿತಿಯನ್ನು ಬದಲಾಯಿಸಿಕೊಂಡರು ಮತ್ತು ಕರುಣಾಮಯಿಯಾದ ಅಲ್ಲಾಹನ ಪ್ರಸನ್ನತೆಯನ್ನು ಹೊರತುಪಡಿಸಿ ಯಾವುದೇ ಪ್ರತಿಫಲವನ್ನು ಬಯಸಲಿಲ್ಲ ಮತ್ತು ಇದೇ ರೀತಿಯ ಹಗಲಿರುಳು ನಿಮ್ಮ ಮೇಲೆ ಬಂದಿತು. ನೀವು ಕೊಳೆತ ಮೂಳೆಗಳಿಗೆ ಜೀವ ನೀಡುವವರೂ, ವಿಪತ್ತುಗಳನ್ನು ನಿವಾರಿಸುವವರೂ ಮತ್ತು ಮರುಭೂಮಿಯ ಸಿಹಿ ಹಣ್ಣಿನ ಮರಗಳನ್ನು ಉಳಿಸುವವರೂ ಆಗಿದ್ದೀರಿ. ಶುದ್ಧ ದೈವಿಕ ಸಹಾಯವು ನಿಮಗೆ ಬಂದಿತು ಮತ್ತು ಅದು ಅಲ್ಲಾಹನ ಕೃಪೆ ಮತ್ತು ಕರುಣೆಯಿಂದಾಗಿ. ಮತ್ತು ಈಗ ನಾವು ಅಲ್ಲಾಹನನ್ನು ಮಾತ್ರ ನಂಬಿ, ಕೆಲವು ಪುರಾವೆಗಳನ್ನು ಉಲ್ಲೇಖಿಸುತ್ತೇವೆ. ಆದ್ದರಿಂದ ನೀವು ಕೆರಳಿದ ಗಾಳಿ ಮತ್ತು ಉರಿಯುತ್ತಿರುವ ಜ್ವಾಲೆಗಳ ಕ್ಲೇಶಗಳನ್ನು ಹೇಗೆ ಕೊನೆಗೊಳಿಸಿದ್ದೀರಿ ಮತ್ತು ನೀವು ಹೇಗೆ ದೊಡ್ಡ ದೊಡ್ಡ ಯುದ್ಧಗಳಲ್ಲಿ ಮಹಾನ್ ಈಟಿ ಮತ್ತು ಖಡ್ಗಧಾರಿಗಳನ್ನು ಕೊಂಡಿದ್ದೀರಿ ಎಂದು ನಿಮಗೆ ಕಾಣಿಸಬಹುದು. ಈ ರೀತಿಯಾಗಿ, ನಿಮ್ಮ ಕಾರ್ಯಗಳಿಂದ ನಿಮ್ಮ ಆಂತರಿಕ ಸ್ಥಿತಿಯನ್ನು ಬಹಿರಂಗಪಡಿಸಲಾಯಿತು ಮತ್ತು ನಿಮ್ಮ ಕಾರ್ಯಗಳು ನಿಮ್ಮ ಗುಣಲಕ್ಷಣಗಳ ವಾಸ್ತವತೆಗೆ ಸಾಕ್ಷಿಯಾಗಿದೆ. ಅಲ್ಲಾಹನು ನಿಮಗೆ ಉತ್ತಮ ಪ್ರತಿಫಲವನ್ನು ನೀಡಲಿ ಮತ್ತು ನೀವು ಧರ್ಮನಿಷ್ಠ ಇಮಾಮ್‌ಗಳಲ್ಲಿರಲಿ ಮತ್ತು ಈ ಪ್ರೀತಿಪಾತ್ರರ ದಾನಕ್ಕಾಗಿ ಅಲ್ಲಾಹನು ನಮ್ಮ ಮೇಲೆ ಕರುಣೆಸಲಿ. ಓ ಆಶೀರ್ವಾದ ಮತ್ತು ಅನುಗ್ರಹಗಳ ಕರ್ತನೇ! ನನ್ನ ಪ್ರಾರ್ಥನೆಯನ್ನು ಸ್ವೀಕರಿಸು. ನೀನು ಅತ್ಯಂತ ಕರುಣಾಮಯಿ ಮತ್ತು ನೀನು ಕರುಣಾಮಯಿಗಳಲ್ಲಿ ಅತ್ಯುತ್ತಮನು. (ಸಿರ್‌ರುಲ್ ಖಿಲಾಫ (ಅನುವಾದಕ) ಪುಟ 185 ರಿಂದ 187 ಅಡಿಟಿಪ್ಪಣಿಯಿಂದ ಆಯ್ದುಕೊಳ್ಳಲಾಗಿದೆ)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಮಾದರಿಯನ್ನು ಸದಾ ನಿಮ್ಮ ಮುಂದಿರಿಸಿರಿ. ಹಝ್ರತ್ ಪೈಗಂಬರ್(ಸ)ರ ಆ ಕಾಲಘಟ್ಟದ ಬಗ್ಗೆ ಚಿಂತಿಸಿರಿ. ಖುರೈಶಿನ ಶತ್ರುಗಳು ಎಲ್ಲೆಡೆ ಪಿತೂರಿ ಮಾಡಲು ತಯಾರಾಗಿ ನಿಂತಿದ್ದರು. ಅವರು ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಯೋಜನೆ ಹಾಕಿದ್ದರು. ಆ ಕಾಲವು ಬಹಳ ವಿಪತ್ತಿನದ್ದಾಗಿತ್ತು. ಆ ಸಮಯದಲ್ಲಿ ಹಝ್ರತ್ ಅಬೂಬಕರ್(ರ) ಸತ್ಯಕ್ಕೆ ನೆರವಾಗಿ ನಿಂತರು. ಅಂತಹ ಉದಾಹರಣೆ ಲೋಕದಲ್ಲಿ ಕಾಣಲು ಸಾಧ್ಯವಲ್ಲ. ಈ ಶಕ್ತಿಯು ಸತ್ಯಸಂಧತೆ ಮತ್ತು ಸತ್ಯವಿಶ್ವಾಸವಿಲ್ಲದೇ ಲಭಿಸಲು ಸಾಧ್ಯವಲ್ಲ.

ಇಂದು ನೀವಿರುವ ಸ್ಥಾನದಲ್ಲಿ ಇದ್ದುಕೊಂಡು ಯೋಚಿಸಿರಿ, ಅಂತಹ ವಿಪತ್ತು ನಮ್ಮ ಮೇಲೆ ಬಂದರೆ ನಿಮ್ಮಲ್ಲಿ ಎಷ್ಟು ಜನರು ನೆರವಾಗಲು ತಯಾರಾಗುತ್ತೀರಿ? ಈ ಮಾತನ್ನು ಕೇಳಿ ಕೆಲವು ಜನರ ಕೈಕಾಲುಗಳು ಮರಗಟ್ಟುವುವು ಎಂದು ನನಗೆ ಗೊತ್ತಿದೆ. ತಮ್ಮ ಸೊತ್ತುಗಳನ್ನು ಮತ್ತು ಸಂಬಂಧಿಕರನ್ನು ಬಿಡಬೇಕಾಗುವುದು ಎಂಬ ಚಿಂತೆ ತಕ್ಷಣವೇ ಅವರಿಗೆ ಉಂಟಾಗುವುದು.

ಅವರು(ಅ) ಹೇಳುತ್ತಾರೆ: ಕಷ್ಟತೆಗಳ ಸಮಯದಲ್ಲಿ ಜೊತೆಗಿರುವುದೇ ಯಾವಾಗಲೂ ಪರಿಪೂರ್ಣ ವಿಶ್ವಾಸಿಗಳ ಕೆಲಸವಾಗಿರುತ್ತದೆ. ಆದ್ದರಿಂದ ಮನುಷ್ಯನು ಕರ್ಮಪರವಾಗಿ ಸತ್ಯವಿಶ್ವಾಸವನ್ನು ತನ್ನೊಳಗೆ ಹುದುಗಿಸುವ ತನಕ ಬಾಯಿಮಾತಿನಿಂದ ಏನೂ ಪ್ರಯೋಜನವಿಲ್ಲ.

ನಂತರ ಅವರು(ಅ) ಹೇಳುತ್ತಾರೆ, "... ಹೀಗೆ, ರಸೂಲುಲ್ಲಾಹ್(ಸ) ಅವರನ್ನು ಮುತ್ತಿಗೆ ಹಾಕಿದಾಗ ಈ ವಿಪತ್ತಿನ ಸಮಯದಲ್ಲಿ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಅವರ ಪ್ರಾಮಾಣಿಕತೆ ಬಹಿರಂಗವಾಯಿತು. ಕೆಲವು ಅವಿಶ್ವಾಸಿಗಳ ಅಭಿಪ್ರಾಯವು ಉಚ್ಚಾಟನೆಗೆ ಸಹ ಆಗಿತ್ತು, ಆದರೆ ಮೂಲ ಉದ್ದೇಶ ಮತ್ತು ಬಹುಮತದ ಅಭಿಪ್ರಾಯವು ಪ್ರವಾದಿ ಮುಹಮ್ಮದ್(ಸ) ಅವರನ್ನು ವಧಿಸುವುದಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ, ಹಝ್ರತ್ ಅಬೂಬಕರ್(ರ) ಅವರ ಪ್ರಾಮಾಣಿಕತೆ ಮತ್ತು ನಿಷ್ಠೆಯ ಉದಾಹರಣೆಯನ್ನು ತೋರಿಸಿದರು, ಅದು ಶಾಶ್ವತವಾಗಿ ಉಳಿಯುತ್ತದೆ.

ಈ ಸಂಕಷ್ಟದ ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ಅವರ ಈ ಆಯ್ಕೆಯು ಹಝ್ರತ್ ಅಬೂಬಕರ್ ಸಿದ್ದಿಖ್(ರ) ಅವರ ಪ್ರಾಮಾಣಿಕತೆ ಮತ್ತು ಹೆಚ್ಚಿನ ನಿಷ್ಠೆಗೆ ಪ್ರಬಲ ಪುರಾವೆಯಾಗಿದೆ. ನೋಡಿರಿ! ಭಾರತದ ವೈಸರಾಯ್ ಒಬ್ಬ ವ್ಯಕ್ತಿಯನ್ನು ನಿರ್ದಿಷ್ಟ ಕೆಲಸಕ್ಕೆ ಆಯ್ಕೆ ಮಾಡಿದರೆ, ಅವನ ಅಭಿಪ್ರಾಯವು ಸರಿ ಮತ್ತು ಉತ್ತಮವಾಗಿರುತ್ತದೆಯೇ ಅಥವಾ ಚೌಕಿದಾರನ ಅಭಿಪ್ರಾಯವೇ? ಅವರು ಹೇಳುತ್ತಾರೆ "ವೈಸರಾಯ್‌ನ ಆಯ್ಕೆಯು ಸರಿ ಮತ್ತು ಸೂಕ್ತವಾಗಿರುತ್ತದೆ ಎಂದು ನಾವು ನಂಬಬೇಕು ಏಕೆಂದರೆ ರಜ್ಯದ ಕಡೆಯಿಂದ ವೈಸರಾಯ್ ಆಗಿ ನೇಮಕಗೊಂಡ ಪರಿಸ್ಥಿತಿಯಲ್ಲಿ ಅವರ ನಿಷ್ಠೆ, ಸಮಗ್ರತೆ ಮತ್ತು ನಿರ್ಣಯವನ್ನು ನಂಬಿದ್ದಾರೆ. ಆದ್ದರಿಂದ ರಾಜ್ಯವು ಅವರ ಕೈಯಲ್ಲಿ ನೀಡಲಾಗಿದೆ. ನಂತರ ಅವರ ಅಭಿಪ್ರಾಯ ಮತ್ತು ತಿಳುವಳಿಕೆಯನ್ನು ನಿರ್ಲಕ್ಷಿಸಿ ಚೌಕಿದಾರನನ್ನು ಆಯ್ಕೆ ಮತ್ತು ಅಭಿಪ್ರಾಯವನ್ನು ಸರಿಯಾಗಿ ಪರಿಗಣಿಸುವುದು ಸೂಕ್ತವಲ್ಲ.

ಈ ಪರಿಸ್ಥಿತಿಯೇ ರಸೂಲುಲ್ಲಾಹ್(ಸ) ಅವರ ಚುನಾವಣೆಯಾಗಿತ್ತು. ಆ ಸಮಯದಲ್ಲಿ, ಅವರು(ಸ) ಹಝ್ರತ್ ಅಲಿ(ರ) ಸೇರಿದಂತೆ 70-80 ಸಹಚರರನ್ನು ಹೊಂದಿದ್ದರು, ಆದರೆ ಅವರೆಲ್ಲರಲ್ಲಿ ಅವರು ಹಝ್ರತ್ ಅಬೂಬಕರ್(ರ) ಅವರನ್ನು ತಮ್ಮ ಸಂಗಡಿಗನನ್ನಾಗಿ ಆಯ್ಕೆ ಮಾಡಿದರು. ಅದರಲ್ಲಿರುವ ರಹಸ್ಯವೇನು? ವಿಷಯವೆಂದರೆ ಪ್ರವಾದಿಯು ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಿಂದ ಕಾಣುತ್ತಾನೆ ಮತ್ತು ಆತನ ತಿಳುವಳಿಕೆಯು ಸರ್ವಶಕ್ತನಾದ ಅಲ್ಲಾಹನಿಂದ ಬಂದಿದೆ. ಅದಕ್ಕಾಗಿಯೇ ಅಲ್ಲಾಹನು ರಸೂಲುಲ್ಲಾಹ್(ಸ) ಅವರಿಗೆ ದೈವದರ್ಶನ ಹಾಗೂ ದೈವವಾಣಿಯ ಮೂಲಕ ಈ ಕೆಲಸಕ್ಕೆ ಉತ್ತಮ ಮತ್ತು ಅತ್ಯಂತ ಸೂಕ್ತವಾದ ವ್ಯಕ್ತಿ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಎಂದು ಬಹಿರಂಗಪಡಿಸಿದರು. ಈ ಕಷ್ಟಕರವಾದ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ಅವರೊಂದಿಗಿದ್ದರು. ಇದು ಅಪಾಯಕಾರಿ ಪ್ರಯೋಗದ ಸಮಯವಾಗಿತ್ತು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ".....ಒಟ್ಟಿನಲ್ಲಿ, ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರಿಗೆ ಪೂರ್ಣ ರೀತಿಯಲ್ಲಿ ನೆರವಾಗಿ ನಿಂತರು. ಸೌರ್ ಗುಹೆಯಲ್ಲಿ ಅವರಿಬ್ಬರೂ ಅಡಗಿ ಕುಳಿತರು. ಸತ್ಯನಿಷೇಧಿಗಳಾದ ದುಷ್ಟರು ಅವರಿಗೆ ತೊಂದರೆ ನೀಡಲು ಯೋಜನೆಯನ್ನು ಮಾಡಿದ್ದರು. ಹುಡುಕುತ್ತಾ ಗುಹೆಯ ತನಕ ತಲುಪಿದ್ದರು. ಹಝ್ರತ್ ಅಬೂಬಕರ್(ರ) ಹೇಳಿದರು: ಈಗಂತು ಅವರು ಗುಹೆಯ ಮುಂದೆಯೇ ಬಂದುಬಿಟ್ಟಿರುವರು. ಅವರಲ್ಲಿ ಯಾರಾದರೂ ಸ್ವಲ್ಪವಾದರೂ

ತಮ್ಮ ದೃಷ್ಟಿಯನ್ನು ಕೆಳಗೆ ಮಾಡಿ ನೋಡಿದರೆ, ನಾವು ಹಿಡಿಯಲ್ಪಡುವೆವು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: **ಲಾ ತಹ್‌ಝನ್ ಇನ್ನಲ್ಲಾಹ ಮಅನಾ.** (ಅತ್ತೌಬ: 40) ದುಃಖಿಸಬೇಡ, ಅಲ್ಲಾಹನು ನಮ್ಮ ಜೊತೆಗಿದ್ದಾನೆ. ಈ ಪದದ ಬಗ್ಗೆ ಚಿಂತಿಸಿರಿ. ಹಝ್ರತ್ ಪೈಗಂಬರ್(ಸ) ಅಬೂಬಕರ್(ರ)ರನ್ನು ತನ್ನ ಜೊತೆಗೆ ಸೇರಿಸಿ ಹೇಳುತ್ತಾರೆ. **ಮಅನಾ** ಎಂಬ ಪದದಲ್ಲಿ ಇಬ್ಬರೂ ಒಳಪಡುತ್ತಾರೆ. ತಕ್ಕಡಿಯ ಎರಡು ತಟ್ಟೆಗಳು ಇರುತ್ತವೆ. ಒಂದರಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಇರಿಸಲಾಯಿತು. ಮತ್ತೊಂದರಲ್ಲಿ ಹಝ್ರತ್ ಅಬೂಬಕರ್(ರ)ರನ್ನು ಇರಿಸಲಾಯಿತು. ಇಬ್ಬರೂ ವಿಪತ್ತಿನಲ್ಲಿದ್ದರು. ಏಕೆಂದರೆ ಅದು ಎಂತಹ ಸನ್ನಿವೇಶವಾಗಿತ್ತು ಎಂದರೆ, ಒಂದೋ ಇಸ್ಲಾಮಿನ ಅಡಿಪಾಯ ಕಟ್ಟಲ್ಪಡಬಹುದಾಗಿತ್ತು. ಅಥವಾ ಕೊನೆಗೊಳ್ಳಬಹುದಾಗಿತ್ತು.

ಶತ್ರುಗಳು ಗುಹೆಯ ಹೊರಗೆ ಇದ್ದರು. ವಿವಿಧ ವಿಧಗಳ ಅಭಿಪ್ರಾಯಗಳು ನಡೆಯುತ್ತಿದ್ದುವು. ಈ ಗುಹೆಯನ್ನು ಶೋಧಿಸಲು ಕೆಲವರು ಹೇಳಿದರು. ಏಕೆಂದರೆ ಕಾಲ್ನಡಿಗೆಯ ಗುರುತುಗಳು ಅಲ್ಲಿಗೆ ಕೊನೆಗೊಂಡಿದ್ದುವು. ಆದರೆ ಇಲ್ಲಿ ಒಬ್ಬ ಮನುಷ್ಯನು ಹೇಗೆ ಪ್ರವೇಶಿಸುವನು ಎಂದು ಕೆಲವರು ಹೇಳಿದರು. ಜೇಡವು ಬಲೆಯನ್ನು ಕಟ್ಟಿದೆ ಮತ್ತು ಪಾರಿವಾಳ ಮೊಟ್ಟೆಗಳನ್ನು ನೀಡಿದೆ ಎಂಬಿತ್ಯಾದಿ ಮಾತುಗಳ ಧ್ವನ ಕೇಳು ಬರುತ್ತಿತ್ತು. ಅಂತಹ ಸ್ಥಿತಿಯಲ್ಲಿ ಅವರ ತನ್ನ ಸ್ನೇಹಿತನೊಡನೆ **ಲಾ ತಹ್‌ಝನ್ ಇನ್ನಲ್ಲಾಹ ಮಅನಾ** ಎಂದು ಹೇಳುತ್ತಾರೆ. ಶತ್ರುಗಳು ಅವರ ಧ್ವನಿಯನ್ನು ಕೇಳುವರು ಎಂಬುದರ ಪರಿವೆಯನ್ನು ಅವರು ಮಾಡಲಿಲ್ಲ. ಇದು ಅವರಿಗೆ ಅಲ್ಲಾಹನ ಮೇಲಿದ್ದ ವಿಶ್ವಾಸ ಮತ್ತು ಪರಿಜ್ಞಾನದ ಪುರಾವೆಯಾಗಿದೆ. ಅಲ್ಲಾಹನ ವಾಗ್ದಾನದ ಮೇಲೆ ಇದ್ದ ಭರವಸೆಯಾಗಿತ್ತು. ಹಝ್ರತ್ ಪೈಗಂಬರ್(ಸ)ರ ಧೈರ್ಯಕ್ಕೆ ಈ ಉದಾಹರಣೆ ಸಾಕು. ಹಝ್ರತ್ ಅಬೂಬಕರ್(ರ)ರ ಧೈರ್ಯಕ್ಕೆ ಬೇರೊಂದು ಉದಾಹರಣೆಯಿದೆ.

ಹಝ್ರತ್ ಪೈಗಂಬರ್(ಸ) ನಿಧನರಾದಾಗ ಹಝ್ರತ್ ಉಮರ್(ರ) ಖಡ್ಗವನ್ನು ಎತ್ತಿ ಹೊರಟರು. ಯಾರಾದರೂ ಹಝ್ರತ್ ಪೈಗಂಬರ್(ಸ) ನಿಧನರಾಗಿರುವರು ಎಂದು ಯಾರಾದರೂ ಹೇಳಿದರೆ ನಾನು ಅವರನ್ನು ವಧಿಸುವೆನು ಎಂದು ಹೇಳಿದರು. ಇಂತಹ ಸ್ಥಿತಿಯಲ್ಲಿ ಹಝ್ರತ್ ಅಬೂಬಕರ್(ರ) ಬಹಳ ಧೈರ್ಯ ಮತ್ತು ಕೆಚ್ಚೆದೆಯಿಂದ ಎದ್ದುನಿಂತು ಭಾಷಣ ಮಾಡಿದರು. **ವಮಾ ಮುಹಮ್ಮದುನ್ ಇಲ್ಲಾ ರಸೂಲ್ ಖದ್ ಖಲತ್ ಮಿನ್‌ಖಬ್‌ಲಿಹಿಲ್ ರುಸುಲ್** ಎಂದು ಹೇಳಿದರು. ಎಂದರೆ, ಮುಹಮ್ಮದ್(ಸ) ಪ್ರವಾದಿಯಾಗಿರುವರು. ಅವರ ಮುಂಚಿನ ಪ್ರವಾದಿಗಳು ಎಲ್ಲರೂ ಗತಿಸಿ ಹೋಗಿರುವರು. ಆಗ ಆವೇಶ ತಣ್ಣಗಾಯಿತು. ಅದರ ನಂತರ ಅರಣ್ಯವಾಸಿಗಳಾದ ಅರಬಿಗಳು ಧರ್ಮತ್ಯಾಗ ಮಾಡಿದರು. ಅಂತಹ ಅಪಾಯಕಾರಿ ಸ್ಥಿತಿಯ ಬಗ್ಗೆ ಹಝ್ರತ್ ಆಯಿಶ(ರ) ಹೀಗೆ ಹೇಳಿರುವರು: ಹಝ್ರತ್ ಪೈಗಂಬರ್(ರ) ನಿಧನರಾದಾಗ ಕೆಲವು ಸುಳ್ಳು ಪ್ರವಾದಿಗಳು ಬಂದರು. ಕೆಲವು ನಮಾಝನ್ನು ಉಪೇಕ್ಷಿಸಿದರು. ಕೆಲವರು ಅದರ ರೂಪವನ್ನು ಬದಲಾಯಿಸಿದರು. ಅಂತಹ ವಿಪತ್ತಿನ ಸ್ಥಿತಿಯಲ್ಲಿ ನನ್ನ ತಂದೆ ಹಝ್ರತ್ ಪೈಗಂಬರ್(ಸ)ರ ಖಲೀಫರಾದರು ಕಷ್ಟತೆಗಳ ಪರ್ವತ ಮೇಲೆ ಬಿದ್ದರೂ ಅವರು ಆತ್ಮವಿಶ್ವಾಸ ಮತ್ತು ಧೈರ್ಯವನ್ನು ಕೈಬಿಡಲಿಲ್ಲ.

ಇದು ಸಾಮಾನ್ಯ ವ್ಯಕ್ತಿಯಿಂದ ನಡೆಯುವ ಸಂಗತಿಯಲ್ಲ. ಈ ಸ್ಥಿರಚಿತ್ತತೆಗೆ ಸತ್ಯಸಂಧತೆ ಬೇಕು. ಅದನ್ನು ಅಬೂಬಕರ್ ಸಿದ್ದೀಕ್(ರ) ತೋರಿಸಿದರು. ಬೇರೆ ಯಾರಿಂದಲೂ ಈ ಅಪಾಯಕಾರಿ ಸ್ಥಿತಿಯನ್ನು ಸುಧಾರಿಸಲು ಸಾಧ್ಯವಿರಲಿಲ್ಲ. ಎಲ್ಲ ಸಹಾಬಿಯರು ಅಲ್ಲಿ ಉಪಸ್ಥಿತರಿದ್ದರು. ಇದು ನಮ್ಮ ಹಕ್ಕೆಂದು ಯಾರೂ ಹೇಳಲಿಲ್ಲ. ಬೆಂಕಿ ಉರಿಯುತ್ತಿರುವುದನ್ನು ಅವರು ನೋಡುತ್ತಿದ್ದರು. ಆ ಬೆಂಕಿಗೆ ಯಾರಿಗೆ ಜಿಗಿಯಲು ಸಾಧ್ಯ? ಇಂತಹ ಸ್ಥಿತಿಯಲ್ಲ ಹಝ್ರತ್ ಉಮರ್(ರ) ತನ್ನ ಕೈಯನ್ನು ಚಾಚಿ ಹಝ್ರತ್ ಅಬೂಬಕರ್(ರ)ರಿಗೆ ಬೈಅತ್ ಮಾಡಿದರು. ಅದರ ನಂತರ ಇತರ ಸಹಾಬಿಯರು ಬೈಅತ್ ಮಾಡಿದರು. ಅವರ ಸತ್ಯಸಂಧತೆಯ ಕಾರಣದಿಂದ ಅವರು ಆ ಪಿತೂರಿಯನ್ನು ದಮನಿಸಿದರು. ದುಷ್ಟರನ್ನು ನಾಶ ಮಾಡಿದರು. ಮುಸೈಲಿಮರ ಜೊತೆ ಒಂದು ಲಕ್ಷ ಜನರಿದ್ದರು. ಆದರೆ ಅಲ್ಲಾಹನು ಎಲ್ಲ ಕಷ್ಟತೆಗಳನ್ನು ಸುಲಭಗೊಳಿಸಿದನು. (ಮಲ್‌ಫೂಝಾತ್, ಸಂಪುಟ–1, ಪುಟ–374–379, 1984 ಆವೃತಿ)

ಒಬ್ಬ ವ್ಯಕ್ತಿ ಎಲ್ಲಿ ವರೆಗೆ ಅಬೂಬಕರ್, ಉಮರ್, ಉಸ್ಮಾನ್ ಮತ್ತು ಅಲಿ **ರಝಿಯಲ್ಲಾಹು ಅನ್‌ಹುಂ ಅಜ್‌ಮಈನ್‌ರ** ಬಣ್ಣವನ್ನು ತನ್ನೊಳಗೆ ಉಂಟುಮಾಡಿದಿಲ್ಲವೋ ಅಲ್ಲಿಯ ವರೆಗೂ ಮುಸ್ಲಿಮ್ ಮತ್ತು ಮೂಮಿನ್ ಆಗಲಾರನು. ಅವರಂತು ತಮ್ಮ ಜೀವಿತಗಳನ್ನು ಅಲ್ಲಾಹನ ಮಾರ್ಗದಲ್ಲಿ ವಖ್ಫ್ ಮಾಡಿದ್ದರು. (ಲೆಕ್ಚರ್ ಲುಧಿಯಾನ, ರೂಹಾನಿ ಖಝಾಈನ್, ಸಂಪುಟ–20, ಪುಟ–294)

ನಂತರ ಅವರು(ಅ) ಹೇಳಿದರು: "ಅಲ್ಲಾಹನಾಣೆ! ಸಿದ್ದಿಖ್–ಎ–ಅಕ್ಬರ್(ರ) ಸರ್ವಶಕ್ತನಾದ ಅಲ್ಲಾಹನಿಂದ ಅನೇಕ ವಿಶೇಷ ವಸ್ತ್ರಗಳನ್ನು ನೀಡಲಾಗಿತ್ತು." ಅನೇಕ ಗುಣಲಕ್ಷಣಗಳನ್ನು ನೀಡಲಾಗಿದೆ. "ಮತ್ತು ಅವರು ವಿಷೇಶ ದೈವಪುರುಷರಲ್ಲಿ ಒಬ್ಬರು ಎಂದು ಸರ್ವಶಕ್ತನಾದ ಅಲ್ಲಾಹನು ಸಾಕ್ಷಿ ನೀಡಿದನು. ಮತ್ತು ತನ್ನ ಉಪಸ್ಥಿತಿಯನ್ನು ಅವರ ಕಡೆಗೆ ಗುರುತಿಸಿದನು. ಮತ್ತು ನಿಮ್ಮನ್ನು ಹೊಗಳಿದನು, ಮತ್ತು ನೀವು ಅಂತಹ ವ್ಯಕ್ತಿ ಎಂದು ಸೂಚಿಸಿದನು. ನೀವು ಎಂತಹ ವ್ಯಕ್ತಿಯಾಗಿದ್ದರು ಎಂದರೆ ನಿಮಗೆ ರಸೂಲುಲ್ಲಾಹ್(ಸ) ಅವರ ಬೇರ್ಪಡಿಕೆ ಸುಲಭವಾಗಿರಲಿಲ್ಲ. ಹಾಂ, ರಸೂಲುಲ್ಲಾಹ್(ಸ) ಅವರನ್ನು ಹೊರತುಪಡಿಸಿ, ನೀವು ಇತರ ಪ್ರೀತಿಪಾತ್ರರ ಮತ್ತು ಸಂಬಂಧಿಕರ ಪ್ರತ್ಯೇಕತೆಯನ್ನು ಒಪ್ಪಿಕೊಂಡರು. ನೀವು ನಿಮ್ಮ ಯಜಮಾನರನ್ನು ಆದ್ಯತೆ ನಿಡಿದರು. ಮತ್ತು ಅವರ ಕಡೆಗೆ ಓಡಿಬಂದರು. ನಂತರ, ನೀವು ಈ ಪರಿಪೂರ್ಣ ಆಕರ್ಷಣೆಯಿಂದ ತಮ್ಮನ್ನು ಸಾವಿನ ಬಾಯಿಗೆ ಎಸೆದರು ಮತ್ತು ಪ್ರತಿಯೊಂದು ಇಂದ್ರಿಯಾಸಕ್ತಿಗಳನ್ನು ತ್ಯಜಿಸಿದರು. ರಸೂಲುಲ್ಲಾಹ್(ಸ) ಅವರು ಅವರ ಸಾಂಗತ್ಯಕ್ಕಾಗಿ ಕರೆದಾಗ ಅವರು 'ಲಬ್ಬೈಕ್' ಹಾಜರಾಗಿದ್ದೇನೆ ಎಂದು ಒಪ್ಪಿಕೊಂಡರು. ಮತ್ತು ಜನರು ಅಲ್ಲಾಹನ ಪ್ರೀತಿಯ ಪ್ರವಾದಿಯಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರನ್ನು ಹೊರಹಾಕಲು ಉದ್ದೇಶಿಸಿದಾಗ, ಮಹಿಮಾವಂತನಾದ ಹಗೂ ಸರ್ವಶಕ್ತನಾದ ಅಲ್ಲಾಹನ ಪ್ರೀತಿಯ ಸಂದೇಶವಾಹಕರು ನಿಮ್ಮ ಬಳಿಗೆ ಬಂದು, ನನಗೆ ಹಿಜ್ರತ್ ಮಾಡಲು ಆದೇಶಿಸಲಾಗಿದೆ ನೀವು ನನ್ನೊಂದಿಗೆ ಹಿಜ್ರತ್ ಮಾಡುವಿರಾ ನಾವಿಬ್ಬರು ಒಟ್ಟಿಗೆ ಈ ಊರಿಸಿಂದ ಹೊರಡುವೆವು ಎಂದು ಹೇಳಿದರು. ನಂತರ ಹಝ್ರತ್ ಸಿದ್ದೀಕ್(ರ) ಅವರು ಅಲ್ಹಮ್ದುಲಿಲ್ಲಾಹ್ ಪಠಿಸಿದರು, ಅಂತಹ ಸಂದಿಗ್ಧದ ಸಂದರ್ಭದಲ್ಲಿ ಅಲ್ಲಾಹನು ಮುಸ್ತಫಾ(ಸ) ಅವರ ಸ್ನೇಹಿತನಾಗುವ ಭಾಗ್ಯವನ್ನು ನೀಡಿದ್ದಾನೆ. ಅವರು ಆಗಲೇ ಹಿಂಸೆಗೆ ಒಳಗಾಗಿರುವ ರಸೂಲ್(ಸ) ಅವರ ಸಹಾಯಕ್ಕಾಗಿ ಕಾಯುತ್ತಿದ್ದರು. ಪರಿಸ್ಥಿತಿ ಈ ಹಂತಕ್ಕೆ ತಲುಪಿದಾಗ ಅವರು(ರ) ಸಂಪೂರ್ಣ ನಿಷ್ಠೆಯಿಂದ ಮತ್ತು ಪರಿಣಾಮಗಳನ್ನು ಲೆಕ್ಕಿಸದೆ ಈ ಕಷ್ಟಕರವಾದ ಸಂದರ್ಭದಲ್ಲಿ ಅವರನ್ನು(ಸ) ಬೆಂಬಲಿಸಿದರು. ಮತ್ತು ಅವರನ್ನು ಕೊಲ್ಲುವ ಹಂತಕರ ಯೋಜನೆಗಳಿಗೆ ಹೆದರಲಿಲ್ಲ. ಆದ್ದರಿಂದ, ನಿಮ್ಮ ಶ್ರೇಷ್ಠತೆಯು ತ್ವರಿತ ತೀರ್ಪು ಮತ್ತು ಬಲವಾದ ಸಾಕ್ಷ್ಯದಿಂದ ಸಾಬೀತಾಗಿದೆ, ಮತ್ತು ನಿಮ್ಮ ಶ್ರೇಷ್ಠತೆಯು ಒಂದು ಸಷ್ಟ ಪುರಾವೆಯಿಂದ ಸ್ಪಷ್ಟವಾಗಿದೆ ಮತ್ತು ನಿಮ್ಮ ಸದಾಚಾರವು ಪ್ರಕಾಶಮಾನವಾದ ದಿನದಂತೆ ಪ್ರಕಾಶಮಾನವಾಗಿದೆ. ಅವರು ಪರಲೋಕದ ಅನುಗ್ರಹಗಳಿಗೆ ಆದ್ಯತೆ ನೀಡಿದರು ಮತ್ತು ಈ ಪ್ರಪಂಚದ ಅಮೂಲ್ಯವಾದ ಅನುಗ್ರಹಗಳನ್ನು ತ್ಯಜಿಸಿದರು. ನಿಮ್ಮ ಈ ಸದ್ಗುಣಗಳನ್ನು ಇತರರು ತಲುಪಲು ಸಾಧ್ಯವಿಲ್ಲ.

ಅವರು ಹೇಳುತ್ತಾರೆ, "ನೀವು ಕೇಳಿದರೆ, ಖಿಲಾಫತ್ ಸರಪಳಿಯನ್ನು ಪ್ರಾರಂಭಿಸಲು ಅಲ್ಲಾಹನು ನಿಮ್ಮನ್ನು ಏಕೆ ಆದ್ಯತೆ ನೀಡಿದನು ಮತ್ತು ಇದರಲ್ಲಿ ಸರ್ವಶಕ್ತನಾದ ಅಲ್ಲಾಹನ ಹಿಕ್ಮತ್ (ಬುದ್ಧಿವಂತಿಕೆ) ಏನು? ತಿಳಿಯಬೇಕಾದ ವಿಷಯವೆಂದರೆ ಮುಸ್ಲಿಮೇತರ ರಾಷ್ಟದಿಂದ ಬಂದ ಹಝ್‌ತ್ ಸಿದ್ದೀಕ್ ಅಕ್ಬರ್(ರ) ಅವರು ಅಲ್ಲಾಹನ ಸಂದೇಶವಾಹಕರನ್ನು(ಸ) ಪರಿಪೂರ್ಣ ಹೃದಯದಿಂದ ನಂಬಿದ್ದರು ಮತ್ತು ರಸೂಲುಲ್ಲಾಹ್(ಸ) ಅವರು ಒಬ್ಬರಾಗಿದ್ದ ಸಮಯದಲ್ಲಿ ಮತ್ತು ಪಿತೂರಿತನವು ಹೆಚ್ಚಾಗಿದ್ದ ಸಂದರ್ಭದಲ್ಲಿ ಅವರು ವಿಶ್ವಾಸ ತಂದಿದ್ದರು. ಹೀಗೆ ಹಝ್ರತ್ ಅಬೂಬಕ್ಕರ್ ಸಿದ್ದೀಖ್(ರ) ಅವರು ನಂಬಿಕೆಯ ನಂತರ ಎಲ್ಲಾ ರೀತಿಯ ಅಪಮಾನ ಮತ್ತು ಅವಮಾನಗಳನ್ನು ಕಂಡರು ಮತ್ತು ರಾಷ್ಟ್ರ, ಕುಟುಂಬ, ಕುಲ, ಸ್ನೇಹಿತರು ಮತ್ತು ಸಹೋದರರಿಂದ ಶಾಪಗ್ರಸ್ತರಾಗಿದ್ದರು, ಅವರಿಗೆ ಪರಮ ಕರುಣಾಮಯಿಯಾದ ಅಲ್ಲಾಹನ ಮಾರ್ಗದಲ್ಲಿ ಕಷ್ಟಗಳನ್ನು ನೀಡಲಾಯಿತು ಮತ್ತು ಅದೇ ರೀತಿಯಲ್ಲಿ ಅವರನ್ನು ತನ್ನ ತಾಯ್ನಾಡಿನಿಂದ ರಸೂಲುಲ್ಲಾಹ್(ಸ) ಅವರನ್ನು ಹೊರಹಾಕಿದಂತೆಯೇ ಅವರನ್ನು ಹೊರಹಾಕಲಾಯಿತು. ನಿಮ್ಮ ಆತ್ಮೀಯ ಸ್ನೇಹಿತರಿಂದ ಮತ್ತು ಶಾಪಗಳಿಂದ ನೀವು ಸಾಕಷ್ಟು ನೋವನ್ನು ಅನುಭವಿಸಿದರು. ನೀವು ಅಲ್ಲಾಹನ ಮಾರ್ಗದಲ್ಲಿ ನಿಮ್ಮ ಸಂಪತ್ತು ಮತ್ತು ಜೀವನದಿಂದ ಜಿಹಾದ್(ಪ್ರಯತ್ನ) ಮಾಡಿದರು. ನೀವು ಉದಾತ್ತ ಕುಟುಂಬದಲ್ಲಿ ಜನಿಸಿದರೂ, ನೀವು ಸಾಮಾನ್ಯ ಜನರಂತೆ ಬದುಕಿದ್ದರು. ನೀವು ಅಲ್ಲಾಹನ ಮಾರ್ಗದಲ್ಲಿ (ತಾಯ್ನಾಡಿನಿಂದ) ಹೊರಹಾಕಲ್ಪಟ್ಟಿದ್ದರು. ಅಲ್ಲಾಹನ ಮಾರ್ಗದಲ್ಲಿ ನೀವು ಕಿರುಕುಳಕ್ಕೊಳಗಾಗಿದ್ದರು. ನೀವು ನಿಮ್ಮ ಸಂಪತ್ತಿನಿಂದ ಅಲ್ಲಾಹನ ಮಾರ್ಗದಲ್ಲಿ ಹೋರಾಡಿದ್ದೀರಿ ಮತ್ತು ಸಂಪತ್ತನ್ನು ಸ್ವಾಧೀನಪಡಿಸಿಕೊಂಡ ನಂತರ ನೀವು ಬಡವರಂತೆ ಜೀವನವನ್ನು ಸಾಗಿಸಿದರು. ಅಲ್ಲಾಹನು ಕಳೆದ ದಿನಗಳ ಪ್ರತಿಫಲವನ್ನು ನಿಮಗೆ ನೀಡಲು ಉದ್ದೇಶಿಸಿದ್ದಾನೆ ಮತ್ತು ನಿಮ್ಮ ಕೈಗೆ ಸಿಗದಿದ್ದಕ್ಕಿಂತ ಉತ್ತಮ ಪ್ರತಿಫಲವನ್ನು ನೀಡುತ್ತಾನೆ ಮತ್ತು ಅಲ್ಲಾಹನ ಸಂತೃಪ್ತಿಯನ್ನು ಪಡೆಯಲು ನೀವು ಅನುಭವಿಸಿದ ಸಂಕಷ್ಟಗಳ ಪ್ರತಿಫಲವನ್ನು ನಿಮಗೆ ತಿಳಿಸುತ್ತಾನೆ ಮತ್ತು ಅಲ್ಲಾಹನು ಉಪಕಾರಿಗಳನ್ನು ಎಂದಿಗೂ ವ್ಯರ್ಥ ಮಾಡುವುದಿಲ್ಲ. ಆದ್ದರಿಂದ, ನಿಮ್ಮ ಕರ್ತನು ನಿಮ್ಮನ್ನು ಖಲೀಫರನ್ನಾಗಿ ಮಾಡಿದನು ಮತ್ತು ನಿಮಗಾಗಿ ನಿಮ್ಮ ಧಿಕ್ರ್ ಅನ್ನು ಹೆಚ್ಚಿಸಿದನು ಮತ್ತು ನಿಮಗೆ ಸಾಂತ್ವನ ನೀಡಿದನು ಮತ್ತು ಆತನ ಅನುಗ್ರಹ ಮತ್ತು ಕರುಣೆಯಿಂದ ನಿಮ್ಮನ್ನು ಗೌರವಿಸಿದನು ಮತ್ತು ನಿಮ್ಮನ್ನು ಅಮೀರುಲ್ ಮುಮಿನೀನ್ ಆಗಿ ಮಾಡಿದನು. (ಸಿರ್ರುಲ್ ಖಿಲಾಫ (ಅನುವಾದ), ಪುಟ–63 ರಿಂದ 66)

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಹಝ್ರತ್ ಅಬೂಬಕರ್ ಸಿದ್ದೀಖ್(ರ), ಹಝ್ರತ್ ಉಮರ್

ಫಾರೂಖ್(ರ), ಹಝ್ರತ್ ಉಸ್ಮಾನ್(ರ) ಹಾಗೂ ಹಝ್ರತ್ ಅಲೀ(ರ) ರವರೆಲ್ಲರು ನಿಸ್ಸಂದೇಹವಾಗಿಯೂ ಧರ್ಮದಲ್ಲಿ ಅಮೀನ್ (ನಿಷ್ಠರು) ಆಗಿದ್ದರು.

ಇಸ್ಲಾಂ ಧರ್ಮದ ಎರಡನೇ ಆದಮ್ ಆಗಿರುವ ಅಬೂಬಕರ್(ರ) ಮತ್ತು ಹಝ್ರತ್ ಉಮರ್ ಫಾರೂಕ್(ರ) ಮತ್ತು ಹಝ್ರತ್ ಉಸ್ಮಾನ್(ರ) ಅವರು ಧರ್ಮದಲ್ಲಿ ನಿಜವಾದ ನಿಷ್ಠಾವಂತರು ಇರದಿದ್ದರೆ ಇಂದು ನಮಗೆ ಪವಿತ್ರ ಖುರ್‌ಆನ್‌ನ ಒಂದೇ ಒಂದು ಆಯತನ್ನು ಹೇಳಲು ಕಷ್ಟವಾಗುತ್ತಿತ್ತು. (ಮಕ್ತೂಬಾತೆ ಅಹ್ಮದ್, ಸಂಪುಟ–2, ಪುಟ–151, ಮಕ್ತೂಬ್ ಸಂಖ್ಯೆ–2, ಮಕ್ತೂಬ್ ಬನಾಮ್ ಹಝ್ರತ್ ಖಾನ್ ಸಾಹಿಬ್ ಮುಹಮ್ಮದ್ ಅಲೀ ಕಾನ್ ಸಾಹಿಬ್(ರ))

ಮತ್ತೊಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಹಝ್ರತ್ ಅಬೂಬಕರ್(ರ) ಇಸ್ಲಾಂ ಧರ್ಮದ ಎರಡನೇ ಆದಮ್ ಆಗಿದ್ದರು, ಆ ಯುಗದಲ್ಲಿಯೂ ಸಹ, ಮುಸೈಲ್ಮಾ ಅಸಂಬದ್ಧತೆಯ ರೂಪದಲ್ಲಿ ಜನರನ್ನು ಒಟ್ಟುಗೂಡಿಸಿದನು. ಇಂತಹ ಸಮಯದಲ್ಲಿ ಹಝ್ರತ್ ಅಬೂಬಕ್ಕರ್(ರ) ಖಲೀಫಾ ಆಗಿದ್ದರೆ ಅಂತಹ ಸಂದರ್ಭದಲ್ಲಿ ಅವರಿಗೆ ಎಷ್ಟು ಕಷ್ಟಗಳು ಎದುರಾಗಬಹುದೆಂದು ಮನುಷ್ಯ ಊಹಿಸಬಹುದು. ಅವರಿಗೆ ದೃಢವಾದ ಹೃದಯವಿಲ್ಲದಿದ್ದರೆ ಮತ್ತು ರಸೂಲುಲ್ಲಾಹ್(ಸ) ಅವರ ವಿಶ್ವಾಸದ ಹಾಗೆ ಅವರ ವಿಶ್ವಾಸ ಇರುತ್ತಿಲ್ಲದಿದ್ದರೆ ಅದು ಬಹಳ ಕಷ್ಟಕರವಾದ ಸಂಗತಿಯಾಗುತ್ತಿತ್ತು ಆದರೆ ಅಬೂಬಕರ್ ಸಿದ್ದೀಖ್(ರ) ಅವರು ರಸೂಲುಲ್ಲಾಹ್(ಸ) ಅವರ ನೆರಳಾಗಿದ್ದರು. ಅಂದರೆ ನೆರಳು ಹೇಗೆ ಜೊಯೆಗಿರುತ್ತದೆಯೋ ಅದೇ ರೀತಿಯಲ್ಲಿ ಅಬೂಬಕರ್(ರ) ಅವರು ರಸೂಲುಲ್ಲಾಹ್(ಸ) ಅವರೊಂದಿಗೆ ಇರುತ್ತಿದ್ದರು. "ರಸೂಲುಲ್ಲಾಹ್(ಸ)ರವರ ನೈತಿಕತೆಯ ಪ್ರಭಾವವು ಅವರ(ರ) ಮೇಲೆ ಬೀರಿತು ಮತ್ತು ಅವರ ಹೃದಯವು ವಿಶ್ವಾಸದ ಪ್ರಕಾಶದಿಂದ ಪ್ರಕಾಶಮಾನವಾಗಿತ್ತು. ಆದ್ದರಿಂದಲೇ ಅವರು ಧೈರ್ಯ ಮತ್ತು ಸ್ಥೈರ್ಯವನ್ನು ತೋರಿಸಿದರು ಅಂತಹ ಉದಾಹರಣೆ ರಸೂಲುಲ್ಲಾಹ್(ಸ) ರವರ ನಂತರ ಸಿಗುವುದು ಕಷ್ಟ. ಅವರ ಜೀವನ ಇಸ್ಲಾಮಿನ ಜೀವನವಾಗಿತ್ತು. ಇದು ಎಂತಹ ಸಮಸ್ಯೆಯೆಂದರೆ ಇದರ ಬಗ್ಗೆ ಸುದೀರ್ಘ ಚರ್ಚೆಯ ಅಗತ್ಯವಿಲ್ಲ. ಆ ಕಾಲದ ಪರಿಸ್ಥಿತಿಗಳನ್ನು ಓದಿ ಮತ್ತು ನಂತರ ಅಬೂಬಕರ್(ರ) ಅವರ ಇಸ್ಲಾಮಿನ ಸೇವೆಯನ್ನು ನೋಡಿ ಅಂದಾಜು ಮಾಡಿ. ನಾನು ಸತ್ಯವಾಗಿ ಹೇಳುತ್ತೇನೆ ಅಬೂಬಕರ್ ಸಿದ್ದೀಕ್(ರ)ರವರು ಇಸ್ಲಾಮ್ ಧರ್ಮಕ್ಕೆ ಎರಡನೇ ಆದಮ್ ಆಗಿದ್ದಾರೆ. ಪ್ರವಾದಿ ಮುಹಮ್ಮದ್(ಸ) ಅವರ ನಂತರ ಅಬೂಬಕರ್(ರ) ಅಸ್ತಿತ್ವದಲ್ಲಿಲ್ಲದಿದ್ದರೆ, ಇಸ್ಲಾಂ ಧರ್ಮವೂ ಸಹ ಅಸ್ತಿತ್ವದಲ್ಲಿ ಇರುತ್ತಿರಲಿಲ್ಲ ಎಂದು ನಾನು ನಂಬುತ್ತೇನೆ. ಅಬೂಬಕರ್ ಸಿದ್ದೀಖ್(ರ) ಅವರು ಇಸ್ಲಾಂ ಧರ್ಮವನ್ನು ಮರುಸ್ಥಾಪಿಸಿದ್ದು ದೊಡ್ಡ ಉಪಕಾರವಾಗಿದೆ. ತಮ್ಮ ವಿಶ್ವಾಸದ ಶಕ್ತಿಯಿಂದ ಕಪಟವಿಶ್ವಾಸಿಗಳನ್ನು ಶಿಕ್ಷಿಸಿ ಶಾಂತಿಯನ್ನು ಸ್ಥಾಪಿಸಿದರು. ಅದೇ ರೀತಿ ಸರ್ವಶಕ್ತನಾದ ಅಲ್ಲಾಹನು ಹೇಳಿರುವನು ಮತ್ತು ವಾಗ್ದಾನ ಮಾಡಿರುವುದೇನೆಂದರೆ ನಾನು ನಿಜವಾದ ಖಲೀಫನ ಮೇಲೆ ಶಾಂತಿ ಸ್ಥಾಪಿಸುತ್ತೇನೆ. ಈ ಭವಿಷ್ಯವಾಣಿಯು ಹಝ್ರತ್ ಸಬೂಬಕರ್ ಸಿದ್ದಿಖ್(ರ) ಅವರ ಖಲೀಫತ್ ಕಾಲಘಟ್ಟದಲ್ಲಿ ನೆರವೇರಿತು ಮತ್ತು ಆಕಾಶ ಮತ್ತು ಭೂಮಿ ಪ್ರಾಯೋಗಿಕವಾಗಿ ಸಾಕ್ಷಿ ನೀಡಿತು. ಹಾಗಾಗಿ ಅದರಲ್ಲಿರುವ ಪ್ರಾಮಾಣಿಕತೆ ಈ ಮಟ್ಟದಲ್ಲಿ ಪರಿಪೂರ್ಣವಾಗಿರಬೇಕು ಎಂಬುದು ಸಿದ್ದಿಖ್ ಅವರ ವ್ಯಾಖ್ಯಾನವಾಗಿದೆ. ಉದಾಹರಣೆಗಳೊಂದಿಗೆ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲಾಗುತ್ತದೆ." (ಮಲ್‌ಫೂಝಾತ್, ಸಂಪುಟ–1, ಪುಟ–380–381, 1984 ಆವೃತ್ತಿ)

ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: "ರಸೂಲುಲ್ಲಾಹ್(ಸ) ರವರ ನಿಧನದ ನಂತರ, ಅವರ ಕಾಲದಲ್ಲಿ ಶರೀಅತ್ ಪೂರ್ಣಗೊಂಡಿದ್ದರೂ ಸಹ, ಸಾವಿರಾರು ಜನರು ಧರ್ಮಭ್ರಷ್ಟರಾದರು." ಧರ್ಮಭ್ರಷ್ಟತೆಯು ಎಷ್ಟು ಹಂತವನ್ನು ತಲುಪಿತು ಎಂದರೆ ಕೇವಲ ಎರಡು ಮಸೀದಿಗಳಲ್ಲಿ ನಮಾಝ್ ನಿರ್ವಹಿಸಲಾಗುತ್ತಿತ್ತು. ಉಳಿದಯಾವುದೇ ಮಸೀದಿಯಲ್ಲಿ ನಮಾಝ್ ನಿರ್ವಹಿಸುತ್ತಿರಲಿಲ್ಲ. ಇವರು ಸರ್ವಶಕ್ತನಾದ ಅಲ್ಲಾಹನು ಹೇಳಿರುವಂತೆ **ಖುಲ್ ಲಮ್ ತುಮಿನೂ ವ ಲಾಕಿನ್ ಖೂಲೂ ಅಸ್ಲಮ್‌ನಾ** (ಅಲ್‌ಹುಜರಾತ್:15) ಆದರೆ ಅಲ್ಲಾಹನು ಮತ್ತೆ ಇಸ್ಲಾಂ ಧರ್ಮವನ್ನು ಹಝ್ರತ್ ಅಬೂಬಕರ್(ರ) ರವರ ಮೂಲಕ ಸ್ಥಾಪಿಸಿದನು ಹೀಗೆ ಅವರು ಎರಡನೇಯ ಆದಮ್ ಆದರು.

ನನ್ನ ಪ್ರಕಾರ, ರಸೂಲುಲ್ಲಾಹ್(ಸ)ರವರ ನಂತರ ಉಮ್ಮತ್‌ನ ಮೇಳೆ ಹಝ್ರತ್ ಅಬೂಬಕರ್(ರ) ರವರ ದೊಡ್ಡ ಉಪಕಾರವನ್ನು ಮಾಡಿದ್ದಾರೆ, ಏಕೆಂದರೆ ಅವರ ಕಾಲದಲ್ಲಿ ನಾಲ್ಕು ಸುಳ್ಳು ಪ್ರವಾದಿಗಳು ಇದ್ದರು. ಒಂದು ಲಕ್ಷ ಜನರು ಮುಸೈಲ್ಮಾಗೆ ಸೇರಿದರು ಮತ್ತು ಅವರ ಪ್ರವಾದಿ ಅವರಲ್ಲಿಂದ ಅಗಲಿ ಹೊಗಿದ್ದರು ಆದರೆ ಅಂತಹ ತೊಂದರೆಗಳ ನಡುವೆಯೂ ಇಸ್ಲಾಂ ಧರ್ಮವು ತನ್ನ ಕೇಂದ್ರದಲ್ಲಿ ಸ್ಥಾಪಿಸಲಾಯಿತು. ಹಝ್ರತ್ ಉಮರ್(ರ) ಅವರನ್ನು ಸಿದ್ಧವಾಗಿರುವ ವಿಷಯವನ್ನು ಪಡೆದಿದ್ದರು. ನಂತರ ಅವರು ಅದನ್ನು ಹರಡುತ್ತಾ ಹೋದರು. ಇಸ್ಲಾಂ ಧರ್ಮವು ಅರೇಬಿಯಾದಿಂದ ಹೊರಬಂದು ಸಿರಿಯಾ ಮತ್ತು ರೋಮ್ ತನಕ ತಲುಪಿತು ಮತ್ತು ಈ ರಾಷ್ಟ್ರಗಳು ಮುಸ್ಲಿಮರ ಅಧೀನಕ್ಕೆ ಬಂದವು. ಹಝ್ರತ್ ಅಬೂಬಕರ್(ರ) ಅವರು ಅನುಭವಿಸಿದ ತೊಂದರೆಗಳನ್ನು ಹಝ್ರತ್ ಉಮರ್(ರ) ಅಥವಾ ಹಝ್ರತ್ ಉಸ್ಮಾನ್(ರ) ಅಥವಾ ಹಝ್ರತ್ ಅಲೀ(ರ)ರವು ಯಾರೂ ಅನುಭವಿಸಿಲ್ಲ." (ಮಲ್‌ಫೂಝಾತ್, ಸಂಪುಟ–8, ಪುಟ–277–278, 1984 ಆವೃತ್ತಿ)

ನಂತರ ಅವರು(ಅ) ಹೇಳಿದರು, "ಸರ್ವಶಕ್ತನಾದ ಅಲ್ಲಾಹನಿಂದ ಅವಮಾನಿಸಲ್ಪಟ್ಟವನೇ ಕೊನೆಯಲ್ಲಿ ಗೌರವ ಮತ್ತು ವೈಭವೀಕರಣಗೊಳ್ಳುವವನು. ಅವಮಾನವನ್ನು ಸ್ವೀಕರಿಸಿದವರಲ್ಲಿ ಮೊದಲಿಗರು ಮತ್ತು ಖಿಲಾಫತ್‌ನ ಪೀಠವನ್ನು ಏರಿದವರಲ್ಲಿ ಹಝ್ರತ್ ಅಬೂಬಕರ್(ರ) ಅವರನ್ನು ನೋಡಿ. (ಮಲ್‌ಫೂಝಾತ್, ಸಂಪುಟ–7, ಪುಟ–41, 1984 ಆವೃತ್ತಿ)

ಅವರು ಹೇಳಿದರು: "ಪ್ರಪಂಚದಲ್ಲಿ ಇದರ ಮಾರ್ಗದಲ್ಲಿ ವಧಿಸಲ್ಪಟ್ಟ ಜನರ ಉದಾಹರಣೆಗಳು ಕಡಿಮೆ ಪ್ರಮಾಣದಲ್ಲಿದಿಯೇ? ಹತ್ಯೆಗೀಡಾದವರ ಅಸ್ತಿತ್ವದ ಪುರಾವೆಗಳು ಭೂಮಿಯ ಕಣಕಣದಲ್ಲಿಯೂ ಕಂಡುಬರುತ್ತವೆ. ಅಲ್ಲಾಹನ ಮಾರ್ಗದಲ್ಲಿ ಅತಿ ಹೆಚ್ಚು ವ್ಯರ್ಥ ಮಾಡಿದ ಮತ್ತು ಹೆಚ್ಚು ನೀಡಲ್ಪಟ್ಟ ಹಝ್ರತ್ ಅಬೂಬಕರ್(ರ) ಅವರನ್ನು ನೋಡಿ. ಹೀಗೆ ಇಸ್ಲಾಮಿನ ಇತಿಹಾಸದಲ್ಲಿ ಮೊದಲ ಖಲೀಫ ಹಝ್ರತ್ ಅಬೂಬಕರ್(ರ) ಆದರು. ಅನೇಕ ಜನರು ನಾವು ಅಲ್ಲಾಹನ ಸನ್ನಿಧಿಯಲ್ಲಿ ಮರುಳಿ ತಮ್ಮನ್ನು ತಾವು ನಶಿಸಬೇಕೆಯೇ? ಎಂದು ಯೋಚಿಸುತ್ತಾರೆ ಆದರೆ ಇದು ಅವರಿಗೆ ಮೋಸ ಮಾಡುತ್ತಿದೆ. ಯಾರೂ ನಾಶವಾಗುವುದಿಲ್ಲ. ಹಝ್ರತ್ ಅಬೂಬಕರ್(ರ) ಅವರನ್ನು ನೋಡಿ. ಅವರು ಎಲ್ಲವನ್ನೂ ತೊರೆದರು ನಂತರ ಅವರೇ ಖಿಲಾಫತ್‌ನ ಪೀಠದ ಮೊದಲು ಕುಳಿತರು. (ಮಲ್‌ಫೂಝಾತ್, ಸಂಪುಟ–6, ಪುಟ–19, ಅಡಿಟಿಪ್ಪಣಿಗಳೊಂದಿಗೆ, 1984 ಆವೃತ್ತಿ)

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ರಸೂಲುಲ್ಲಾಹ್(ಸ) ಅವರ ನಿಧನದ ನಂತರ ಇಸ್ಲಾಮಿನ ಸ್ಥಿತಿ ಏನಾಗಿತ್ತು ಮತ್ತು ಹಝ್ರತ್ ಅಬೂಬಕರ್ ಸಿದ್ದೀಖ್(ರ) ಅವರ ಗುಣಲಕ್ಷಣಗಳನ್ನು ಉಲ್ಲೇಖಿಸುತ್ತ ಅವರು ಹೇಳಿದರು: "ನೀವು(ರ) ಅವರು ಪ್ರವಾದಿಯಾಗಿರಲಿಲ್ಲ, ಆದರೆ ನಿಮಲ್ಲಿ ಸಂದೇಶವಾಹಕರ ಶಕ್ತಿ ಇತ್ತು.

ನಿಮ್ಮ ಈ ಪ್ರಾಮಾಣಿಕತೆಯಿಂದಲೇ ಇಸ್ಲಾಮಿನ ಹೂದೋಟವು ತನ್ನ ಪೂರ್ಣ ವೈಭವಕ್ಕೆ ಮರಳಿತು ಮತ್ತು ಬಾಣಗಳ ಆಘಾತದ ನಂತರ ಹಚ್ಚ ಹಸಿರಾಯಿತು, ಮತ್ತು ಎಲ್ಲಾ ರೀತಿಯ ಆಹ್ಲಾದಕರ ಹೂವುಗಳು ಅರಳಿದವು ಮತ್ತು ಅದರ ಕೊಂಬೆಗಳು ಧೂಳಿನಿಂದ ತೆರವುಗೊಂಡವು, ಆದರೆ ಅದರ ಮೊದಲ ಸ್ಥಿತಿ ಅಳುತ್ತಾ ಸತ್ತ ವ್ಯಕ್ತಿಯಂತೆ ಆಗಿತ್ತು, ಮತ್ತು (ಅದರ ಸ್ಥಿತಿ) ಬಂಜರು ಭೂಮಿಯಂತಾಗಿತ್ತು ಮತ್ತು ಸಂಕಟದಿಂದ ಬಳಲುತ್ತಿರುವ ಜಾನುವಾರದಂತೆ ಇತ್ತು ಮತ್ತು ಮಾಂಸವನ್ನು ತುಂಡುಗಳಾಗಿ ಕತ್ತರಿಸಿ ಹಾಕಿದ ಪ್ರಾಣಿಯಂತೆ ಇತ್ತು. ಮತ್ತು (ಅದರ ಸ್ಥಿತಿ) ವಿವಿಧ ರೀತಿಯ ಕಷ್ಟಗಳಿಂದ ಪೀಡಿತನಾದ ಮತ್ತು ಮಧ್ಯಾಹ್ನದ ಬಿಸಿಲಿನ ಬೇಗೆಯಿಂದ ಸುಟ್ಟುಹೋದವನಂತಿತ್ತು. ನಂತರ ಸರ್ವಶಕ್ತನಾದ ಅಲ್ಲಾಹನು ಅವನನ್ನು ಈ ಎಲ್ಲಾ ದುಃಖಗಳಿಂದ ರಕ್ಷಿಸಿದನು ಮತ್ತು ಈ ಎಲ್ಲಾ ವಿಪತ್ತುಗಳಿಂದ ಅವನನ್ನು ಮುಕ್ತಗೊಳಿಸಿದನು ಮತ್ತು ಇಸ್ಲಾಂ ಧರ್ಮವು ಅದರ ವಿನಾಶ ಮತ್ತು ಮಾಲಿನ್ಯದ ನಂತರ ಅರಸರ ಹಾಗೂ ಜನಸಾಮಾನ್ಯರ ಇಮಾಮ್ ಆಗುವವರೆಗೆ ವಿಚಿತ್ರ, ವಿಚಿತ್ರ ಬೆಂಬಲಗಳೊಂದಿಗೆ ಸಹಾಯ ಮಾಡಿದನು. ಹೀಗೆ ಕಪಟಿಗಳ ನಾಲಿಗೆ ಮೂಕವಾಯಿತು ಮತ್ತು ಮುಮಿನರ್ ಮುಖಗಳು ಹೊಳೆಯಿತು. ಎಲ್ಲರೂ ತಮ್ಮ ಭಗವಂತನನ್ನು ಹೊಗಳಿದರು ಮತ್ತು ಸಿದ್ದಿಖ್(ರ) (ಅಕ್ಬರ್) ಅವರಿಗೆ ಕೃತಜ್ಞತೆಯನ್ನು ಅರ್ಪಿಸಿದರು. (ಸಿರ್ರುಲ್ ಖಿಲಾಫ (ಅನುವಾದ) ಪುಟ–52)

ನಂತರ ಅವರು(ಅ) ಹೇಳಿದರು: "ಹಝ್ರತ್ ಅಬೂಬಕರ್ ಸಿದ್ದೀಖ್(ರ) ರವರು ಇಸ್ಲಾಂ ಧರ್ಮವನ್ನು ದುಷ್ಟರ ದುಷ್ಟತನದಿಂದ ಬೀಳಲು ಬಯಸಿದ ಗೋಡೆಯಂತೆ ಕಂಡುಕೊಂಡರು. ಆಗ ಅಲ್ಲಾಹನು ಅದನ್ನು ನಿಮ್ಮ ಕೈಗಳಿಂದ ಕಬ್ಬಿಣದ ಗೋಡೆಗಳ ಬಲವಾದ ಕೋಟೆಯಂತೆ ಮಾಡಿದನು ಮತ್ತು ಅದರಲ್ಲಿ ಗುಲಾಮರಂತಹ ವಿಧೇಯ ಸೈನ್ಯವಿತ್ತು. ಹಾಗಾದರೆ ನೀವು ಯೋಚಿಸಿದರೆ, ಅದರಲ್ಲಿ ಏನಾದರೂ ಅನುಮಾನವಿದೆಯೇ? ಅಥವಾ ನೀವು ಇತರ ಗುಂಪುಗಳಿಂದ ಇದರ ಉದಾಹರಣೆಯನ್ನು ನೀಡಬಹುದೇ? (ಸಿರ್ರುಲ್ ಖಿಲಾಫ (ಅನುವಾದ), ಪುಟ–54)

ಮತ್ತು ಹಝ್ರತ್ ಮಸೀಹ್ ಮೌಊದ್(ಸ) ಹೇಳುತ್ತಾರೆ: "ಅಬೂಬಕರ್ ಸಿದ್ದೀಕ್(ರ)ರವರು ಪರಿಪೂರ್ಣ ಜ್ಞಾನವನ್ನು ಹೊಂದಿದ್ದ ಅಲ್ಲಾಹನನ್ನು ಸಂಪೂರ್ಣವಾಗಿ ಅರಿತುಕೊಂಡಿರುವ, ಬಹಳ ಸೌಮ್ಯ ಸ್ವಭಾವ ಮತ್ತು ಅತ್ಯಂತ ಕರುಣಾಮಯಿ ಸ್ವಭಾವವನ್ನು ಹೊಂದಿದ್ದರು ಮತ್ತು ವಿಶೇಯತೆ ಮತ್ತು ಬಡತನದ ಸ್ಥಿತಿಯಲ್ಲಿ ಜೀವನವನ್ನು ಸಾಗಿಸುತ್ತಿದ್ದರು. ಅವರು ತುಂಬಾ ಕ್ಷಮಿಸುವ ಮತ್ತು ಸಹಾನುಭೂತಿಯುಳ್ಳವರಾಗಿದ್ದರು.

ಅವರ ಹಣೆಯ ಪ್ರಕಾಶದಿಂದ ಅವರು ಗುರುತಿಸಲ್ಪಡುತ್ತಿದ್ದರು. ಅವರು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರೊಂದಿಗೆ ನಿಕಟ ಸಂಬಂಧವನ್ನು

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 19 January 2023, Issue No. 03

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಹೊಂದಿದ್ದರು ಮತ್ತು ಅವರ ಆತ್ಮವು ಖೈರುಲ್ ವರಾ(ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರ ಆತ್ಮದೊಂದಿಗೆ ಸಂಪರ್ಕ ಹೊಂದಿತ್ತು ಮತ್ತು ಅವರ ಯಜಮಾನ ಮತ್ತು ಅಲ್ಲಾಹನ ಪ್ರೀಯ ಅನುಯಾಯಿಯಾದ ಪ್ರವಾದಿ(ಸ) ಅವರನ್ನು ಆವರಿಸಿದ ಪ್ರಕಾಶವೇ ಅವರನ್ನು ಸಹ ಆವರಿಸಿತ್ತು ಮತ್ತು ನೀವು(ರ) ರಸೂಲುಲ್ಲಾಹ್(ಸ) ಅವರ ಮಹಾನ್ ಔದಾರ್ಯದ ಬೆಳಕಿನ ಸೂಕ್ಷ್ಮ ನೆರಳಿನಲ್ಲಿ ಮರೆಮಾಡಲ್ಪಟ್ಟಿದ್ದರು ಮತ್ತು ಪವಿತ್ರ ಖುರ್‌ಆನ್‌ನ ಪ್ರೀತಿಯಲ್ಲಿ ನೀವು ಎಲ್ಲ ಜನರಿಗಿಂತ ಗುರುತಿಸಲ್ಪಟ್ಟಿದ್ದರು ಮತ್ತು ಸಯ್ಯದ್–ಉಲ್–ರಸೂಲ್, ಮನುಕುಲದ ಹೆಮ್ಮೆ. ಮತ್ತು ಪರಲೋಕ ಮತ್ತು ದೈವಿಕ ರಹಸ್ಯಗಳು ನಿಮಗೆ ಬಹಿರಂಗವಾದಾಗ, ನೀವು ಎಲ್ಲಾ ಲೌಕಿಕ ಸಂಬಂಧಗಳನ್ನು ಮುರಿದು ದೈಹಿಕ ಬಾಂಧವ್ಯಗಳನ್ನು ಎಸೆದಿದ್ದರು ಮತ್ತು ನಿಮ್ಮ(ಸ) ಅವರ ಪ್ರೀತಿಯ ಬಣ್ಣದಲ್ಲಿ ನೀವು(ರ) ಬಣ್ಣವನ್ನು ಹೊಂದಿದ್ದರು ಮತ್ತು ಒಬ್ಬ ಅಪೇಕ್ಷಿತ ವ್ಯಕ್ತಿಯ ಸಲುವಾಗಿ ನೀವು(ರ) ಎಲ್ಲಾ ಆಸೆಗಳನ್ನು ತ್ಯಜಿಸಿದ್ದರು ಮತ್ತು ನಿಮ್ಮ(ರ) ಸಂಪೂರ್ಣ ಆತ್ಮವು ದೈಹಿಕ ಕಲ್ಮಶಗಳಿಂದ ಶುದ್ಧವಾಗಿದೆ. ಮತ್ತು ನಿಜವಾದ ಏಕ ದೇವರ ಬಣ್ಣದಲ್ಲಿ ಬಣ್ಣವಾಯಿತು. ಮತ್ತು ಅವರು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನ ಸಂಪ್ರೀತಿಯಲ್ಲಿ ಕಳೆದುಹೋದರು ಮತ್ತು ಅವರ ಎಲ್ಲಾ ರಕ್ತನಾಳಗಳಲ್ಲಿ ಮತ್ತು ಅವರ ಹೃದಯದ ಆಳದಲ್ಲಿ ಮತ್ತು ಅವರ ಅಸ್ತಿತ್ವದ ಪ್ರತಿಯೊಂದು ಕಣದಲ್ಲಿ ಮತ್ತು ಅವರ ಕಾರ್ಯಗಳು ಮತ್ತು ಮಾತುಗಳಲ್ಲಿ ಅಲ್ಲಾಹನ ನಿಜವಾದ ಪ್ರೀತಿಯನ್ನು ಹುಟ್ಟಿಸಿಕೊಂಡಾಗ ಮತ್ತು ಅವರ ಸಭಾಂತ್ಯದ ಸಮಯದಲ್ಲಿ ಅದರ ಪ್ರಕಾಶಗಳು ಪ್ರಕಾಶಮಾನವಾದಾಗ ಅವರನ್ನು 'ಸಿದ್ದೀಖ್' ಎಂದು ಕರೆಯಲಾಯಿತು ಮತ್ತು ಅವರಿಗೆ ಉತ್ತಮವಾದ ಉಲ್ಲಾಸಕರ ಮತ್ತು ಆಳವಾದ ಜ್ಞಾನವನ್ನು ಅಲ್ಲಾಹನಕಡೆಯಿಂದ ಹೇರಳವಾಗಿ ನೀಡಲಾಯಿತು. ಸಿದ್ಕ್ (ಪ್ರಾಮಾಣಿಕತೆ) ನಿಮ್ಮ ದೃಢವಾದ ಗುಣ ಹಾಗೂ ವಿಷೇಶ ಲಕ್ಷಣವಾಗಿತ್ತು. ಮತ್ತು ಈ ಪ್ರಾಮಾಣಿಕತೆಯ ಗುರುತುಗಳು ಮತ್ತು ಪ್ರಕಾಶವು ನಿಮ್ಮಲ್ಲಿ ಮತ್ತು ನಿಮ್ಮ ಪ್ರತಿಯೊಂದು ಮಾತು ಮತ್ತು ಕಾರ್ಯ, ಚಲನೆಗಳಲ್ಲಿ, ಇಂದ್ರಿಯಗಳಲ್ಲಿ ಮತ್ತು ಉಸಿರಾಟದಲ್ಲಿ ಬಹಿರಂಗಗೊಂಡಿವೆ. ಭೂಮಿ ಮತ್ತು ಆಕಾಶದ ಪರಿಪಾಲಕನಾದ ಅಲ್ಲಾಹನ ಕಡೆಯಿಂದ ಅನುಗ್ರಹಿಸಿದವರ ಗುಂಪಿನಲ್ಲಿ ನಿಮ್ಮನ್ನು ಸೇರಿಸಲಾಯಿತು. ಅವರು ಪ್ರವಾದಿತ್ವದ ಪುಸ್ತಕದ ಸಂಕ್ಷಿಪ್ತ ಆವೃತ್ತಿಯಾಗಿದ್ದರು ಮತ್ತು ಅವರು ಶ್ರೇಷ್ಠತೆಯ ಮಾಸ್ಟರ್ ಮತ್ತು ಯುವಕರ ಇಮಾಮ್ ಆಗಿದ್ದರು ಮತ್ತು ಅವರು ಪ್ರವಾದಿಗಳ ಪಾತ್ರವನ್ನು ಹೊಂದಿರುವ ವಿಶಿಷ್ಟ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು."

(ಸಿರ್‍ರುಲ್ ಖಿಲಾಫ (ಅನುವಾದ), ಪುಟ–101–104)

ಇವರಾಗಿತ್ತು ಹಝ್ರತ್ ಅಬೂಬಕರ್ ಸಿದ್ದೀಖ್(ರ). ಅವರು ಅಲ್ಲಾಹನ ಮತ್ತು ಹಝ್ರತ್ ಪೈಗಂಬರ್(ಸ)ರ ಪ್ರೇಮದಲ್ಲಿ ಸ್ವತಃ ಲೀನರಾಗಿದ್ದರು. ಬದರೀ ಸಹಾಬಿಯರ ಪ್ರಸ್ತಾಪದಲ್ಲಿ ಇದು ಕೊನೆಯ ಪ್ರಸ್ತಾಪವಾಗಿತ್ತು. ಅದೀಗ ಮುಕ್ತಾಯಗೊಂಡಿದೆ. ಆರಂಭದಲ್ಲಿ ವಿವರಿಸಲಾದ ಸಹಾಬಿಯರ ಪ್ರಸ್ತಾಪದಲ್ಲಿ ಕೆಲವರ ಕೆಲವು ವಿವರಣೆಗಳು ನಂತರ ಲಭಿಸಿದುವು. ಅದನ್ನು ಯಾವಾಗಲಾದರೂ ಸಂದರ್ಭ ಲಭಿಸಿದರೆ ವಿವರಿಸುವೆನು. ಇಲ್ಲದಿದ್ದರೆ ಬದರೀ ಸಹಾಬರ ಕುರಿತು ಪುಸ್ತಕ ರೂಪದಲ್ಲಿ ಪ್ರಕಾಶನಗೊಳ್ಳುವಾಗ ಅದರ ವಿವರಣೆ ಬರುವುದು.

ಅಲ್ಲಾಹನು ನಮಗೆ ಈ ಸಹಾಬಿಯರ ಹೆಜ್ಜೆ ಗುರುತುಗಳ ಮೇಲೆ ನಡೆಯಲು ಸೌಭಾಗ್ಯ ನೀಡಲಿ. ಅವರ ಜೀವನ ನಮ್ಮನ್ನು ಎಲ್ಲಡೆ ನಕ್ಷತ್ರಗಳ ಹಾಗೆ ದಾರಿ ತೋರಿಸುವಂತಾಗಲಿ. ಅವರು ಸ್ಥಾಪಿಸಿದ ಮಟ್ಟವನ್ನು ನಾವು ಸಹ ಸ್ಥಾಪಿಸಲು ಪ್ರಯತ್ನಿಸುವವರಾಗಲಿ.

...*...*...*...

*(ಪುಟ ಸಂಖ್ಯೆ 06ರ ಉಳಿದ ಭಾಗ)*

ಅನೇಕ ಸುಳ್ಳುಗಾರರು ಪ್ರವಾದಿತ್ವವನ್ನು ಪ್ರತಿಪಾದಿಸಿದ ಸಮಯದಲ್ಲಿ ಅವರನ್ನು(ರ) ಖಲೀಫರನ್ನಾಗಿ ಮಾಡಲಾಯಿತು. ತದನಂತರ ಅವರು ದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಪುನಃಸ್ಥಾಪಿಸುವವರೆಗೆ ಮತ್ತು ದೇಶದ್ರೋಹಿಗಳ ಗುಂಪನ್ನು ಸೋಲಿಸುವವರೆಗೆ ಅವರೊಂದಿಗೆ ಹೋರಾಡಿದರು.

ನಂತರ ಅವರು(ರ) ಮರಣಹೊಂದಿದರು ಮತ್ತು ರಸೂಲುಲ್ಲಾಹ್(ಸ) ಅವರ ಖಬರ್‌ನ ಪಕ್ಕದಲ್ಲಿ ಖಬರ್ ಮಾಡಲಾಯಿತು. ಹೀಗೆ ಅವರು(ರ) ಅಲ್ಲಾಹನ ಪ್ರೀತಿಯ ರಸೂಲುಲ್(ಸ) ಅವರಿಂದ ಬೇರ್ಪಡಿಸಲಿಲ್ಲ. ಜೀವನದಲ್ಲಿ ಆಗಲಿ ಅಥವಾ ಸಾವಿನ ನಂತರವೂ ಆಗಲಿ ಬೇರ್ಪಡಲಿಲ್ಲ. ಕೆಲವು ದಿನಗಳ ಪ್ರತ್ಯೇಕತೆಯ ನಂತರ ಮತ್ತೆ ಒಂದಾದರು ಮತ್ತು ಪ್ರೀತಿಯ ಉಡುಗೊರೆಯನ್ನು ನೀಡಿದರು. ಅತ್ಯಂತ ಆಶ್ಚರ್ಯಕರ ಸಂಗತಿಯೆಂದರೆ, ಅವರ ಪ್ರಕಾರ (ಶಿಯಾಗಳು) ಅಂದರೆ, ಆಕ್ಷೇಪಿಸುವವರು, "ಅಲ್ಲಾಹನು ಪ್ರವಾದಿಯ ದೇಗುಲದ ಸಮಾಧಿಯನ್ನು ಖಾತಮನ್ನಬೀಈನ್ ಮತ್ತು ಇಬ್ಬರು ಅವಿಶ್ವಾಸಿಗಳು, ದರೋಡೆಕೋರರು ಮತ್ತು ದ್ರೋಹಿಗಳ ನಡುವೆ ಹಂಚಿಕೊಂಡಿದ್ದಾನೆ." ಮತ್ತು ತನ್ನ ನಬಿ ಹಾಗೂ ಪ್ರೀತಿಪಾತ್ರರನ್ನು(ಸ) ಅವರಿಬ್ಬರ ನೆರೆಯ (ಅಬೂಬಕರ್(ರ) ಹಾಗೂ ಉಮರ್(ರ)) ಹಿಂಸೆಯಿಂದ ಅವರನ್ನು ಉಳಿಸಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಅಲ್ಲಾಹನು ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಅವರನ್ನು(ಸ) ಹಿಂಸಿಸುತ್ತಿರುವ ಇಬ್ಬರನ್ನೂ ಸಹಚರರನ್ನಾಗಿ ಮಾಡಿದನು ಮತ್ತು (ನೌಝುಬಿಲ್ಲಾಹ್) ರಸೂಲುಲ್ಲಾಹ್(ಸ) ಅವರನ್ನು ಈ ಎರಡು ಅಶುದ್ಧರಿಂದ ದೂರವಿಡಲಿಲ್ಲ. ನಮ್ಮ ಪ್ರಭು ಅವರು ಹೇಳುವದರಿಂದ ಮುಕ್ತನಾಗಿದ್ದಾನೆ." ಇದನ್ನು ಹೇಳುವವರು ತಪ್ಪು. ಅವರು ಹೇಳಿರುವ ಹಾಗಿಲ್ಲ ಬದಲಾಗಿ, ಅಲ್ಲಾಹನು ಈ ಇಬ್ಬರು ಧರ್ಮನಿಷ್ಠರನ್ನು ಒಟ್ಟುಗೂಡಿಸಿದನು" ಅಂದರೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಅವರನ್ನು, ಈ ಇಬ್ಬರು ಧರ್ಮನಿಷ್ಠರು ಪುಣ್ಯಾತ್ಮರ ಇಮಾಮ್(ಸ) ಅವರೊಂದಿಗೆ ಸೇರಿಸಿದನು. ನಿಶ್ಚಯವಾಗಿಯೂ ಅದರಲ್ಲಿ ತಿಳುವಳಿಕೆಯುಳ್ಳ ಜನರಿಗೆ ಸಂಕೇತಗಳಿವೆ." (ಸಿರ್‍ರುಲ್ ಖಿಲಾಪ ಅನುವಾದ, ಪುಟ–72–73)

ನಂತರ ಅವರು ಅಲೈಹಿಸ್ಸಲಾಮ್ ಮತಾಂಧ ಶಿಯಾಗಳ ಬಗ್ಗೆ ಹೇಳುತ್ತಾರೆ: "ಮತಾಂಧ ಶಿಯಾಗಳನ್ನು ಕೇಳಿದರೆ, ವಯಸ್ಕ ಪುರುಷರಲ್ಲಿ ವಿರೋಧಿಸುವ ಅವಿಶ್ವಾಸಿಗಳ ಗುಂಪಿನಿಂದ ಇಸ್ಲಾಂಗೆ ಬಂದ ಮೊದಲ ವ್ಯಕ್ತಿ ಯಾರು? ಎಂದು ಅದಕ್ಕೆ ಅವರು ಹಝ್ರತ್ ಅಬೂಬಕರ್(ರ) ಎಂದು ಹೇಳುವುದನ್ನು ಬಿಟ್ಟು ಬೇರೆ ದಾರಿಯಿಲ್ಲ.

ಹಝ್ರತ್ ಖಾತಮನ್ನಬೀಈನ್(ಸ) ಅವರೊಂದಿಗೆ ಮೊದಲು ವಲಸೆ ಬಂದವರು ಮತ್ತು ಎಲ್ಲಾ ಸಂಬಂಧಗಳನ್ನು ತೊರೆದು ಪ್ರವಾದಿ(ಸ) ಹೋದ ಸ್ಥಳಕ್ಕೆ ಹೋದವರು ಯಾರು ಎಂದು ಕೇಳಿದಾಗ, ಅವರಿಗೆ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಎಂದು ಹೇಳುವುದನ್ನು ಬಿಟ್ಟು ಬೇರೆ ದಾರಿಯಿಲ್ಲ. ಮತ್ತು ಅವರ ಪ್ರಕಾರ ಖಲೀಫಾ ಮಾಡಿದವರಲ್ಲಿ ಮೊದಲಿಗರು ಯಾರು? ಎಂದು ಕೇಳಿದರೆ ಅವರಿಗೆ ಅಬೂಬಕರ್ ಎಂದು ಹೇಳುವುದನ್ನು ಬಿಟ್ಟು ಅವರಿಗೆ ಬೇರೆ ದಾರಿಯೇ ಇರುವುದಿಲ್ಲ. ನಂತರ ದೇಶದಲ್ಲಿ ಪ್ರಕಟಣೆಗಾಗಿ ಪವಿತ್ರ ಖುರ್‌ಆನ್ ಅನ್ನು ಸಂಗ್ರಹಿಸಿದ ವ್ಯಕ್ತಿ ಯಾರು? ಎಂದು ಕೇಳಿದರೆ ಅವರು (ಹಝ್ರತ್) ಅಬೂಬಕರ್(ರ) ಎಂದು ಅನಿವಾರ್ಯವಾಗಿ ಹೇಳುವರು. ಮತ್ತೆ ಯಾವಾಗ ಖೈರುಲ್ ಮುರ್ಸಲೀನ್ ಮತ್ತು ಸಯ್ಯದ್ ಅಲ್–ಮಸೂಮೀನ್ ಅವರ ಪಕ್ಕದಲ್ಲಿ ಯಾರನ್ನು ದಫನ್ ಮಾಡಲಾಗಿದೆ ಎಂದು ಕೇಳಿದರೆ, ಅವರು ಅಬೂಬಕರ್(ರ) ಮತ್ತು ಉಮರ್(ರ) ಎಂದು ಹೇಳುವುದನ್ನು ಬಿಟ್ಟು ಬೇರೆ ದಾರಿಯಿಲ್ಲ. ಆದ್ದರಿಂದ ಪ್ರತಿ ಪುಣ್ಯವನ್ನು ನಾಸ್ತಿಕರಿಗೆ ಮತ್ತು ಕಪಟಿಗಳಿಗೆ ನೀಡಲಾಯಿತು ಮತ್ತು ಇಸ್ಲಾಮಿನ ಎಲ್ಲಾ ಅನುಗ್ರಹಗಳು ಶತ್ರುಗಳ ಕೈಯಿಂದ ಬಹಿರಂಗಗೊಂಡವು ಎಂಬುದು ಎಷ್ಟು ಆಶ್ಚರ್ಯಕರವಾಗಿದೆ.

ಇಸ್ಲಾಂ ಧರ್ಮಕ್ಕೆ ಮೊದಲಿಗನಾದ ವ್ಯಕ್ತಿ ನಾಸ್ತಿಕ ಮತ್ತು ಸುಳ್ಳುಗಾರ ಎಂದು ಯಾವುದೇ ವಿಶ್ವಾಸಿ ಭಾವಿಸಬಹುದೇ? ನಂತರ ಫಖ್ರ್ ಅಲ್–ಮರ್ಸಲಿನ್ ಜೊತೆ ಮೊದಲು ವಲಸೆ ಬಂದವನು ನಂಬಿಕೆಯಿಲ್ಲದ ಮತ್ತು ಧರ್ಮಭ್ರಷ್ಟನಾಗಿದ್ದನೇ? ಈ ರೀತಿಯಾಗಿ, ಎಲ್ಲಾ ಅನುಗ್ರಹಗಳನ್ನು ಅವಿಶ್ವಾಸಿಗಳು ಪಡೆದರು. ಸಯ್ಯದ್ ಅಲ್–ಅಬ್ರಾರ್ ಅವರ ಸಮಾಧಿಯ ನೆರೆಹೊರೆ ಕೂಡ!" (ಸಿರ್‍ರುಲ್ ಖಿಲಾಫ ಅನುವಾದ, ಪುಟ–75–76)

ನಂತರ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸತ್ಯವೇನೆಂದರೆ, ಶ್ರೇಷ್ಠ ಸಹಾಬಿಯರಾದ ಅಬೂಬಕರ್ ಸಿದ್ದೀಖ್(ರ) ಮತ್ತು ಉಮರ್ ಫಾರೂಖ್(ರ) ಇಬ್ಬರೂ ಕರ್ತವ್ಯ ನಿರ್ವಹಣೆಯಲ್ಲಿ ಎಂದಿಗೂ ಆಲಸಿಗರಾಗಿರಲಿಲ್ಲ. ಅವರು ದೇವಭಕ್ತಿಯನ್ನು ತಮ್ಮ ಮಾರ್ಗವನ್ನಾಗಿ ಮತ್ತು ನೀತಿಯನ್ನು ತಮ್ಮ ಗುರಿಯನ್ನಾಗಿ ಮಾಡಿದ್ದರು. ಅವರಿಬ್ಬರ ಸತ್ಯಸಂಧತೆ ಮತ್ತು ನಿಷ್ಠೆಯ ವೈಭವ ಎಷ್ಟು ಉನ್ನತವಾಗಿತ್ತು! ಇಬ್ಬರೂ ಎಷ್ಟು ಅನುಗ್ರಹೀತ ಖಬರಿನಲ್ಲಿ ದಫನ್ ಆದರು ಎಂದರೆ, ಮೂಸಾ(ಅ) ಮತ್ತು ಈಸಾ(ಅ) ಜೀವಂತರಾಗಿರುತ್ತಿದ್ದರೆ, ನೂರುಪಟ್ಟು ಅಭಿಲಾಷೆಯೊಂದಿಗೆ ಅಲ್ಲಿ ದಫನ್ ಆಗಲು ಬಯಸುತ್ತಿದ್ದರು. (ಸಿರ್‍ರುಲ್ ಖಿಲಾಫ ಅನುವಾದ, ಪುಟ–77–78, ರೂಹಾನಿ ಖಝಾಈನ್, ಸಂಪುಟ–8, ಪುಟ–345–346)

ಕೆಲವು ಭಾಗಗಳು ಮತ್ತು ಕೆಲವು ಉಲ್ಲೇಖಗಳು ಬಾಕಿಯಿವೆ. ಅವುಗಳನ್ನು ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು ಇನ್‌ಶಾ ಅಲ್ಲಾಹ್.

...*...*...*...

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.